ಆಗಸ್ಟ್ 2024

₹ 15/-

# ಯುಗರಶ್ಮಿ

ತ್ರೈಮಾಸಿಕ




- ಸಾಮಾಜಿಕ – ಆರ್ಥಿಕ ಶಾಂತಿ
- ಜಗತ್ತಿನ ವಿಷಮ ಪರಿಸ್ಥಿತಿ – ಶಾಂತಿ ಸ್ಥಾಪಿಸಲು ರೂಪರೇಖೆ
- ಜಾಗತಿಕ ಶಾಂತಿ – ಇಸ್ಲಾಮಿನ ಬೋಧನೆಗಳು
- ನೀನು ಮಾಡು – ಮಾಡಬೇಡ

"ಆಕಾಶಗಳ ಮತ್ತು ಭೂಮಿಯ ಆಧಿಪತ್ಯ ಅಲ್ಲಾಹನಿಗೆ ಸೇರಿದೆ. ತಾನಿಚ್ಛಿಸುವವರಿಗೆ ಅವನು ಕ್ಷಮೆ ನೀಡುತ್ತಾನೆ; ತಾನಿಚ್ಛಿಸುವವರಿಗೆ ಅವನು ಶಿಕ್ಷೆಯನ್ನೂ ಕೊಡುತ್ತಾನೆ. ಅಲ್ಲಾಹನು ಅತ್ಯಂತ ಕ್ಷಮಾಶೀಲನೂ ಕಾರುಣ್ಯನಿಧಿಯೂ ಆಗಿದ್ದಾನೆ."

– ಪವಿತ್ರ ಖುರ್‌ಆನ್ (48: 15)

**ವಿಷಯ ಸೂಚಿಕೆ** **ಪುಟ**

# ಯುಗರಶ್ಮಿ


- ಮೈತ್ರಿ ಸಂದೇಶ 01
- ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು 02
- ಸಾಮಾಜಿಕ – ಆರ್ಥಿಕ ಶಾಂತಿ 03
- ಇಂದಿನ ಕಾಲದಲ್ಲಿ ಜಗತ್ತಿನ ವಿಷಮ ಪರಿಸ್ಥಿತಿಯಲ್ಲಿ ಶಾಂತಿಯನ್ನು ಸ್ಥಾಪಿಸಲು ಉಪಯುಕ್ತವಾದ ರೂಪರೇಖೆ ಯಾವುದು ? 07
- ಜಾಗತಿಕ ಶಾಂತಿ ಇಸ್ಲಾಮಿನ ಬೋಧನೆಗಳ ಬೆಳಕಿನಲ್ಲಿ 14
- ನೀನು ಮಾಡು – ಮಾಡಬೇಡ 21
- ನೋಬೆಲ್ ಪ್ರಶಸ್ತಿ ವಿಜೇತರಾದ ಪಾಕಿಸ್ಥಾನಿ ವಿಜ್ಞಾನಿ ತನ್ನ ಗುರುವಾಗಿದ್ದ ಭಾರತೀಯ ಅಧ್ಯಾಪಕನನ್ನು ಗೌರವಿಸಲು ಆಗಮಿಸಿದಾಗ 24
- ಕವನ – ಆಹ್ವಾನ ದೇವನ ಕಡೆಗೆ 25
- ವಾರ್ಷಿಕ ಇಜ್ತಿಮಾ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಮತ್ತು ಅತ್‌ಫಾಲುಲ್ ಅಹ್ಮದಿಯಾ –ಬೆಂಗಳೂರು ಜಿಲ್ಲೆ 26
- ಅಹ್ಮದಿಯಾ ಸಂಘಟನೆಯ ಜಿಲ್ಲಾ ಮಹಿಳಾ ಘಟಕದಿಂದ ಸರ್ವಧರ್ಮ ಸಮ್ಮೇಳನ 27
- ಓದಿದ್ದು : 28

•ಡೆಂಗ್ಯೂ ಜ್ವರ • ಮಾಡದ ತಪ್ಪಿಗೆ 37 ವರ್ಷ ಜೈಲು • ಪೋಷಕರಿಂದಲೇ ಮಕ್ಕಳ ಹತ್ಯೆ • ಕಿಡ್ನಿಯಿಂದ 418 ಕಲ್ಲುಗಳು • ಜಗತ್ತಿನಾದ್ಯಂತ ಪ್ರತಿದಿನ 100 ಕೋಟಿ ಊಟಗಳು ವ್ಯರ್ಥ • ಕುಟುಂಬದಲ್ಲಿ ನಾಲ್ಕು ಮಕ್ಕಳು ಕಡ್ಡಾಯ • 1ಲೀ. ಕತ್ತೆ ಹಾಲಿಗೆ 5000ರೂ ! • ರೊಟ್ಟಿ ಕೇಳಿದ ಯುವಕನ ಮರ್ಮಾಂಗಕ್ಕೆ ಒದ್ದು ಹತ್ಯೆ • ಭಿಕ್ಷೆಬೇಡಿ 1 ಲಕ್ಷ ರೂ. ಅನ್ನದಾನಕ್ಕೆ ! • ಶಸ್ತ್ರಕ್ರಿಯೆ ನಡೆಸಿ ದೇಹದಲ್ಲೇ ಬಿಟ್ಟ ಬಟ್ಟೆ • ಕೈ ಬೆರಳಿನ ಬದಲು ನಾಲಿಗೆಗೆ ಶಸ್ತ್ರ ಚಿಕಿತ್ಸೆ ! • ಅಬುಧಾಬಿಯಲ್ಲಿ ಬಿಯರ್ ಅಂಗಡಿ ! •ಸ್ವಿಮ್‌ವೇರ್ ಫ್ಯಾಶನ್ ಶೋ : ಸೌದಿಯಿಂದ ಅನುಮತಿ ! • ಎರಡು 10 ರೂ. ನೋಟುಗಳು 2.75 ಲಕ್ಷ ರೂ.ಗೆ ಹರಾಜು ? • ದೆವ್ವ ಬಿಡಿಸುವ ನೆಪ : ಬಾಲಕಿ ಮೇಲೆ ಅತ್ಯಾಚಾರ • ಸ್ನಾತಕೋತ್ತರ ಪರೀಕ್ಷೆ ಬರೆದ 83ರ ವೃದ್ಧ ! • ಗರ್ಭಪಾತಕ್ಕೆ ಯುಎಇ ಅನುಮತಿ • ಅಲ್ಪ ಸಂಖ್ಯಾಕರು ಸುರಕ್ಷಿತರಲ್ಲ : ಪಾಕಿಸ್ಥಾನ • ಕೆಲಸ ಕೊಡದೆ 20 ವರ್ಷ ಸಂಬಳ • ಅವಳಿ ಹೆಣ್ಣು ಶಿಶು ಜನನ : ಮಕ್ಕಳಿಬ್ಬರನ್ನೂ ಕೊಂದ ತಂದೆ ! • ಹಾಡು ಕೇಳಿದ ಯುವಕನ ಶಿರಚ್ಛೇದ ! • ಕೆಲಸದ ಒತ್ತಡಕ್ಕೆ ಬೇಸತ್ತು ರೋಬೋಟ್ ಆತ್ಮಹತ್ಯೆ ! • ದುಬಾರಿ ಈ ಕೀಟ : ಬೆಲೆ 75 ಲಕ್ಷ ರೂ. ! •ಶಿಕ್ಷಕನನ್ನೇ ಇರಿದು ಕೊಂದ ವಿದ್ಯಾರ್ಥಿ ! •ನಂಬರ್ ಪ್ಲೇಟ್ 23.4 ಲಕ್ಷಕ್ಕೆ ಹರಾಜು ! •ಮದ್ವೆ ಇನ್ವಿಟೇಶನ್ ಬೆಲೆ ! • ನಾಯಿಗಳ ರೇಪ್ •ಏರ್‌ಪೋರ್ಟ್ ಲೋಡರ್ ಹುದ್ದೆಗೆ ನೂಕುನುಗ್ಗಲು !

- ಪ್ರತಿಭೆಗಳು 38
- ಸಂಪಾದಕರಿಗೆ ಪತ್ರ 38
- ಅಹ್ಮದಿಯಾ ಜಮಾಅತಿನ ಪ್ರಗತಿ 39


ಮುಖಪುಟ ಚಿತ್ರ : ಮಸ್ಜಿದ್ ಸಾದಿಖ್ – 30.08.2023ರಂದು ಅಹ್ಮದಿಯಾ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹಿಬರು ಜರ್ಮನಿಯ ಕರ್ಬೇನ್‌ನಲ್ಲಿ ಉದ್ಘಾಟಿಸಿದರು.


ಬಿಡಿ ಪ್ರತಿ : ರೂ. 15/– ವಾರ್ಷಿಕ ಚಂದಾ : ರೂ. 60/– ಅಂಚೆ ಮೂಲಕ : ರೂ. 70/–



ವಿಳಾಸ : 10–23–1008/1, 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು – 575001.
ಸಂಪರ್ಕಿಸಿರಿ : 9900410789

بسم الله الرحمن الرحيم

نحمده ونصلي على رسوله الكريم

# ಯುಗರಶ್ಮಿ


*ಸಂಪಾದಕ : ಮುಹಮ್ಮದ್ ಯೂಸುಫ್*

**ಆಗಸ್ಟ್ 2024**

**ಆರಂಭ : 1975** | **ಸಂಪುಟ : 40** | **ಝುಹೂರ್ : 1403 ಹಿಜರೀ ಶಮ್ಸೀ** | **ಸಂಚಿಕೆ : 3**


## ಮೈತ್ರಿ ಸಂದೇಶ

ಸ್ನೇಹಿತರೇ, ಹಿಂದುಗಳೂ ಮುಸ್ಲಿಮರೂ ಆದ ನಾವೆಲ್ಲರೂ ನೂರಾರು ವಿಶ್ವಾಸಾಭಿಪ್ರಾಯ ವೈಪರೀತ್ಯಗಳಿಂದ ಕೂಡಿದವರಾಗಿದ್ದರೂ ಈ ಪ್ರಪಂಚದ ಸೃಷ್ಟಿಕರ್ತನೂ ಪ್ರಭುವೂ ಆದ ಪರಮಾತ್ಮನಲ್ಲಿ ವಿಶ್ವಾಸವಿಡುವ ವಿಷಯದಲ್ಲಿ ಒಂದಾಗುತ್ತೇವೆ. ಹಾಗೆಯೇ, ನಾವೆಲ್ಲರೂ ಮನುಷ್ಯರೆಂದು ಮಾತ್ರವಲ್ಲ, ಒಂದೇ ದೇಶದಲ್ಲಿ ವಾಸಿಸುವುದರಿಂದಲೂ ಪರಸ್ಪರ ನೆರೆಕರೆಯವರೆಂಬ ನೆಲೆಯಲ್ಲಿಯೂ ಸಾಮೂಹಿಕ ಅಭಿವೃದ್ಧಿಗಳಿಗಾಗಿ ಒಂದಾಗುತ್ತೇವೆ. ಆದುದರಿಂದ ನಾವು ನಿಷ್ಕಳಂಕತೆಯಿಂದಲೂ ಸದುದ್ದೇಶದಿಂದಲೂ ಪರಸ್ಪರ ಮಿತ್ರರಂತೆ ವರ್ತಿಸಿ ಧಾರ್ಮಿಕವೂ ಲೌಕಿಕವೂ ಆದ ಎಲ್ಲ ವೈಷಮ್ಯಗಳಲ್ಲಿ ಅನ್ಯೋನ್ಯ ಸಹಾನುಭೂತಿಯನ್ನು ಪ್ರಕಟಿಸಿ, ಒಂದೇ ಶರೀರದ ಅವಯವಗಳಂತೆ ಪರಸ್ಪರ ಸಹಕರಿಸಬೇಕಾದದ್ದು ನಮ್ಮ ಕರ್ತವ್ಯವಾಗಿದೆ.

ಪ್ರಿಯ ದೇಶ ಬಾಂಧವರೇ, ಸಹಾನುಭೂತಿಯ ಉಪದೇಶವನ್ನೀಯದ ಧರ್ಮವು ಯಥಾರ್ಥವಾದ ಧರ್ಮವಲ್ಲ. ಹಾಗೆಯೇ ಸಹಾನುಭೂತಿಯನ್ನು ತೋರಿಸದ ಮನುಷ್ಯನು ಮನುಷ್ಯನೆಂದು ಕರೆಯಲ್ಪಡಲು ಅರ್ಹನಲ್ಲ. ಪರಮಾತ್ಮನು ತನ್ನ ಅನುಗ್ರಹವನ್ನು ಪ್ರತಿಯೊಂದು ಜಾತಿಯವರಿಗೆ ನೀಡಿರುವನು. ಆರ್ಯಾವರ್ತದ ಪೂರ್ವಿಕರಿಗೆ ಅವನು ಏನೆಲ್ಲ ಶಕ್ತಿಗಳನ್ನೂ ಬೋಧನೆಗಳನ್ನೂ ಇತ್ತಿದ್ದನೋ ಅಂತಹ ಶಕ್ತಿಗಳನ್ನೂ ಬೋಧನೆಗಳನ್ನೂ ಅವನು ಅರಬೀಯರಿಗೂ ಪಾರ್ಸಿಯರಿಗೂ ಸಿರಿಯಾದವರಿಗೂ ಚೀನೀಯರಿಗೂ ಜಪಾನೀಯರಿಗೂ ಇತ್ತಿರುವನು. ಸಕಲ ಜನಾಂಗಗಳಿಗೂ ದೇವನ ಭೂಮಿಯು ಒಂದು ವಿಶಾಲವಾದ ಪ್ರಾಂಗಣದಂತಿದೆ. ಹಾಗೆಯೇ ಎಲ್ಲರಿಗೂ ಸೂರ್ಯ, ಚಂದ್ರ, ನಕ್ಷತ್ರಾದಿಗಳು ಪ್ರಕಾಶವನ್ನು ಕೊಡುತ್ತವೆಯಲ್ಲದೆ ಅವುಗಳು ಮಾಡಬೇಕೆಂದು ದೇವನು ನಿಶ್ಚಯಿಸಿದ ಮತ್ತಿತರ ಕಾರ್ಯಗಳನ್ನು ಸಹ ಅವು ನಿರ್ವಹಿಸುತ್ತವೆ. ಎಲ್ಲ ಜಾತಿಯವರೂ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ವಾಯು, ನೀರು, ಬೆಂಕಿ, ಮಣ್ಣು ಎಂಬಿತ್ಯಾದಿಗಳಿಂದ ಪ್ರಯೋಜನವನ್ನು ಪಡೆಯುತ್ತಾರೆ. ಹಾಗೆಯೇ ಭೂಮಿಯ ಉತ್ಪತ್ತಿಗಳಾದ ಧಾನ್ಯಗಳನ್ನೂ ಮೂಲಿಕೆಗಳನ್ನೂ ಫಲಪುಷ್ಪಾದಿಗಳನ್ನೂ ತಮ್ಮ ಪ್ರಯೋಜನಕ್ಕಾಗಿ ಉಪಯೋಗಿಸುತ್ತಾರೆ. ಮನುಷ್ಯ ಕುಲಕ್ಕೆ ಒಳಿತನ್ನುಂಟುಮಾಡಬೇಕೆಂದೂ ಸಂಕುಚಿತ ಮನೋಭಾವವಾಗಲೀ ಅಸಹಾನುಭೂತಿಯಾಗಲೀ ನಮ್ಮಲ್ಲಿ ಇರಬಾರದೆಂದೂ ಪರಮಾತ್ಮನ ಈ ವಿಶಾಲವಾದ ಉದಾರತೆ ನಮಗೆ ಕಲಿಸಿಕೊಡುತ್ತದೆ.

→

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

## ಪೈಗಂಬರರ(ಸ) ಸ್ವಭಾವ ಚಿತ್ರ

### ಹಝ್ರತ್ ಅಲಿ(ರ) ಪೈಗಂಬರರೊಡನೆ(ಸ) ಕೇಳಿದಾಗ ಹೇಳಿದ ಉತ್ತರ

- ಅಲ್ಲಾಹನ ಬಗ್ಗೆ ಅರಿವು ನನ್ನ ಮೂಲಧನ.
- ಬುದ್ಧಿ (ವಿವೇಕ) ನನ್ನ ಧರ್ಮದ ಮೂಲಾಧಾರ.
- ಪ್ರೀತಿ ನನ್ನ ಅಡಿಪಾಯ.
- ಜಿಜ್ಞಾಸೆ ನನ್ನ ವಾಹನ.
- ದೇವಸ್ಮರಣೆ ನನ್ನ ಸಂಗಾತಿ.
- ಆತ್ಮ ವಿಶ್ವಾಸ ನನ್ನ ಭಂಡಾರ.
- ದುಃಖ ನನ್ನ ಸಹಪಾಠಿ.
- ಜ್ಞಾನ ನನ್ನ ಆಯುಧ.
- ಸಹನೆ ನನ್ನ ಹೊದಿಕೆ.
- ಸಂತೃಪ್ತಿ ನನ್ನ ಸಂಪತ್ತು.
- ವಿನಯ ನನ್ನ ಅಭಿಮಾನ.
- ಭಯಭಕ್ತಿ ನನ್ನ ಕಸುಬು.
- ದೃಢಜ್ಞಾನ ನನ್ನ ಶಕ್ತಿ.
- ಸತ್ಯಸಂಧತೆ ನನ್ನ ಶಿಫಾರಸ್ಸುಗಾರ.
- ಅನುಸರಣೆ ನನ್ನ ಕುಲೀನತೆ.
- ಅತಿಯಾದ ಪರಿಶ್ರಮ ನನ್ನ ಸ್ವಭಾವಗುಣ.
- ನಮಾಝಿನಲ್ಲಿ ನನ್ನ ಕಣ್ಣಿಗೆ ತಂಪು.
- ದೇವಸ್ಮರಣೆಯಲ್ಲಿ ನನ್ನ ಹೃದಯದ ಮಧುರಫಲ.
- ನನ್ನ ವ್ಯಾಕುಲತೆ ನನ್ನ ಸಮುದಾಯದ ಕುರಿತಾಗಿದೆ.
- ಪ್ರತಾಪವಂತನೂ ಮಹೋನ್ನತನೂ ಆದ ನನ್ನ ಪ್ರಭುವಿನ ಕಡೆಗೆ ನನ್ನ ಬಯಕೆ.

(ಶಮಾಇಲೆ ಮುಹಮ್ಮದ್(ಸ) – By ಅಬ್ದುಸ್ಸಮೀ ಖಾನ್, ರಬ್ವ)

("ಹದೀಸ್ ಸಮಾಹಾರಂ" ಪುಸ್ತಕದಿಂದ)

---

ಸ್ನೇಹಿತರೇ, ನಮ್ಮಲ್ಲಿ ಯಾವುದಾದರೊಂದು ಸಮುದಾಯದವರು ಪರಮಾತ್ಮನ ಈ ದಿವ್ಯ ಮಾದರಿಯನ್ನು ಗೌರವಿಸದೆಯೂ ಅವನ ಪಾವನ ಗುಣಗಳಿಗೊಪ್ಪುವಂತೆ ತಮ್ಮ ನಡವಳಿಕೆಗಳನ್ನು ರೂಪಿಸದೆಯೂ ಇದ್ದರೆ ಅವರು ಬೇಗನೇ ನಾಶವಾಗುವರು. ಈ ಉಲ್ಲಂಘನೆಯ ದುಷ್ಪರಿಣಾಮಗಳು ಅವರ ಮೇಲೆ ಮಾತ್ರವಲ್ಲ, ಅವರ ಮುಂದಿನ ಸಂತಾನಗಳ ಮೇಲೆ ಸಹ ಉಂಟಾಗುವುದು. ಪರಮಾತ್ಮನ ಗುಣ ವಿಶೇಷಗಳನ್ನು ತಮ್ಮ ಜೀವಿತದಲ್ಲಿ ಅನುಸರಿಸುವುದು ಮಾನವರ ಬಾಳಿಕೆಗಿರುವ ಒಂದು ಜೀವಜಲವಾಗಿದೆ. ಶಾಂತಿ ಸಮಾಧಾನಗಳ ಉದ್ಭವ ಸ್ಥಾನವಾದ ಪವಿತ್ರ ದೈವಿಕ ಗುಣಗಳನ್ನನುಸರಿಸಿ ಜೀವನ ಕ್ರಮವನ್ನು ರೂಪೀಕರಿಸುವುದರಲ್ಲಿ ಮಾತ್ರ ಮನುಷ್ಯನ ಶಾರೀರಿಕ ಮತ್ತು ಆಧ್ಯಾತ್ಮಿಕ ಜೀವನವು ಆಶ್ರಯಿಸಿದೆ. ಈ ಪರಮಾರ್ಥವನ್ನು ಲೋಕಾರಂಭದಿಂದ ಈವರೆಗಿನ ಎಲ್ಲ ದೇಶಗಳ ಸತ್ಯಸಂಧರಾದ ದೇವದಾಸರು ಸಾಕ್ಷಿಗೊಳಿಸಿದ್ದಾರೆ.

**ಹಝ್ರತ್ ಮಿರ್ಝಾ ಗುಲಾಂ ಅಹ್ಮದ್**

ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕರು

# ಇನ್ಸಾನಿಯತ್ ಝಿಂದಾಬಾದ್

# ಮಾನವೀಯತೆ ಚಿರಕಾಲ ಬಾಳಲಿ

# ಸಾಮಾಜಿಕ – ಆರ್ಥಿಕ ಶಾಂತಿ

♦ ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್, ಅಹ್ಮದಿಯಾ ಮುಸ್ಲಿಂ ಜಮಾಅತಿನ ನಾಲ್ಕನೇ ಖಲೀಫ

## ಸಾಮಾಜಿಕ ಜವಾಬ್ದಾರಿಗಳು

ಇಸ್ಲಾಮ್ ಬಯಸುವುದೇನೆಂದರೆ, ದೇಶದಲ್ಲಿ ಆಡಳಿತೆ ನಡೆಸುವವರು ಜನರ ಆವಶ್ಯಕತೆಗಳ ಬಗ್ಗೆ ಸಂವೇದನಶೀಲರಾಗಿರಬೇಕು ಮತ್ತು ಒತ್ತಡ ಹಾಕುವ ಗುಂಪುಗಳ ಸ್ಥಾಪಿತವಾಗುವ ಆವಶ್ಯಕತೆ ಇಲ್ಲದಂತೆ ನೋಡಿಕೊಳ್ಳಬೇಕು.

ಆಡಳಿತೆಗಾರನು ಅವನ ಅಧೀನಕ್ಕೊಳಗಾದವರ ಬಗ್ಗೆ ಪ್ರಶ್ನಿಸಲ್ಪಡುವನು ಎಂದು ಪವಿತ್ರ ಖುರ್‌ಆನ್ ಪದೇ ಪದೇ ಹೇಳಿದೆ. ಒಂದು ಹದೀಸಿನಲ್ಲಿ ಇಸ್ಲಾಮಿನ ಸ್ಥಾಪಕರಾದ ಹಝ್ರತ್ ಪೈಗಂಬರರು(ಸ) ಹೀಗೆ ಹೇಳಿದರು: "ನಿಮ್ಮ ಪೈಕಿ ಪ್ರತಿಯೊಬ್ಬನು ಕುರಿಮಂದೆಯನ್ನು ಹೊಂದಿದ ಕುರುಬನಾಗಿದ್ದಾನೆ. ಕುರಿಗಳ ಮೇಲ್ವಿಚಾರಣೆ ಪ್ರತಿಯೊಬ್ಬ ಕುರುಬನ ಹೊಣೆಗಾರಿಕೆಯಾಗಿದೆ. ನೀವು ನಿಮ್ಮ ಕುರಿಮಂದೆಗಳ ಮೇಲ್ವಿಚಾರಣೆಗೆ ಜವಾಬ್ದಾರರಾಗಿರುವಿರಿ" (ಬುಖಾರಿ)

ಈ ಹದೀಸು ವಿವಿಧ ಸಂಬಂಧಗಳ ಬಗ್ಗೆ ಪ್ರಸ್ತಾಪಿಸುತ್ತದೆ. ನೌಕರರ ಯಜಮಾನ; ಮನೆವಾರ್ತೆ ನಡೆಸುವ ಪತ್ನಿ; ಕುಟುಂಬದ ಯಜಮಾನನಾದ ಪತಿ; ಇವರಿಬ್ಬರೂ ಕುಟುಂಬದ ಎಲ್ಲರ ಬಗ್ಗೆ ಹೊಣೆಗಾರರಾಗಿದ್ದಾರೆ. ಮಾಲಿಕನು ತನ್ನ ನೌಕರರ ಬಗ್ಗೆ ಜವಾಬ್ದಾರನಾಗಿದ್ದಾನೆ. ಹೀಗೆಯೇ ಮತ್ತಿತ್ತರ ಮಾನವ ಸಂಬಂಧಗಳು ಇವೆ.

ಹಝ್ರತ್ ಪೈಗಂಬರರು(ಸ) ಪುನರಾವರ್ತಿಸಿ ಹೇಳಿದರು: "ನೆನಪಿಡಿರಿ, ನೀವು ಜವಾಬ್ದಾರರಾಗಿರುವಿರಿ ಮತ್ತು ನೀವು ಪ್ರಶ್ನಿಸಲ್ಪಡುವಿರಿ."

## ಇಸ್ಲಾಮಿನ ಆದಿಕಾಲೀನ ಚರಿತ್ರೆಯಿಂದ ಒಂದು ಉದಾಹರಣೆ

ಒಮ್ಮೆ ರಾತ್ರಿ ಇಸ್ಲಾಮಿನ ದ್ವಿತೀಯ ಖಲೀಫರಾಗಿದ್ದ ಹಝ್ರತ್ ಉಮರ್(ರ) ಮದೀನದ ಹೊರವಲಯದ ಒಂದು ದಾರಿಯಲ್ಲಿ ನಡೆದು ಹೋಗುತ್ತಿದ್ದರು. ವೇಷ ಮರೆಸಿ ರಾತ್ರಿ ಹೊತ್ತು ಮದೀನದ ಮಾರ್ಗಗಳಲ್ಲಿ ನಡೆದು ಹೋಗಿ ತನ್ನ ಅಧೀನಕ್ಕೊಳಪಟ್ಟ ಜನರ ಸ್ಥಿತಿಗತಿ ಹೇಗಿದೆ ಎಂದು ಪರಿಶೀಲಿಸುವುದು ಅವರ ಅಭ್ಯಾಸವಾಗಿತ್ತು. ಒಂದು ಮನೆಯೊಳಗೆ ಮಕ್ಕಳು ನೋವಿನಿಂದ ಬಳಲಿ ಅಳುವ ಧ್ವನಿ ಅವರಿಗೆ ಕೇಳಿಸಿತು. ಅವರು ಮನೆಯಲ್ಲಿ ವಿಚಾರಿಸಿದಾಗ ಒಂದು ಒಲೆಯ ಮುಂದೆ ಮೂರು ಮಕ್ಕಳು ಕುದಿಯುತ್ತಿರುವ ಪಾತ್ರೆಯನ್ನು ನೋಡುತ್ತಾ ತಾಯಿಯೊಂದಿಗೆ ಕುಳಿತಿರುವುದನ್ನು ಕಂಡರು. ಮಕ್ಕಳು ಅಳುವುದೇಕೆಂದು ವಿಚಾರಿಸಿದಾಗ ತಾಯಿ ಹೇಳಿದಳು: "ನನ್ನ ಮಕ್ಕಳು ಹಸಿವೆಯಿಂದ ಅಳುತ್ತಿದ್ದಾರೆ. ಅವರಿಗೆ ತಿನ್ನಿಸಲು ನನ್ನಲ್ಲಿ ಏನೂ ಇಲ್ಲ. ಅವರನ್ನು ಸಮಾಧಾನಪಡಿಸಲು ನಾನು ಈ ಪಾತ್ರೆಯಲ್ಲಿ ಕಲ್ಲು ಮತ್ತು ನೀರು ಹಾಕಿ ಒಲೆಯ ಮೇಲಿರಿಸಿ ನಾನು ಆಹಾರ ಬೇಯಿಸುತ್ತಿದ್ದೇನೆಂದು ಅವರು ಭಾವಿಸಲಿ ಎಂದು ಹೀಗೆ ಮಾಡುತ್ತಿದ್ದೇನೆ. ಇದನ್ನೇ ನೀವು ನೋಡುತ್ತಿರುವಿರಿ."

ಬಹಳ ದುಃಖಗೊಂಡು ಹಝ್ರತ್ ಉಮರ್(ರ) ತನ್ನ ಅಧಿಕಾರದ ಸ್ಥಳಕ್ಕೆ ಹೋಗಿ ಹಿಟ್ಟು, ಬೆಣ್ಣೆ, ಮಾಂಸ ಮತ್ತು ಖರ್ಜೂರವನ್ನು ಒಂದು ಚೀಲಕ್ಕೆ ತುಂಬಿಸಿದರು. ಅದನ್ನು ತನ್ನ ಬೆನ್ನಿನ ಮೇಲಿಡಲು ತನ್ನ ಸೇವಕನೊಂದಿಗೆ ಹೇಳಿದರು. ಆಗ ಸೇವಕನಾದ ಗುಲಾಮನು ಆಶ್ಚರ್ಯದಿಂದ ಕೇಳಿದನು – "ನೀವೇ ಸ್ವತಃ ಇದನ್ನು ಎತ್ತಿಕೊಂಡು ಏಕೆ ಹೋಗುತ್ತಿರುವಿರಿ. ನನಗೆ ಇದನ್ನು ಹೊತ್ತುಕೊಂಡು ತಲಪಿಸಲು ಅನುಮತಿಸಿರಿ." ಆಗ ಹಝ್ರತ್ ಉಮರ್(ರ) ಹೇಳಿದರು: "ಈ ದಿನ ನಿಶ್ಚಯವಾಗಿಯೂ ನೀನು ನನಗೋಸ್ಕರ ಈ ಹೊರೆಯನ್ನು ಹೊರಬಲ್ಲೆ. ಆದರೆ ನ್ಯಾಯ ವಿಚಾರಣೆಯ ದಿನ ನನ್ನ ಹೊರೆಯನ್ನು ಯಾರು ಹೊರುವರು?"

ಹಝ್ರತ್ ಉಮರ್(ರ) ಹೀಗೆ ಹೇಳಲು ಉದ್ದೇಶಿಸಿದ್ದರು. ತಾನು ತನ್ನ ಹೊಣೆಗಾರಿಕೆಗಳನ್ನು ಹೇಗೆ ಈಡೇರಿಸಿದೆನು ಎಂಬುದರ ಬಗ್ಗೆ ಉತ್ತರ ನೀಡಲು ತನ್ನ ಆ ಗುಲಾಮನಿಗೆ ಸಾಧ್ಯವಾಗದು ಅದಕ್ಕೆ ಉತ್ತರ ನೀಡಬೇಕಾದುದು ತಾನೇ.

ಹಝ್ರತ್ ಉಮರ್(ರ) ಆ ಮಹಿಳೆಯ ಕಷ್ಟಕ್ಕೆ ತಾನೇ ಹೊಣೆಗಾರನು ಎಂದು ಮನವರಿಕೆ ಮಾಡಿಕೊಂಡು ತನ್ನನ್ನು ತಾನೇ ಶಿಕ್ಷಿಸಲು ಬಯಸಿದ್ದರು. ಆ ನಗರದ ಎಲ್ಲರ ಹೊಣೆಗಾರಿಕೆ ತನ್ನ ಮೇಲಿದೆ ಎಂದೂ ತನಗೆ ವಹಿಸಿಕೊಟ್ಟ ಜವಾಬ್ದಾರಿಯನ್ನು ತಾನೇ ನಿಭಾಯಿಸಬೇಕೆಂದೂ ಅವರು ಬಯಸಿದರು.

ಪ್ರತಿಯೊಂದು ಸರಕಾರದ ಮುಖ್ಯ ಆಡಳಿತೆಗಾರನಿಗೆ ಹಝ್ರತ್ ಉಮರರ(ರ) ಹಾಗೆ ಸ್ವತಃ ವರ್ತಿಸಲು ಅಸಾಧ್ಯವಾದುದಾಗಿದೆ. ಆದರೆ ಹಝ್ರತ್ ಉಮರರ(ರ) ವರ್ತನೆ ಮತ್ತು ಮನೋಭಾವ ಅತ್ಯುತ್ತಮ ಅನುಕರಣೀಯ ಮಾದರಿಯಾಗಿದೆ. ಆಧುನಿಕ ಕಾಲದ ಸಮಾಜಗಳು ಎಲ್ಲ ಸ್ಥಳಗಳಲ್ಲೂ ಇಂತಹ ಮನೋಭಾವವನ್ನು ಬೆಳೆಸಬೇಕು. ಸರಕಾರಗಳು ಜನರ ಕಷ್ಟಗಳ ಕಾರಣವನ್ನು ಅರಿತುಕೊಂಡು ಜನರು ಅದರ ಬಗ್ಗೆ ತಮ್ಮ ಪ್ರತಿಭಟನೆ ಸೂಚಿಸುವ ಮೊದಲೇ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಸರಕಾರಗಳು ಜನರ ಪ್ರತಿಭಟನೆಗಳಿಗೆ ಹೆದರಿಕೊಂಡಲ್ಲ, ತಮ್ಮ ಸ್ವಂತ ಆತ್ಮಸಾಕ್ಷಿಯ ಕರೆಗೆ ಓಗೊಟ್ಟು ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು.

## ಖರ್ಚು ಮಾಡಬೇಕಾದ ವಸ್ತುಗಳ ವಿಸ್ತಾರ

ದೇವಮಾರ್ಗದಲ್ಲಿ ಖರ್ಚುಮಾಡಬೇಕಾದ ವಸ್ತುಗಳನ್ನು ಪವಿತ್ರ ಖುರ್‌ಆನ್ ಬಹಳ ಹೆಚ್ಚು ವಿಸ್ತಾರಗೊಳಿಸಿದೆ. ಪವಿತ್ರ ಖುರ್‌ಆನಿನಲ್ಲಿ ಪದೇ ಪದೇ ಪುನರಾವರ್ತಿಸಲಾಗುವ ನುಡಿಗಟ್ಟು ಹೀಗಿದೆ: "ಅವರಿಗೆ ನಾವು ನೀಡಿದವುಗಳಿಂದ (ಸತ್ಯವಿಶ್ವಾಸಿಗಳು) ಖರ್ಚು ಮಾಡುತ್ತಾರೆ." (2:4).

ದೇವನು ಮನುಷ್ಯರಿಗೆ ನೀಡಿದ ಎಲ್ಲ ಸಾಮರ್ಥ್ಯಗಳು, ಎಲ್ಲ ಗುಣಗಳು, ಎಲ್ಲ ರೀತಿಯ ಭೌತಿಕ ಸಾಮಗ್ರಿಗಳು, ಮಾನವೀಯ ಸಂಬಂಧಗಳು, ಗೌರವ, ಶಾಂತಿ, ಸಮಾಧಾನ, ಸುಖ ಮೊದಲಾದುವು ಇದರಲ್ಲಿ ಸೇರಿವೆ.

**ವ ಮಿಮ್ಮಾ ರಝಖ್‌ನಾಹುಮ್** (ನಾವು ಅವರಿಗೆ ನೀಡಿದುದರಿಂದ) ಎಂಬ ನುಡಿಗಟ್ಟಿನೊಳಗೆ ಯೋಚಿಸಬಹುದಾದ ಯಾವ ವಸ್ತುವೂ ಸೇರದೆ ಇರುವುದಿಲ್ಲ.

ಇನ್ನೊಂದು ಗಮನಾರ್ಹ ವಿಷಯವೇನೆಂದರೆ ಈ ಅರಬಿ ವಾಕ್ಯದಲ್ಲಿ ಮಿನ್ ಎಂಬ ಪದ ಬಳಸಲಾಗಿದೆ. ಇದರ ಅರ್ಥ "ಅದರಿಂದ ಸ್ವಲ್ಪ" ಎಂದಾಗುತ್ತದೆ. ಹೀಗೆ ಹೇಳಿದುದರಿಂದ ದೇವ ಮಾರ್ಗದಲ್ಲಿ ಖರ್ಚು ಮಾಡಲು ಎಲ್ಲರಿಗೂ ಸಾಧ್ಯವಾಗುತ್ತದೆ. ದೇವನು ನೀಡಿದ ಎಲ್ಲವನ್ನೂ ಅಥವಾ ನಿಗದಿತ ಪಾಲನ್ನು ದೇವಮಾರ್ಗದಲ್ಲಿ ಖರ್ಚು ಮಾಡಬೇಕೆಂದು ಇದರ ಅರ್ಥವಲ್ಲ. ದೇವನು ಮನುಷ್ಯನಿಗೆ ನೀಡಿದುದರಿಂದ ಸ್ವಲ್ಪವನ್ನಾದರೂ ದೇವಮಾರ್ಗದಲ್ಲಿ ಖರ್ಚು ಮಾಡಬೇಕಾಗಿದೆ. ಸ್ವಲ್ಪ ಎಂಬ ಪದದ ಅರ್ಥ ಬದಲಾವಣೆ ಹೊಂದುವಂತಹದಾಗಿದ್ದು ಸಾಮಾನ್ಯ ಬಲಹೀನ ಮನುಷ್ಯರು ಧಾರಾಳ ತ್ಯಾಗ ಮಾಡಲು ಸಾಧ್ಯವಿಲ್ಲದೆ ಇರುವಾಗ ಅವರಿಗೆ ಸಾಧ್ಯವಿರುವಷ್ಟನ್ನು ದೇವಮಾರ್ಗದಲ್ಲಿ ಖರ್ಚು ಮಾಡಬಹುದಾಗಿದೆ. ಸಾಮಾಜಿಕ ಸೇವೆಯ ಇಂತಹ ವಾತಾವರಣವನ್ನು ಇಸ್ಲಾಮ್ ಬೆಳೆಸಲು ಬಯಸುತ್ತದೆ. ಇದು ಭಾಗಶಃ ಮನುಷ್ಯನ ಸಾಮಾಜಿಕ ನಡತೆಗೆ ಮತ್ತು ಭಾಗಶಃ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದೆ.

ಸಮಾಜದ ಎಲ್ಲರೂ ಎಲ್ಲವನ್ನೂ ಸ್ವಾಧೀನಪಡಿಸಿಕೊಳ್ಳುವ ಹಮ್ಮನ್ನು ಹೊಂದಿದ್ದು ತಮಗೆ ತೆಗೆದುಕೊಳ್ಳಲು ಏನಿದೆ ಎನ್ನುವುದರ ಬಗ್ಗೆ ಚಿಂತಿಸುತ್ತಿರುವ ಆರ್ಥಿಕ ವ್ಯವಸ್ಥೆಯಲ್ಲಿ ಯಾವುದು ತಪ್ಪು, ಯಾವುದು ಸರಿ ಎಂದು ಗೆರೆ ಎಳೆಯುವುದು ಬಹಳ ಕಷ್ಟಕರವಾಗಿದೆ. ಅಂತಹ ಸಮಾಜದಲ್ಲಿ ಅನ್ಯರ ಹಕ್ಕುಗಳ ಪ್ರದೇಶದಲ್ಲಿ ಅತಿಕ್ರಮಣ ನಡೆಯುವುದು ತಮ್ಮ ಪ್ರದೇಶದಲ್ಲಿಯೇ ಇರುವುದಕ್ಕಿಂತ ಹೆಚ್ಚು ಸಂಭವನೀಯವಾಗಿದೆ.

ಇದಕ್ಕೆ ವಿರುದ್ಧವಾಗಿ ಒಂದು ಸಮಾಜ ಯಾವಾಗಲೂ ಅನ್ಯರ ಹಕ್ಕುಗಳ ಬಗ್ಗೆ ನೆನಪಿಸಿಕೊಡುತ್ತಾ ಅನ್ಯರಿಗೆ ಅವರ ಹಕ್ಕಿಗಿಂತ ಹೆಚ್ಚುಕೊಡಬೇಕೆಂದು ತರಬೇತಿ ನೀಡಿರುವಾಗ ಅಂತಹ ಸಮಾಜ ಅನ್ಯರ ಹಕ್ಕುಗಳನ್ನು ಕಸಿಯುವುದರಿಂದ ಬಹಳ ದೂರವಿರುವುದು. ಇಂತಹ ವಾತಾವರಣದಲ್ಲಿ ಶೋಷಣೆ ಬೆಳವಣಿಗೆ ಪಡೆಯುವುದೆಂದು ಊಹಿಸಲು ಕೂಡ ಸಾಧ್ಯವಿಲ್ಲ.

## ಪರರಿಗೆ ಸೇವೆ

ಪರರಿಗೆ ಸೇವೆ ಮಾಡುವ ಬಗ್ಗೆ ಇಸ್ಲಾಮಿನ ನಿಲುವನ್ನು ಪವಿತ್ರ ಖುರ್‌ಆನಿನ ಒಂದು ವಚನದಲ್ಲಿ ಬಹಳ ಸುಂದರವಾಗಿಯೂ ಸಮಗ್ರವಾಗಿಯೂ ವಿವರಿಸಲಾಗಿದೆ. ಆ ವಚನ ಹೀಗಿದೆ: **"ನೀವು ಮನುಷ್ಯ ವರ್ಗದ ಒಳಿತಿಗಾಗಿ ಸೃಷ್ಟಿಸಲ್ಪಟ್ಟ ಅತಿ ಉತ್ಕೃಷ್ಟ ಸಮುದಾಯವಾಗಿದ್ದೀರಿ. ನೀವು ಒಳಿತನ್ನು ಉಪದೇಶಿಸುತ್ತೀರಿ. ಕೆಡುಕನ್ನು ತಡೆಯುತ್ತೀರಿ ಮತ್ತು ಅಲ್ಲಾಹನನ್ನು ನಂಬುತ್ತೀರಿ."** (3:111).

ನಿಮಗೆ ಸೇವಾ ಮನೋಭಾವ ಇರುವಷ್ಟು ಕಾಲ ನೀವು ಉತ್ತಮರಾಗಿ ಬಾಳುವಿರಿ. ಅನ್ಯರಿಗೆ ಸೇವೆ ಮಾಡುವುದರಲ್ಲಿ ನೀವು ವಿಫಲರಾದರೆ ಇಸ್ಲಾಂ ಮತ್ತು ಮುಸ್ಲಿಂ ಸಮುದಾಯದ ಶ್ರೇಷ್ಠತೆಯನ್ನು ಶ್ಲಾಘಿಸಲು ನಿಮಗೆ ಹಕ್ಕಿಲ್ಲ.

## ಪಾನನಿರೋಧ ಮತ್ತು ಜುಗಾರಿ ಆಟ

ಚಟ, ವ್ಯಸನಗಳ ಬಗ್ಗೆ ಮಾತನಾಡುವಾಗ ದ್ರವ್ಯ ವ್ಯಸನದ ವಿಷಯವನ್ನೇ ಪ್ರಸ್ತಾಪಿಸಲಾಗುತ್ತಿದೆ. ಆದರೆ ಚಟವು ಕೇವಲ ದ್ರವ್ಯಗಳಿಗೆ ಸೀಮಿತವಾಗಿಲ್ಲ. ಸಮಾಜದ ಇತರ ಸುಖಲೋಲುಪತೆಗೂ ಇದನ್ನು ಅನ್ವಯಿಸಬಹುದಾಗಿದೆ. ಮದ್ಯಪಾನ ಮತ್ತು ಜುಗಾರಿ ಆಟ ಚಟಗಳಲ್ಲಿ ಸೇರುತ್ತವೆ. ಇವೆರಡು ಸಮಾಜದಲ್ಲಿ ಶಾಂತಿಗೆ ಮತ್ತು ಒಳಿತಿಗೆ ಸಹಕಾರಿಯಾಗಲಾರವು.

ಜುಗಾರಿ ಆಟ ಸಾಮಾನ್ಯವಾಗಿ ಎಲ್ಲ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವ್ಯವಸ್ಥಾಪಿತವಾಗಿ ನಡೆಸಲಾಗುತ್ತಿದೆ. ಆದರೆ ತೃತೀಯ ಲೋಕದ ದೇಶಗಳಲ್ಲೂ ಜುಗಾರಿ ಆಟವು ಹೆಚ್ಚಿನ ಮಟ್ಟದಲ್ಲಿ ವ್ಯವಸ್ಥಾಪಿತವಾಗಿಲ್ಲವಾದರೂ ಜುಗಾರಿ ಆಟವು ಜನರ ಎಲ್ಲ ವರ್ಗಗಳಲ್ಲೂ ಅಲ್ಪಕಾಲದ ವೈಯಕ್ತಿಕ ಪ್ರವೃತ್ತಿಯಾಗಿ ಕಂಡುಬರುತ್ತದೆ. ಮದ್ಯಪಾನವು ಇನ್ನೊಂದು ಚಟವಾಗಿದೆ. ಇದಕ್ಕೆ ಲೋಕದ ಸಮಾಜಗಳು ಅಡಿಯಾಳಾಗಿವೆ.

ಪವಿತ್ರ ಖುರ್‌ಆನ್ ಮದ್ಯಪಾನವನ್ನೂ ಜುಗಾರಿ ಆಟವನ್ನೂ ನಿಷಿದ್ಧಗೊಳಿಸುತ್ತದೆ. ಪವಿತ್ರ ಖುರ್‌ಆನಿನ ವಚನಗಳು ಹೀಗಿವೆ: **"ಎಲೈ ಸತ್ಯವಿಶ್ವಾಸಿಗಳೇ, ನಿಸ್ಸಂಶಯವಾಗಿಯೂ ಮದ್ಯಪಾನ, ಜೂಜಾಟ, ಮೂರ್ತಿಪೂಜೆ, ಬಾಣ ಎಸೆದು ಶಕುನ ನೋಡುವುದು ಇವೆಲ್ಲ ಹೇಯವಾದ ಪೈಶಾಚಿಕ ಕೃತ್ಯಗಳಾಗಿವೆ. ಆದ್ದರಿಂದ ನೀವು ಏಳಿಗೆ ಹೊಂದಲಿಕ್ಕಾಗಿ ಅವುಗಳಿಂದೆಲ್ಲ ದೂರವಿರಿ. ಮದ್ಯಪಾನ ಮತ್ತು ಜೂಜು ಮೂಲಕ ನಿಮ್ಮೊಳಗೆ ವೈರತ್ವವೂ ದ್ವೇಷಭಾವನೆಯೂ ಉಂಟಾಗಬೇಕೆಂದೂ ಅಲ್ಲಾಹನ ಸ್ಮರಣೆ ಮತ್ತು ನಮಾಝ್‌ನಿಂದ ನಿಮ್ಮನ್ನು ತಡೆಯಬೇಕೆಂದೂ ಶೈತಾನನು ಖಂಡಿತವಾಗಿಯೂ ಬಯಸುತ್ತಾನೆ. ಹಾಗಿರುವಾಗ ನೀವು ಪರಾಙ್ಮುಖರಾಗುವುದಿಲ್ಲವೇನು?"** (5:91–92).

ಹಝ್ರತ್ ಪೈಗಂಬರರು(ಸ) ಮದ್ಯಪಾನವನ್ನು **ಉಮ್ಮುಲ್ ಖಬಾಯಿಸ್** – ಎಲ್ಲ ಕೆಟ್ಟ ಕೆಲಸಗಳ ತಾಯಿ ಎಂದು ಹೇಳಿರುವರು.

ಮದ್ಯಪಾನ ಮತ್ತು ಜುಗಾರಿ ಆಟ ಎಷ್ಟು ವ್ಯಾಪಕವಾಗಿದೆ ಎಂದರೆ ಅವುಗಳ ಮಧ್ಯೆ ವಿಭಜನೆ ರೇಖೆ ಎಳೆಯಲು ಅಸಾಧ್ಯವಾಗಿದೆ. ರಾಜಕೀಯವಾಗಿ ಪೂರ್ವ ಮತ್ತು ಪಶ್ಚಿಮ ದೇಶಗಳು ಎಂದೂ ಜೊತೆಗೂಡಲಾರವಾದರೂ ಮದ್ಯಪಾನ ಮತ್ತು ಜುಗಾರಿ ಆಟದ ಅತ್ಯಾಸಕ್ತಿಯಲ್ಲಿ ಪೂರ್ವ ಪಶ್ಚಿಮಗಳೂ ಉತ್ತರ ದಕ್ಷಿಣಗಳೂ ಇಷ್ಟರಲ್ಲಿಯೇ ಒಗ್ಗೂಡಿವೆ.

ಮದ್ಯಪಾನ ಮತ್ತು ಜುಗಾರಿ ಆಟ ಸಾಮಾಜಿಕ – ಆರ್ಥಿಕ ಕೆಡುಕುಗಳಾಗಿವೆ. ಗ್ರೇಟ್ ಬ್ರಿಟನ್‌ನಲ್ಲಿ ಮದ್ಯಪಾನಕ್ಕೋಸ್ಕರ ಒಂದು

ದಿನ ಮಾಡುವ ವೆಚ್ಚ ಎಂದರೆ ಕ್ಷಾಮಪೀಡಿತರಾದ ಆಫ್ರಿಕದ ಜನತೆಗೆ ಅನೇಕ ವಾರಗಳ ತನಕ ಆಹಾರ ನೀಡಲು ಸಾಕಾಗುವಷ್ಟಿದೆ. ಹೀಗಿದ್ದರೂ ದಾರಿದ್ರ್ಯ ಪೀಡಿತವಾದ ಅನೇಕ ಆಫ್ರಿಕನ್ ದೇಶಗಳಲ್ಲಿ ಮತ್ತು ಇತರ ಭೂಖಂಡಗಳಲ್ಲೂ ಮದ್ಯಪಾನವು ಜನರಿಗೆ ಬಳಸಲಾಗದ ಒಂದು ಸುಖ ಸಾಮಗ್ರಿ ಎಂದು ಗಣಿಸಲ್ಪಡುವುದಿಲ್ಲ. ಜೀವನದ ಆವಶ್ಯಕತೆಗಳನ್ನು ಈಡೇರಿಸಲಾಗದ ಮತ್ತು ಮಕ್ಕಳಿಗೆ ವಿದ್ಯಾಭ್ಯಾಸ ನೀಡಲು ಸಾಮರ್ಥ್ಯವಿಲ್ಲದಂತಹ ಮಿಲಿಯಗಟ್ಟಲೆ ಆಫ್ರಿಕನ್ ಜನರು ಇಂತಹ ಪರಿಸ್ಥಿತಿಯಲ್ಲಿ ಮದ್ಯಪಾನ ಮಾಡುವವರಾಗಿದ್ದಾರೆ. ಭಾರತದ ಬಡ ದಕ್ಷಿಣ ರಾಜ್ಯಗಳಲ್ಲಿ ಕಾರ್ಖಾನೆಗಳಲ್ಲಿ ನಿರ್ಮಿತವಾದ ಮದ್ಯವು ಎಲ್ಲರಿಗೂ ಲಭ್ಯವಾಗದಿರುವಾಗ ಮನೆಯಲ್ಲಿ ನಿರ್ಮಿಸಲ್ಪಡುವ ಕಳ್ಳು ಅದಕ್ಕೆ ಬದಲಿಯಾಗಿ ಬಳಸಲಾಗುತ್ತಿದೆ. ಆದರೆ ದಾರಿದ್ರ್ಯವು "ಕೆಟ್ಟ ಕೆಲಸಗಳ ತಾಯಿಯ" ಹರಡುವಿಕೆಯನ್ನು ಸಾಕಷ್ಟು ನಿಯಂತ್ರಿಸುತ್ತದೆ. ಪ್ರತಿ ವ್ಯಕ್ತಿಯ ಆದಾಯ ಹೆಚ್ಚಾಗುವಾಗ ಮದ್ಯಪಾನಕ್ಕೆ ಮಾಡುವ ಖರ್ಚು ಸಹ ಹೆಚ್ಚಾಗುತ್ತದೆ. ಒಬ್ಬನು ಮಿತಿಮೀರಿ ಮದ್ಯಪಾನ ಮಾಡುವವನಾಗುವ ತನಕ ಯಾರೂ ಅದರ ಬಗ್ಗೆ ಚಿಂತಿಸುವ ಹಾಗೆ ಕಾಣುವುದಿಲ್ಲ.

ಮದ್ಯಪಾನ ಮತ್ತು ಜುಗಾರಿ ಆಟವನ್ನು ಈಗಿನ ಕಾಲದ ಸಮಸ್ಯೆಗಳೆಂದು ಏಕೆ ಪರಿಗಣಿಸುವುದು? ವಾಸ್ತವಿಕವಾಗಿ ಮದ್ಯಪಾನ ಮತ್ತು ಜುಗಾರಿ ಆಟ ಲೋಕದ ಎಲ್ಲ ಕಡೆಗಳಲ್ಲೂ ಎಲ್ಲ ಕಾಲಘಟ್ಟಗಳಲ್ಲೂ ಇತ್ತು ಎಂದು ಯಾರಾದರೂ ಆಶ್ಚರ್ಯಪಡಬಹುದು. ಆದರೆ ಮದ್ಯಪಾನ ಮತ್ತು ಜುಗಾರಿ ಆಟ ಎಲ್ಲ ಕಾಲಗಳಲ್ಲೂ ಇರುವ ಕಾರಣ ಅವುಗಳನ್ನು ಎಲ್ಲ ಕಾಲಘಟ್ಟಗಳ ಸಮಸ್ಯೆ ಎಂದೇ ಪರಿಗಣಿಸಬೇಕು.

ಅರ್ಥ ಶಾಸ್ತ್ರದ ದೃಷ್ಟಿಯಲ್ಲಿ ಮದ್ಯಪಾನಕ್ಕಿಂತ ಜುಗಾರಿ ಆಟ ಹೆಚ್ಚು ಅನಿಷ್ಟಕರವಾಗಿದೆ. ಜುಗಾರಿ ಆಟದಲ್ಲಿ ಆರ್ಥಿಕ ಚಕ್ರವನ್ನು ತಿರುಗಿಸದೆ ಹಣವು ಕೈಗಳಿಂದ ಅನ್ಯ ಕೈಗಳಿಗೆ ವರ್ಗಾಯಿಸಲ್ಪಡುತ್ತದೆ. ಸರಕುಗಳ ವರ್ಗಾವಣೆ ಇಲ್ಲದೆ ಹಣವು ಜುಗಾರಿ ಆಟದಲ್ಲಿ ವರ್ಗಾಯಿಸಲ್ಪಡುತ್ತದೆ. ಆರ್ಥಿಕ ಬೆಳವಣಿಗೆಗೆ ಮತ್ತು ಸಂಪತ್ತಿನ ಉತ್ಪಾದನೆಯಲ್ಲಿ ಭಾಗವಹಿಸದೆ ಹಣವು ಜುಗಾರಿ ಆಟದಲ್ಲಿ ವರ್ಗಾಯಿಸಲ್ಪಡುತ್ತದೆ. ಮದ್ಯ ತಯಾರಿಕೆಯ ಕಾರಣ ಹಣದ ಮಾರುಕಟ್ಟೆಯಲ್ಲಿ ಮದ್ಯಪಾನವು ಕಾರ್ಯನಿರ್ವಹಿಸುತ್ತಿದೆಯಾದರೂ ಜುಗಾರಿ ಆಟದಲ್ಲಿ ಇಂತಹದೇನೂ ಇರುವುದಿಲ್ಲ.

ಸ್ವತಂತ್ರ ವ್ಯಾಪಾರ ಮತ್ತು ಕೈಗಾರಿಕೆಯ ವಾತಾವರಣದಲ್ಲಿ ವಸ್ತುಗಳ ವರ್ಗಾವಣೆ ಮೂಲಕ ಹಣವು ಚಲಾಯಿಸಲ್ಪಡುತ್ತದೆ. ಇದರಿಂದ ಎಲ್ಲರಿಗೂ ಉಪಕಾರವಾಗುತ್ತದೆ. ವ್ಯಾಪಾರದಿಂದ ಬಹಳ ವ್ಯಾಪಾರಿಗಳು ನಷ್ಟ ಅನುಭವಿಸುತ್ತಾರೆ ಎಂದು ಭಾವಿಸಲು ಸಾಧ್ಯವಿಲ್ಲ. ಆದರೆ ಜುಗಾರಿ ಆಟದಲ್ಲಿ ಬಹಳ ಹೆಚ್ಚಿನ ಜನರು ನಷ್ಟ ಅನುಭವಿಸುತ್ತಾರೆ. ಉದಾಹರಣೆಗೆ, ಜುಗಾರಿ ಆಟದ ಕೇಂದ್ರಗಳಾದ ಕೆಸಿನೋಗಳು ಹಾನಿ ಅನುಭವಿಸುವುದಿಲ್ಲ. ಕೆಲವರು ಪಡೆಯುವ ಲಾಭಕ್ಕೋಸ್ಕರ ಲಕ್ಷಗಟ್ಟಲೆ ಜನರು ನಷ್ಟವನ್ನನುಭವಿಸುತ್ತಾರೆ. ಅವರು ಅನುಭವಿಸುವ ಲಾಭವೇನೆಂದರೆ ಅವರು ಜುಗಾರಿ ಆಟದ ಪರಿಣಾಮ ತಿಳಿಯುವ ತನಕ ಅವರಿಗಿರುವ ಆತಂಕ ಮತ್ತು ಪ್ರತೀಕ್ಷೆಗಳಾಗಿವೆ. ತಮಗೆಲ್ಲವೂ ನಷ್ಟವಾಯಿತೆಂದು ಅವರು ಕೊನೆಗೆ ತಿಳಿದುಕೊಳ್ಳುತ್ತಾರೆ. ಅನಂತರ ಅವರು ತಮ್ಮ ನಷ್ಟ ಭರ್ತಿಮಾಡುವ ಆಶೆಯಿಂದ ಪುನಃ ಜುಗಾರಿ ಆಟಕ್ಕೆ ಹಣ ಕಟ್ಟುತ್ತಾರೆ. ಕೊನೆಗೆ ಅವರು ಆಟದಲ್ಲಿ ಗಳಿಸುವ ಸಂತೋಷಕ್ಕಿಂತ ಅವರು ಅನುಭವಿಸುವ ನಷ್ಟದಿಂದ ಹೆಚ್ಚಿನ ಮಟ್ಟದ ಬಿಗುವು ಉಂಟಾಗುತ್ತದೆ. ಜುಗಾರಿ ಆಟಗಾರರು ಅನುಭವಿಸುವ ನಷ್ಟ ಮತ್ತು ದುಃಖ ಜುಗಾರಿ ಆಟಗಾರನಿಗೆ ಸೀಮಿತವಾಗದೆ ಅವನ ಕುಟುಂಬವನ್ನೂ ಅದು ಬಾಧಿಸುತ್ತದೆ. ಬಡ ಕುಟುಂಬಗಳಲ್ಲಿ ಮನೆಯ ದೈನಂದಿನ ಅತ್ಯಾವಶ್ಯಕತೆಗಳು ಜುಗಾರಿ ಆಟದ ವೇದಿಕೆಯಲ್ಲಿ ಬಲಿಯರ್ಪಿಸಲ್ಪಡುತ್ತವೆ. ಪವಿತ್ರ ಖುರ್‌ಆನ್ ಮದ್ಯಪಾನವನ್ನು ಮತ್ತು ಜೂಜಾಟವನ್ನು ನಿಷಿದ್ಧಗೊಳಿಸುವಾಗ ಅವುಗಳಿಂದ ದೊರೆಯಬಹುದಾದ ಅಲ್ಪಸ್ವಲ್ಪ ಲಾಭದ ಬಗ್ಗೆ ಸಹ ಪ್ರಸ್ತಾಪಿಸಿದೆ. ಆದರೆ ಅವುಗಳಿಂದುಂಟಾಗುವ ಹಾನಿ ಅವುಗಳು ನೀಡುವ ಲಾಭಕ್ಕಿಂತ ಎಷ್ಟೋ ಹೆಚ್ಚಿನದಾಗಿದೆ. ಪವಿತ್ರ ಖುರ್‌ಆನಿನ್ ಹೀಗೆ ಹೇಳಿದೆ:

"ಅವರು ನಿನ್ನೊಡನೆ ಮದ್ಯ ಮತ್ತು ಜೂಜಾಟದ ಬಗ್ಗೆ ಕೇಳುತ್ತಾರೆ. ಹೇಳು: "ಅವೆರಡರಲ್ಲೂ ದೊಡ್ಡ ಪಾಪ (ದೋಷ)ವೂ ಜನರಿಗೆ (ಕೆಲವು) ಪ್ರಯೋಜನಗಳೂ ಇವೆ. ಆದರೆ ಅವುಗಳ ದೋಷವು ಗುಣಕ್ಕಿಂತ ಬಲು ಹೆಚ್ಚು." ತಾವು ಏನನ್ನು ವ್ಯವಯಿಸಬೇಕೆಂದೂ ಅವರು ನಿನ್ನೊಡನೆ ಕೇಳುತ್ತಾರೆ. ಹೇಳು: 'ಪ್ರಯಾಸವಿಲ್ಲದೆ ವೆಚ್ಚ ಮಾಡಲು ಸಾಧ್ಯವಿರುವಷ್ಟು.' ಹೀಗೆ ಅಲ್ಲಾಹನು ತನ್ನ ಆಜ್ಞೆಗಳನ್ನು ವಿವರಿಸಿಕೊಡುತ್ತಾನೆ. ನೀವು ಚಿಂತನೆ ಮಾಡಿ ಕಾರ್ಯಶೀಲರಾಗಲಿಕ್ಕಾಗಿ." (2 :220).

ಕೆಲವರು ಹೀಗೆ ವಾದಿಸಬಹುದು: ಒಬ್ಬನು ಸಂಪಾದಿಸುವ ಹಣದಿಂದ ಅವನು ಇಷ್ಟಪಡುವ ಹಾಗೆ ಸುಖಿಗಳಿಸುವ ಬಗ್ಗೆ ಅನ್ಯರು ಹಸ್ತಕ್ಷೇಪ ಮಾಡಬಾರದು. ಪ್ರತಿಯೊಬ್ಬನು ತನಗಿಷ್ಟವಿರುವ ಹಾಗೆ ಸುಖಿಸಲಿ. ಇಂತಹ ರೀತಿ ಖರ್ಚು ಮಾಡಬೇಕೆಂದು ಹೇಳಿ ವೈಯಕ್ತಿಕ ಸ್ವಾತಂತ್ರ್ಯದಲ್ಲಿ ಹಸ್ತಕ್ಷೇಪ ಸಮಾಜ ನಡೆಸಬಾರದು. ಅದಕ್ಕೆ ಅಂತಹ ಅಧಿಕಾರ ಇಲ್ಲ.

ಆದರೆ ನೆನಪಿಡಬೇಕಾದ ವಿಷಯವೇನೆಂದರೆ, ಧಾರ್ಮಿಕ ಉಪದೇಶಗಳು ಎಚ್ಚರಿಕೆಗಳ ರೂಪದಲ್ಲಿರುತ್ತವೆ. ಧಾರ್ಮಿಕ ಉಪದೇಶಗಳು ಇಹಲೋಕದಲ್ಲಿ ಬಲಾತ್ಕಾರದಿಂದ ತನ್ನ ಉಪದೇಶಗಳನ್ನು ಅಂಗೀಕರಿಸುವಂತೆ ಮಾಡುವುದಿಲ್ಲ. ಧಾರ್ಮಿಕರೂ ಧರ್ಮರಹಿತರೂ ಅಪರಾಧವೆಂದು ಗಣಿಸುವುದಕ್ಕೆ ಮಾತ್ರ ಶಿಕ್ಷೆ ನೀಡಲಾಗುತ್ತಿದೆ. ಕೊಲೆ, ಕಳವು, ವಂಚನೆ, ಭ್ರಷ್ಟಾಚಾರ ಮತ್ತು ಅನ್ಯರ ಹಕ್ಕುಗಳ ಕಸಿಯುವಿಕೆ ಇಂತಹ ಅಪರಾಧಗಳಾಗಿವೆ. ಬೇರೆ ಕೆಲವು ಸಾಮಾಜಿಕ ಅಪರಾಧಗಳಿವೆ. ಅವು ಸಮಾಜಕ್ಕೆ ವಿಷಗಳ ಹಾಗಿವೆ. ಅಂತಹ ಅಪರಾಧಗಳ ದೋಷ ವ್ಯಕ್ತಿ ಮಾತ್ರವಲ್ಲ ಸಮಾಜವೂ ಅನುಭವಿಸುತ್ತದೆ. ವಿಶಾಲವಾದ ಸಾಮಾಜಿಕ ನಿಯಮಗಳು ಶಿಕ್ಷೆಯನ್ನು ಜಾರಿಗೊಳಿಸುತ್ತವೆ.

ಮದ್ಯಪಾನ ಮತ್ತು ಜುಗಾರಿ ಆಟ ಬೇಗನೆ ಸಮಾಜವನ್ನು ತನ್ನ ಪ್ರಭಾವಕ್ಕೊಳಪಡಿಸುತ್ತದೆ. ಅದು ಆಶ್ಚರ್ಯಕರವಲ್ಲ. ಅಂತಹ ಸಮಾಜವನ್ನು ಪಾಲನೆ ಮಾಡಲು ಹೆಚ್ಚು ಹೆಚ್ಚಾಗಿ ಖರ್ಚು ಮಾಡಬೇಕಾಗುತ್ತದೆ. ರಾಷ್ಟ್ರೀಯ ಆದಾಯದ ಗಣನೀಯ ಅಂಶವು ಕೊಳಕು ಚರಂಡಿಗೆ ಹರಿದು ಹೋಗುತ್ತದೆ. ಜನರಲ್ಲಿ

ನಿರಾಶಾಮನೋಭಾವ ಉಂಟಾಗುತ್ತದೆ. ಮದ್ಯಪಾನ ಮತ್ತು ಜುಗಾರಿ ಆಟದೊಂದಿಗೆ ಅಪರಾಧಗಳೂ ಜೊತೆಗೂಡುತ್ತವೆ. ಮದ್ಯಪಾನ ಮತ್ತು ಜುಗಾರಿ ಆಟದ ಕಾರಣದಿಂದ ಅನೇಕ ಕುಟುಂಬಗಳು ಕಷ್ಟಕ್ಕೆ ಗುರಿಯಾಗುತ್ತವೆ. ಅನೇಕ ಮುರಿದ ಕುಟುಂಬಗಳು ಮತ್ತು ನಾಶಗೊಂಡ ವಿವಾಹ ಸಂಬಂಧಗಳು ಮದ್ಯಪಾನ ಮತ್ತು ಜುಗಾರಿ ಆಟದ ಪರಿಣಾಮಗಳಾಗಿವೆ.

ಮದ್ಯದ ಬಗ್ಗೆ ಅಮಿತ ಆಸಕ್ತಿಯ ಕಾರಣ ಗಂಭೀರ ಸಾಮಾಜಿಕ ಮತ್ತು ಆರ್ಥಿಕ ಸಂಕಷ್ಟಗಳು ತಲೆದೋರಿವೆ ಎಂದು ಸೈಂಟಿಫಿಕ್ ಅಮೇರಿಕನ್ (Scientific American) ಎಂಬ ಪತ್ರಿಕೆ ವರದಿ ಮಾಡಿದೆ. ಮನೆಯಲ್ಲಿ ಹಿಂಸಾಚಾರದೊಂದಿಗೆ ಮಕ್ಕಳಿಗೆ ಲೈಂಗಿಕ ಪೀಡನೆ, ನಿಷಿದ್ಧ ಲೈಂಗಿಕ ಸಂಬಂಧ, ಬಲಾತ್ಸಂಗ ಮೊದಲಾದುವು ಮದ್ಯ ಮತ್ತು ಅಮಿತ ಮದ್ಯಪಾನದಿಂದ ಯಾವುದು ಸರಿ ಯಾವುದು ತಪ್ಪು ಎಂಬ ಬೋಧವಿಲ್ಲದೆ ಮಾಡುವವುಗಳಾಗಿವೆ.

**ಮೃತ್ಯುವಿಗೆ ಸಂಬಂಧಿಸಿ ಅಂಕಿ ಅಂಶಗಳು:**

1. ಅಮಿತ ಮದ್ಯಪಾನಿಗಳ ಆಯುಸ್ಸು ಹತ್ತು ವರ್ಷ ಕಡಿಮೆಯಾಗುತ್ತದೆ.

2. ಸಾಮಾನ್ಯವಾಗಿ ಪುರುಷರು ಮೃತರಾಗುವುದಕ್ಕಿಂತ ಇಮ್ಮಡಿ ಮತ್ತು ಸಾಮಾನ್ಯವಾಗಿ ಮಹಿಳೆಯರು ಮೃತರಾಗುವುದಕ್ಕಿಂತ ಮೂರು ಪಟ್ಟು ಮೃತ್ಯುಗಳು ಮದ್ಯಪಾನಿಗಳಲ್ಲಿ ಸಂಭವಿಸುತ್ತದೆ.

3. ಅಮಿತ ಮದ್ಯಪಾನಿಗಳಲ್ಲಿ ಆರು ಪಟ್ಟು ಹೆಚ್ಚು ಆತ್ಮಹತ್ಯೆ ನಡೆಯುತ್ತವೆ.

4. 25 ರಿಂದ 44 ವರ್ಷ ಪ್ರಾಯದೊಳಗಿನ ಜನರು ಅಮಿತ ಮದ್ಯಪಾನದಿಂದ ಮೃತರಾಗುವುದಕ್ಕೆ ನಾಲ್ಕು ಮುಖ್ಯ ಕಾರಣಗಳು ಇವುಗಳಾಗಿವೆ: ಅಪಘಾತ (ಶೇಕಡಾ 50), ನರಹತ್ಯೆ (ಶೇಕಡಾ 60), ಆತ್ಮಹತ್ಯೆ ಮತ್ತು ಯಕೃತಿನ ಸಿರ್‌ಹೋಸಿಸ್ ರೋಗ.

**ಪ್ರತಿ ವರ್ಷ ಆರ್ಥಿಕ ನಷ್ಟ (ಡಾಲರ್‌ಗಳಲ್ಲಿ)**

1. ಉತ್ಪಾದನೆಯ ಕೊರತೆ : 14.9 ಬಿಲಿಯನ್.

2. ಆರೋಗ್ಯ ಸೇವೆಗೆ ಖರ್ಚು : 8.3 ಬಿಲಿಯನ್.

3. ಅಗ್ನಿ ಅನಾಹುತ : 0.3 ಬಿಲಿಯನ್.

4. ಹಿಂಸಾತ್ಮಕ ಅಪರಾಧಗಳಿಂದ ನಷ್ಟ : 1.5 ಬಿಲಿಯನ್.

5. ಸಮಾಜದ ಪ್ರತಿಕ್ರಿಯೆಗೋಸ್ಕರ ಖರ್ಚು : 1.9 ಬಿಲಿಯನ್.

6. ಅಮಿತ ಮದ್ಯಪಾನದಿಂದ ಒಟ್ಟು ನಷ್ಟ : 31.6 ಬಿಲಿಯನ್.

ಮದ್ಯಪಾನ, ಜುಗಾರಿ ಆಟ, ಸಂಗೀತ, ನೃತ್ಯ ಮತ್ತು ಇತರ ಕೆಲವು ಸುಖ ಸೌಕರ್ಯಗಳು ದೋಷಕರವಲ್ಲವೆಂದು ಲೋಕದ ಅನೇಕ ಸಮಾಜಗಳು ಸಾಮಾನ್ಯವಾಗಿ ಭಾವಿಸುತ್ತಿವೆ. ಅವು ಅನೇಕ ಸಂಸ್ಕೃತಿಗಳ ಅವಿಭಾಜ್ಯ ಅಂಗಗಳೆಂದು ಸಹ ಪ್ರಸ್ತಾಪಿಸಲಾಗುತ್ತಿದೆ. ಇವು ವಿವಿಧ ರೀತಿಯಲ್ಲಿ ಪ್ರದರ್ಶಿಸಲ್ಪಟ್ಟರೂ ಅವುಗಳ ಮೂಲ ಸ್ವರೂಪ ಒಂದೇ ರೀತಿ ಇರುತ್ತವೆ. ಶಿಲ್ಪಕಲೆ, ಚಿತ್ರ ರಚನೆ ಮೊದಲಾದುವುಗಳನ್ನು ಹೊರತುಪಡಿಸಿದರೆ ಮೇಲೆ ಹೇಳಿದವುಗಳು ಕೇವಲ ಸಂಸ್ಕೃತಿಯ ದೋಷರಹಿತ ಸ್ವರೂಪಗಳಾಗಿ ಬಾಕಿಯಾಗಿ ಉಳಿಯದೆ ಅವು ಹಾನಿಕರವಾಗಿದ್ದು ಕೆಲವು ಸಾರಿ ಅವು ಸಮಾಜದ ಬೆನ್ನೆಲುಬನ್ನೇ ಮುರಿಯುವಂತಿರುತ್ತವೆ. ಸಮಾಜವು ಸಾಮಾಜಿಕ ಒಲವುಗಳ ಯಜಮಾನನಾಗಿ ಈಗ ಇಲ್ಲ. ಮದ್ಯಪಾನ, ಜುಗಾರಿ ಆಟ, ಸಂಗೀತ, ನೃತ್ಯ ಮೊದಲಾದುವು ಸಮಾಜವನ್ನು ಹೆಚ್ಚು ಹೆಚ್ಚಾಗಿ ಆಕರ್ಷಿಸುತ್ತಾ ಇವೆ. ಅವು ಎಷ್ಟು ವೇಗವಾಗಿ ಯುವಕರನ್ನು ಆಕರ್ಷಿಸುತ್ತವೆ ಎಂದರೆ ಅವುಗಳ ಕಡೆಗೆ ಬೇಗನೆ ನುಗ್ಗಾಟ ಪ್ರಾರಂಭವಾಗುವುದು.

ಇಂತಹ ಸಮಾಜಗಳ ಕಡೆಗೆ ನೋಡುವಾಗ ಜೀವಿತದಲ್ಲಿ ನಿಷ್ಪ್ರಯೋಜಕ ಸುಖಗಳನ್ನು ಅರಸುವುದು ಮತ್ತು ಇಂದ್ರಿಯಾಸಕ್ತಿಗಳಿಗೆ ಅಧೀನರಾಗಿ ವರ್ತಿಸುವುದೇ ಮಾನವನ ಜೀವಿತದ ಉದ್ದೇಶವೆಂದು ನಂಬುವಂತೆ ಆಗುವುದು. ಆದರೆ ಹಾಗೆ ಅಲ್ಲವೆಂದು ಇಸ್ಲಾಮ್ ಹೇಳುತ್ತದೆ. ಪವಿತ್ರ ಖುರ್‌ಆನಿನ ಈ ಕೆಳಗಿನ ವಚನವನ್ನು ನೋಡಿರಿ:

**"ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲೂ ರಾತ್ರಿ–ಹಗಲುಗಳ ರೂಪಾಂತರದಲ್ಲೂ ದಿಟವಾಗಿಯೂ ಬುದ್ಧಿಶಾಲಿಗಳಿಗೆ (ಹಲವು) ದೃಷ್ಟಾಂತಗಳಿವೆ. ನಿಂತುಕೊಂಡು, ಕುಳಿತುಕೊಂಡು ಹಾಗೂ ತಮ್ಮ ಪಾರ್ಶ್ವಗಳಲ್ಲಿ ಮಲಗಿಕೊಂಡು ಅಲ್ಲಾಹನನ್ನು ಸ್ಮರಿಸುತ್ತಲೂ ಆಕಾಶಗಳ ಮತ್ತು ಭೂಮಿಯ ಸೃಷ್ಟಿಯ ಕುರಿತು ಚಿಂತನೆ ಮಾಡುತ್ತಲೂ ಅವರು (ಬುದ್ಧಿಶಾಲಿಗಳು) 'ನಮ್ಮ ಪ್ರಭೂ, ನೀನು ಇವನ್ನೆಲ್ಲ ವ್ಯರ್ಥವಾಗಿ ಸೃಷ್ಟಿಸಲಿಲ್ಲ (ಅಂತಹ ನಿಷ್ಪ್ರಯೋಜಕ ಕೃತ್ಯಗಳಿಂದ) ನೀನು ಪರಿಶುದ್ಧನಾಗಿರುವೆ. ನೀನು ನಮ್ಮನ್ನು ನರಕಾಗ್ನಿಯಿಂದ ರಕ್ಷಿಸು (ಎಂದು ಪ್ರಾರ್ಥಿಸುತ್ತಾರೆ)."** (3 :191–192).

ಅಲ್ಲಾಹನ ಬುದ್ಧಿಶಾಲಿಗಳಾದ ದಾಸರು ಸೃಷ್ಟಿಯ ರಹಸ್ಯಗಳ ಕುರಿತು ಚಿಂತಿಸುತ್ತಾ ತಾವಾಗಿಯೇ ಹೇಳುತ್ತಾರೆ – ದೇವನ ಸೃಷ್ಟಿಯ ಉದ್ದೇಶ ಏನಾಗಿದ್ದರೂ ಅದು ವ್ಯರ್ಥವಂತೂ ಅಲ್ಲ.

ಪವಿತ್ರ ಖುರ್‌ಆನಿನ ಈ ವಚನಗಳು ಆರ್ಕಿಮಿಡಿಸನು ಸಂತೋಷಭರಿತನಾಗಿ **"ಯುರೇಕಾ"** ಎಂದು ಬೊಬ್ಬೆ ಹೊಡೆದುದನ್ನು ನೆನಪಿಗೆ ತರುತ್ತದೆ.

ಹೀಗೆ ಎರಡು ಸಂಪೂರ್ಣ ವ್ಯತ್ಯಾಸವಾದ ಕಾಲಾವಸ್ಥೆಗಳಿವೆ. ಪವಿತ್ರ ಖುರ್‌ಆನ್ ಪ್ರಕಾರ ಮನುಷ್ಯನನ್ನು ಉನ್ನತವಾದೊಂದು ಗುರಿಗೆ ತಲಪಲು, ಸೃಷ್ಟಿಕರ್ತನನ್ನು ತಲಪುವ ಮಾರ್ಗದಲ್ಲಿ ಮುಂದುವರಿಯಲಿಕ್ಕಾಗಿ ಸೃಷ್ಟಿಸಲಾಗಿದೆ. ಆರಾಧನೆ ಎಂಬ ಪದದ ವಿಶಾಲ ಅರ್ಥದಲ್ಲಿ ಪವಿತ್ರ ಖುರ್‌ಆನ್ ಹೀಗೆ ಹೇಳಿದೆ: **"ನನ್ನನ್ನು ಆರಾಧಿಸಲಿಕ್ಕೋಸ್ಕರ ಹೊರತು ನಾನು ಜಿನ್ನ್ ಮತ್ತು ಇನ್ಸ್ ವರ್ಗಗಳನ್ನು ಸೃಷ್ಟಿಸಿಲ್ಲ."** (51 :57).

ಸುಖವನ್ನು ಗಳಿಸಲು ಕೈಗೊಳ್ಳುವ ವಿಧಾನಗಳನ್ನು ಪರಿಶೀಲಿಸುವಾಗ ಅವುಗಳನ್ನು ಸಂಪೂರ್ಣವಾಗಿ ನಿಷಿದ್ಧಗೊಳಿಸುವುದನ್ನು ನ್ಯಾಯೀಕರಿಸುವಂತಹ ತಪ್ಪುಗಳನ್ನು ಕಂಡುಹಿಡಿಯಲು ಸಾಧ್ಯವಾಗದು. ವಿಶಿಷ್ಟವಾಗಿ, ಲೋಕದ ಸ್ವತಂತ್ರ ಸಮಾಜಗಳಲ್ಲಿರುವ ಜನರು ಇಸ್ಲಾಮ್ ಇಷ್ಟು ಮಟ್ಟಿಗೆ ಸದಾಚಾರ

**20ನೇ ಪುಟಕ್ಕೆ**

# ಇಂದಿನ ಕಾಲದಲ್ಲಿ ಜಗತ್ತಿನ ವಿಷಮ ಪರಿಸ್ಥಿತಿಯಲ್ಲಿ ಶಾಂತಿಯನ್ನು ಸ್ಥಾಪಿಸಲು ಉಪಯುಕ್ತವಾದ ರೂಪರೇಖೆ ಯಾವುದು?

**ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋನ್ನತ ನೇತಾರ ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಮಾಡಿದ ಭಾಷಣ.**




**(ಇಂದಿನ ಕಾಲದಲ್ಲಿ ಯುದ್ಧ ಮತ್ತು ಸಂಘರ್ಷಗಳ ಕಾರಣದಿಂದ ಲೋಕವು ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿದೆ. ಕಳೆದ ಎರಡು ದಶಕಗಳ ಕಾಲದಲ್ಲಿ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋನ್ನತ ನೇತಾರರೂ ಪಂಚಮ ಖಲೀಫರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರು ಜಾಗತಿಕ ನಾಯಕರಿಗೆ ಎಚ್ಚರಿಕೆ ನೀಡುತ್ತಾ ಇದ್ದಾರೆ – ಅವರು ಶಾಂತಿ ಸ್ಥಾಪನೆಗೋಸ್ಕರ ಪ್ರಯತ್ನಿಸದಿದ್ದರೆ ಅದರಿಂದ ಸಂಭವಿಸಬಹುದಾದ ಘೋರ ಪರಿಣಾಮಗಳ ಬಗ್ಗೆ. ಅಹ್ಮದಿಯಾ ಮುಸ್ಲಿಮ್ ಜಮಾಅತ್ ಏರ್ಪಡಿಸುವ ವಾರ್ಷಿಕ ಪೀಸ್ ಸಿಂಪೋಸಿಯಂ ವಿವಿಧ ಹಿನ್ನೆಲೆಗಳನ್ನು ಹೊಂದಿದ ಜಾಗತಿಕ ನಾಯಕರು ಒಗ್ಗೂಡಿ ಶಾಂತಿ ಸ್ಥಾಪನೆಗೋಸ್ಕರ ಚರ್ಚೆ ನಡೆಸುವ ಒಂದು ವೇದಿಕೆಯಾಗಿ ಪರಿಣಮಿಸಿದೆ. ಈ ವರ್ಷ 1200ಕ್ಕಿಂತ ಹೆಚ್ಚು ಗಣ್ಯ ಅತಿಥಿಗಳು ಈ ಸಿಂಪೋಸಿಯಂನಲ್ಲಿ ಭಾಗವಹಿಸಿದರು. ಅವರ ಪೈಕಿ 550 ಜನರು ವಿವಿಧ ದೇಶಗಳ ರಾಯಭಾರಿಗಳು, ಪಾರ್ಲಿಮೆಂಟ್ ಸದಸ್ಯರು, ವಿದ್ಯಾಭ್ಯಾಸ ಪರಿಣಿತರು ಆಗಿದ್ದು ಅವರು 30 ದೇಶಗಳನ್ನು ಪ್ರತಿನಿಧೀಕರಿಸಿದ್ದರು. 2024ರ ವಾರ್ಷಿಕ ಸಿಂಪೋಸಿಯಂ 18ನೇ ನ್ಯಾಶನಲ್ ಪೀಸ್ ಸಿಂಪೋಸಿಯಂ ಆಗಿದ್ದು ಅದನ್ನು ಲಂಡನಿನ ಬೈತುಲ್ ಫುತೂಹ್ ಮಸ್‌ಜಿದ್‌ನಲ್ಲಿ ಜರಗಿಸಲಾಯಿತು. ಈ ಸಿಂಪೋಸಿಯಂನ ಪ್ರಧಾನ ಭಾಷಣವನ್ನು ಕೆಳಗೆ ನೀಡಲಾಗಿದೆ.)**

ಸಾಂಪ್ರದಾಯಿಕ ಪ್ರಾರ್ಥನೆಗಳ ನಂತರ ಅಹ್ಮದಿಯಾ ಮುಸ್ಲಿಮ್ ಸಂಘಟನೆಯ ಜಾಗತಿಕ ಸರ್ವೋಚ್ಚ ನಾಯಕ, ಪಂಚಮ ಖಲೀಫ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಹೀಗೆ ಹೇಳಿದರು.

ಎಲ್ಲ ಆದರಣೀಯ ಅತಿಥಿಗಳಿಗೆ ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವಬರಕಾತುಹೂ – ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಏರ್ಪಡಿಸಿದ ಈ ಸಮಾರಂಭದಲ್ಲಿ ನಾವೆಲ್ಲರೂ ಪುನಃ ಜಮಾಯಿಸಿರುವುದು ಸಮಾಜದಲ್ಲಿ ತಲೆದೋರಿರುವ ಒಡಕನ್ನು ನಿವಾರಿಸಲು ಮತ್ತು ಜಗತ್ತಿನಲ್ಲಿ ಶಾಂತಿಯನ್ನು ಸ್ಥಾಪಿಸಲು ಉಪಯುಕ್ತವಾದ ಮಾರ್ಗೋಪಾಯಗಳ ಬಗ್ಗೆ ಚಿಂತಿಸಿ ಚರ್ಚಿಸಲಿಕ್ಕೋಸ್ಕರವಾಗಿದೆ.

## ಎರಡು ದಶಕಗಳಿಂದ ಹೆಚ್ಚು ಕಾಲ ನೀಡಲಾದ ಮುನ್ನೆಚ್ಚರಿಕೆ

ಕಳೆದ ಎರಡು ದಶಕಗಳಿಗಿಂತ ಹೆಚ್ಚು ಕಾಲಾವಧಿಯಲ್ಲಿ ನಾನು ಸರಕಾರಗಳನ್ನು, ರಾಜಕಾರಣಿಗಳನ್ನು ಮತ್ತು ಇತರ ಎಲ್ಲ ಜನರನ್ನು ಒತ್ತಾಯಪೂರ್ವಕವಾಗಿ ಅಪೇಕ್ಷಿಸಿದ್ದೆ – ಅವರೆಲ್ಲರೂ ವಿವಿಧ ಸಮುದಾಯಗಳ ಸಾಮಾಜಿಕ ಹೊಂದಾಣಿಕೆಗೋಸ್ಕರ ಮತ್ತು ಲೋಕದಲ್ಲಿ ಶಾಂತಿ ಮತ್ತು ಸೌಹಾರ್ದ ಸ್ಥಾಪಿಸಲು ತಮ್ಮ ಪಾತ್ರವನ್ನು ನಿರ್ವಹಿಸಬೇಕೆಂದು. ಎಲ್ಲ ವಿಧ ಯುದ್ಧಗಳನ್ನು ಅವು ಧರ್ಮದ

ಹೆಸರಲ್ಲಿ ಮಿಥ್ಯವಾಗಿ ಹೂಡಲಾಗಿದ್ದರೂ ಸ್ಪಷ್ಟವಾಗಿ ಭೌಗೋಳಿಕ ರಾಜಕೀಯ ಕಾರಣದಿಂದ ಹೂಡಲಾಗಿದ್ದರೂ ಅವುಗಳನ್ನು ಕೊನೆಗೊಳಿಸುವುದು ಹೇಗೆ ಎನ್ನುವುದರ ಬಗ್ಗೆ ನನ್ನ ಅಭಿಪ್ರಾಯಗಳನ್ನು ಸೂಚಿಸಿದ್ದೆನು. ವಿವಿಧ ದೇಶಗಳ ಮಧ್ಯೆ ನಡೆಯುತ್ತಿರುವ ಯುದ್ಧಗಳನ್ನು ಕೊನೆಗೊಳಿಸುವ ಅತ್ಯಾವಶ್ಯಕತೆಗಳ ಬಗ್ಗೆ ನಾನು ಪ್ರತಿಪಾದಿಸಿದ್ದೆನಲ್ಲದೆ ದೇಶದೊಳಗೆ ವಿವಿಧ ಸಮುದಾಯಗಳ ಮಧ್ಯೆ ಸಂಭವಿಸಿರುವ ವಿರಸತೆಗಳನ್ನು ನಿವಾರಿಸಬೇಕೆಂದೂ ಅಂತಃ ಕಲಹದಿಂದ ಅಶಾಂತಿ ನೆಲಸಿರುವ ದೇಶಗಳಲ್ಲಿ ಶಾಂತಿಯನ್ನು ಸ್ಥಾಪಿಸಲು ಆವಶ್ಯಕತೆ ಬಗ್ಗೆಯೂ ಪ್ರಸ್ತಾಪಿಸಿದ್ದೆನು. ಚರಿತ್ರೆ ಖಂಡಿತವಾಗಿಯೂ ನಮಗೆ ಹೀಗೆ ಕಲಿಸುತ್ತಿದೆ – ದೇಶದ ಆಂತರಿಕ ಸಂಘರ್ಷಗಳು ಬಾಹ್ಯ ಶಕ್ತಿಗಳ ಹಸ್ತಕ್ಷೇಪದ ಕಾರಣದಿಂದ ವೇಗವಾಗಿ ಪ್ರಾದೇಶಿಕ ಯುದ್ಧಗಳಾಗಿ ಪರಿವರ್ತಿತವಾಗುತ್ತವೆ. ಮಾತ್ರವಲ್ಲ, ಬಾಹ್ಯ ಶಕ್ತಿಗಳು ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗೋಸ್ಕರ ಅನ್ಯ ದೇಶಗಳಲ್ಲಿಯೂ ಅಸ್ಥಿರತೆ ಮತ್ತು ಒಡಕುಗಳನ್ನು ಉತ್ತೇಜಿಸುತ್ತವೆ.

ಕುವೈಟ್, ಇರಾಖ್, ಸಿರಿಯಾ ಮತ್ತು ಸೂಡಾನ್ ದೇಶಗಳಲ್ಲಿ ಬಾಹ್ಯ ಶಕ್ತಿಗಳ ಹಸ್ತಕ್ಷೇಪಗಳಿಂದ ಸಂಭವಿಸಿದ ವಿಧ್ವಂಸಕ ಪರಿಣಾಮಗಳನ್ನು ನಾವು ಇತ್ತೀಚೆಗಿನ ದಶಕಗಳಲ್ಲಿ ಕಂಡಿದ್ದೇವೆ. ಇವೆಲ್ಲವುಗಳಿಗಿಂತ ಮಿಗಿಲಾಗಿ ನಾನು ಪದೇ ಪದೇ ಹೀಗೆ ಮುನ್ನೆಚ್ಚರಿಕೆ ನೀಡಿದ್ದೆ – ಪ್ರಮುಖ ಶಕ್ತಿಶಾಲಿ ರಾಷ್ಟ್ರಗಳು ಅವಲಂಬಿಸುವ ಅನ್ಯಾಯಕರ ಧೋರಣೆಗಳಿಂದಲೂ ಲೋಕದ ಬಹುತೇಕ ಭಾಗಗಳಲ್ಲಿ ಜಾರಿಯಲ್ಲಿರುವ ಅನ್ಯಾಯಭರಿತ ರಾಜಕೀಯ, ನ್ಯಾಯ ಸಂಬಂಧವಾದ, ಆರ್ಥಿಕ ಸಂಬಂಧವಾದ ವ್ಯವಸ್ಥೆಗಳ ಕಾರಣದಿಂದಲೂ ತಾರತಮ್ಯತೆಯ ಕಾರಣದಿಂದಲೂ ಜಾಗತಿಕ ಅಸ್ಥಿರತೆ ಮತ್ತು ಅಭದ್ರತೆ ತಲೆದೋರುತ್ತಿದೆ.

ರಾಜಕಾರಣಿಗಳು, ಬುದ್ಧಿಜೀವಿಗಳು ಮತ್ತು ಜನ ಪ್ರತಿನಿಧಿಗಳು ನಾವೆಲ್ಲರೂ ಜಾಗತಿಕ ಶಾಂತಿ ಸ್ಥಾಪನೆಗೋಸ್ಕರ ಕಠಿಣ ಪರಿಶ್ರಮ ಮಾಡಬೇಕೆಂಬ ನನ್ನ ಅಪೇಕ್ಷೆಯನ್ನು ಅಸಂಧಿಗ್ದವಾಗಿ ಒಪ್ಪಿಕೊಂಡಿದ್ದಾರೆ. ಅನೇಕರು ನೇರವಾಗಿ ಮತ್ತು ಪರೋಕ್ಷವಾಗಿ ತಮ್ಮ ಅಭಿಪ್ರಾಯಗಳನ್ನು ಹೀಗೆ ಸೂಚಿಸಿದ್ದರು: ಪ್ರಚಲಿತ ಸಂಘರ್ಷಗಳು ಜಾಗತಿಕ ಯುದ್ಧಕ್ಕೊಯ್ಯುವುದು ಮತ್ತು ಅಣುಬಾಂಬು ಪ್ರಯೋಗದ ಸಾಧ್ಯತೆಗಳಿವೆ ಎಂಬ ನನ್ನ ಅಭಿಪ್ರಾಯವನ್ನು ತಪ್ಪೆಂದು. ಇದು ಅನಾವಶ್ಯಕ ಹತಾಶ ವಾದವೆಂದು ಹಲವರು ಗಣಿಸಿದ್ದರು. ಜಾಗತಿಕ ವಿದ್ಯಮಾನಗಳೊಂದಿಗೆ ನಿಕಟ ಸಂಬಂಧ ಹೊಂದಿದ ರಾಜಕಾರಣಿಗಳು, ವಿದೇಶ ವ್ಯವಹಾರಗಳ ಬಗ್ಗೆ ವಿಮರ್ಶೆ ನಡೆಸುವವರು, ಪತ್ರಿಕಾಕರ್ತರು ದೀರ್ಘ ಕಾಲದ ತನಕ ನನ್ನೊಂದಿಗೆ ಸಹಮತ ಹೊಂದಿರಲಿಲ್ಲ. ಅದು ಅವರು ಲೋಕವನ್ನು ಗುಲಾಬಿ ವರ್ಣದ ಕನ್ನಡಕದ ಮೂಲಕ ವೀಕ್ಷಿಸುತ್ತಿದ್ದ ಕಾರಣದಿಂದ ಅಥವಾ ಚರಿತ್ರೆಯಿಂದ ಪಾಠ ಕಲಿಯಲು ಅವರಿಗಿದ್ದ ಸಾಮರ್ಥ್ಯ ಹೀನತೆಯ ಕಾರಣದಿಂದಾಗಿರಬಹುದು. ಲೋಕದ ರಾಷ್ಟ್ರಗಳ ಪರಸ್ಪರ ಸಂಬಂಧಗಳಲ್ಲಿ ವರ್ಧಿಸುತ್ತಿರುವ ಬಿರುಕನ್ನು ಇತ್ತೀಚೆಗಿನ ದಶಕಗಳಲ್ಲಿ ಅವರು ನಿರ್ಲಕ್ಷಿಸಿದ ಕಾರಣದಿಂದ ಹಾಗೆ ಸಂಭವಿಸಿತು. ಅವರು ತಮಗೆದುರಾಗಿರುವ ಅಪಾಯಕರ ಸ್ಥಿತಿಯನ್ನು ಅಂಗೀಕರಿಸಲು ಸಮ್ಮತಿಸಲಿಲ್ಲ. ಜಾಣ್ನುಡಿ ಪ್ರಕಾರ ಅಜ್ಞಾನವೇ ಪರಮಾನಂದವಾಗಿದೆ.

ಆದರೆ ಈಗ ಯುರೋಪಿನಲ್ಲೂ ಮಧ್ಯ ಪೂರ್ವ ದೇಶಗಳಲ್ಲೂ ಇತರ ಕಡೆಗಳಲ್ಲೂ ಯುದ್ಧಗಳು ನಡೆಯುತ್ತಿರುವಾಗ ಮೇಲೆ ಪ್ರಸ್ತಾಪಿಸಿದ ಜನರು ಸ್ವತಃ ಜಾಗತಿಕ ಯುದ್ಧದ ಬಗ್ಗೆಯೂ ಆ ಯುದ್ಧದಲ್ಲಿ ಅಣುಬಾಂಬು ಬಳಕೆಯಿಂದ ಸಂಭವಿಸಬಹುದಾದ ಊಹಾತೀತ ವಿನಾಶಗಳ ಬಗ್ಗೆಯೂ ಎಚ್ಚರಿಕೆ ನೀಡುತ್ತಿದ್ದಾರೆ. ಹೀಗೆ ಮನವರಿಕೆ ಮಾಡಿಕೊಂಡಿದ್ದರೂ ಬಹುತೇಕ ಜನರು ಈ ಸಂಘರ್ಷಗಳನ್ನು ಕೊನೆಗೊಳಿಸಲು ಏನು ಮಾಡಬೇಕು ಎಂಬುದರ ಬಗ್ಗೆ ಚಿಂತಿಸಲು ಇಷ್ಟಪಡುವುದಿಲ್ಲ ಮತ್ತು ಶಾಂತಿ ಸ್ಥಾಪನೆಗೋಸ್ಕರ ಎದ್ದೇಳುವ ವಾಸ್ತವಿಕ ಕಾಳಜಿ ಭರಿತ ಶಬ್ದಗಳನ್ನು ಆಲಿಸಲು ನಿರಾಸಕ್ತರಾಗಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ನಾನು ಇಂದಿನ ಸಮಾರಂಭದ ಬಗ್ಗೆ ಯೋಚಿಸಿದೆ. ಇಲ್ಲಿ ಇನ್ನೊಮ್ಮೆ ನಾವು ಜಮಾಯಿಸುವುದರಿಂದ ಸಿಗುವ ಪ್ರಯೋಜನವಾದರೂ ಏನು? ಶಕ್ತಿಶಾಲಿಗಳಾದವರು ಮತ್ತು ಪರಿವರ್ತನೆಯನ್ನುಂಟು ಮಾಡಲು ಶಕ್ತರಾದವರು ನಮ್ಮ ಕೋರಿಕೆಗಳನ್ನು ಆಲಿಸದಿರಲು ನಿರ್ಧರಿಸಿರುವಾಗ ನಾವು ಇಲ್ಲಿ ಶಾಂತಿ ಮತ್ತು ನ್ಯಾಯದ ಬಗ್ಗೆ ಪ್ರತಿಪಾದಿಸುವುದರಿಂದ ಸಿಗುವ ಪ್ರಯೋಜನವಾದರೂ ಏನು?

ಅಪ್ರಿಯವಾದ ಸತ್ಯವೇನೆಂದರೆ ಲೋಕದಲ್ಲಿ ಮುಖ್ಯವಾಗಿ ಶಾಂತಿ ಮತ್ತು ಸುರಕ್ಷೆಯನ್ನು ಕಾಪಾಡುವ ಉದ್ದೇಶದಿಂದ ಸ್ಥಾಪಿತವಾದ ಸಂಸ್ಥೆಗಳು ಸಹ ಈಗ ನಿಷ್ಪ್ರಯೋಜಕವಾಗುತ್ತಾ ಇವೆ.

## ಸಂಯುಕ್ತ ರಾಷ್ಟ್ರಸಂಘದ ಶಕ್ತಿಯನ್ನು ಕುಂದಿಸುವ ವೀಟೋ ಪ್ರಯೋಗ

ಉದಾಹರಣೆಗೆ, ಸಂಯುಕ್ತರಾಷ್ಟ್ರ ಸಂಘ ಬಲಹೀನವೂ ಶಕ್ತಿರಹಿತವೂ ಆಗಿರುವ ಒಂದು ಸಂಸ್ಥೆಯಾಗಿ ಪರಿಣಮಿಸಿದೆ. ಕೆಲವು ಪ್ರಧಾನ ಶಕ್ತಿಶಾಲಿ ರಾಷ್ಟ್ರಗಳು ಎಲ್ಲ ಅಧಿಕಾರವನ್ನು ಅದರಲ್ಲಿ ಚಲಾಯಿಸುತ್ತಿವೆ ಮತ್ತು ಬಹುಸಂಖ್ಯೆಯಲ್ಲಿರುವ ರಾಷ್ಟ್ರಗಳ ಅಭಿಪ್ರಾಯಗಳನ್ನು ಜಾರಿಗೊಳ್ಳದಂತೆ ತಮ್ಮ ವೀಟೋ ಅಧಿಕಾರದಿಂದ ತಡೆಗಟ್ಟುತ್ತವೆ. ಪ್ರತಿಯೊಂದು ವಿವಾದಾಂಶವನ್ನು ವಸ್ತುನಿಷ್ಠವಾಗಿ ಪರಿಗಣಿಸದೆ ಶಕ್ತಿಶಾಲಿ ರಾಷ್ಟ್ರಗಳು ತಮ್ಮ ಹಿತಾಸಕ್ತಿಗೆ ಅನುಸಾರವಾಗಿ ಬಣಗಳನ್ನು ಸೃಷ್ಟಿಸಿ ಮತದಾನಗಳನ್ನು ಮಾಡುತ್ತವೆ. ಅಂತಿಮವಾಗಿ ತುರ್ತು ತೀರ್ಮಾನಗಳು ವೀಟೋ ಅಧಿಕಾರ ಹೊಂದಿದ ದೇಶಗಳ ಹಿತಾಸಕ್ತಿಗಳಿಗನುಸಾರವಾಗಿರುತ್ತವೆ. ಶಾಂತಿ ಮತ್ತು ನ್ಯಾಯ ಸ್ಥಾಪನೆಗೋಸ್ಕರ ಪ್ರಾಮಾಣಿಕವಾಗಿ ಪ್ರಯತ್ನಿಸುವುದಕ್ಕೆ ಪ್ರತಿಯಾಗಿ ವೀಟೋ ಅಧಿಕಾರ ಹೊಂದಿದ ರಾಷ್ಟ್ರಗಳು ತಮ್ಮ ಹಿತಾಸಕ್ತಿಗಳು ಅಪಾಯದಲ್ಲಿರುವಾಗ ವೀಟೋ ಅಧಿಕಾರವನ್ನು ಟ್ರಂಪ್‌ಕಾರ್ಡ್ ಆಗಿ ಬಳಸುತ್ತಾರೆ. ಅವರ ತೀರ್ಮಾನಗಳು ಅನ್ಯದೇಶಗಳ ಶಾಂತಿ ಮತ್ತು ಸಮೃದ್ಧಿಗೆ ಹಾನಿಕರವಾಗಿದ್ದರೂ ನಿಷ್ಕಳಂಕ ಜನರ ಜೀವ ಮತ್ತು ಸ್ವತ್ತುಗಳಿಗೆ ನಾಶ ಸಂಭವಿಸುವುದಾದರೂ ಅವರಿಗೆ ಅದರ ಬಗ್ಗೆ ಕಾಳಜಿ ಇಲ್ಲ. ಆದುದರಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ, ವೀಟೋ ಅಧಿಕಾರ ಹೊಂದಿರುವ ರಾಷ್ಟ್ರಗಳಿರುವ ಸಂಸ್ಥೆಯಲ್ಲಿ ನ್ಯಾಯಬದ್ಧತೆ ಎಂದೂ ಇರಲಾರದು.

ಪ್ರಚಲಿತ ಪರಿಸ್ಥಿತಿ ಹೀಗಿದ್ದರೂ ಮುಸ್ಲಿಮರು ಶಾಂತಿ

ಸ್ಥಾಪನೆಗೋಸ್ಕರ ಪ್ರಯತ್ನ ಮಾಡುವುದರಲ್ಲಿ ಹಿಂಜರಿಯಬಾರದೆಂದು ಇಸ್ಲಾಮ್ ಧರ್ಮ ಉಪದೇಶಿಸುತ್ತಾ ಇರುವ ಕಾರಣದಿಂದ ನಾನು ಈ ಸಂದರ್ಭವನ್ನು ಬಳಸಬೇಕೆಂದು ಮನವರಿಕೆ ಮಾಡಿಕೊಂಡಿದ್ದೇನೆ. ನಾವು ಸತ್ಯವನ್ನು ಹೇಳಬೇಕೆಂದು ಇಸ್ಲಾಮ್ ಧರ್ಮ ನಮಗೆ ಉಪದೇಶಿಸುತ್ತಿದೆ. ಸರ್ವಶಕ್ತನಾದ ಅಲ್ಲಾಹನ ಮುಂದೆ ಲೆಕ್ಕವೊಪ್ಪಿಸಲು ಹಾಜರಾಗುವಾಗ ಸತ್ಯ ವಿಶ್ವಾಸಿಯಾದ ವ್ಯಕ್ತಿ ಸತ್ಯವಾಗಿ ಹೇಳಬಹುದು: ತಾನು ಅಲ್ಲಾಹನ ಸೃಷ್ಟಿಗಳನ್ನು ವಿನಾಶದಿಂದ ರಕ್ಷಿಸಲು ತನ್ನ ಸಾಮರ್ಥ್ಯಕ್ಕನುಸಾರವಾಗಿ ಅತ್ಯಂತ ಹೆಚ್ಚು ಪರಿಶ್ರಮಿಸಿರುವುದಾಗಿ.

## ಅಹ್ಮದಿಯಾ ಮುಸ್ಲಿಮ್ ಸಂಘಟನೆ ಶಾಂತಿ ಮತ್ತು ನ್ಯಾಯದ ಸ್ಥಾಪನೆಗೋಸ್ಕರ ಕಠಿಣ ಪರಿಶ್ರಮ ಮಾಡುತ್ತಿದೆ

ಜಿಹಾದ್ ಬಗ್ಗೆ ತಪ್ಪು ಗ್ರಹಿಸಲಾಗಿದ್ದರೂ ತಪ್ಪಾಗಿ ಪ್ರಚಾರ ಮಾಡಲಾಗುತ್ತಿದ್ದರೂ ಅತ್ಯಂತ ದೊಡ್ಡ ಜಿಹಾದ್ ಏನೆಂದು ಇಸ್ಲಾಮಿನ ಪೈಗಂಬರ್[ಸ] ಹೀಗೆ ಹೇಳಿದ್ದಾರೆ: ಕಠಿಣ ಹೃದಯಿಗಳೂ, ಅನ್ಯಾಯದಿಂದ ಕ್ರೂರವಾಗಿ ವರ್ತಿಸುವ ಆಡಳಿತಾಧಿಕಾರಿಗಳ ಮುಂದೆ ಧೈರ್ಯದಿಂದ ಸತ್ಯವನ್ನು ಹೇಳುವುದು ಅತ್ಯಂತ ದೊಡ್ಡ ಜಿಹಾದ್ ಆಗಿದೆ.

ಬಲಹೀನ ದೇಶಗಳು ಮತ್ತು ನನ್ನ ಹಾಗಿರುವ ರಾಜಕೀಯ ಸಂಬಂಧವಿಲ್ಲದ ವ್ಯಕ್ತಿಗಳು ಮಾತನಾಡಲು ಪ್ರಯತ್ನಿಸುವುದಾದರೆ ಆ ಮಾತುಗಳನ್ನು ಅಪೂರ್ವವಾಗಿ ಮೆಚ್ಚಲಾಗುತ್ತಿದೆ. ಹಾಗೆ ಮಾತನಾಡುವವರು ಕಷ್ಟಗಳನ್ನೂ ಪ್ರತಿಬಂಧಗಳನ್ನೂ ಎದುರಿಸಬಹುದಾದ ಸಾಧ್ಯತೆಗಳಿವೆ.

ಹೀಗಿದ್ದರೂ ಅಹ್ಮದಿಯಾ ಮುಸ್ಲಿಮ್ ಸಂಘಟನೆ ಇಸ್ಲಾಮ್ ಧರ್ಮ ತತ್ವಗಳ ಮೇಲೆ ನೆಲೆನಿಂತಿರುವುದರಿಂದ ಯಾವಾಗಲೂ ಶಾಂತಿ ಸ್ಥಾಪನೆಗೋಸ್ಕರ ಮತ್ತು ಶಕ್ತಿಹೀನರಿಗೋಸ್ಕರ ಮತ್ತು ಅನ್ಯಾಯಗಳಿಗೆ ಈಡಾಗಿ ಸಂತ್ರಸ್ತರಾದವರ ಹಕ್ಕುಗಳಿಗೋಸ್ಕರ ನಿಷ್ಕಾಪೂರ್ವಕವಾಗಿ ಕಠಿಣ ಪರಿಶ್ರಮ ನಡೆಸುವುದು. ದೇವನಿಚ್ಛಿಸುವನಾದರೆ ನಾವು ನಮಗೆ ಸಾಧ್ಯವಿರುವ ರೀತಿಯಲ್ಲಿ ನಾವು ಸಂಪರ್ಕಿಸಬಹುದಾದ ರಾಜಕಾರಣಿಗಳು, ಧೋರಣೆ ರೂಪಿಸುವವರು, ಬುದ್ಧಿಜೀವಿಗಳು ಮೊದಲಾದವರನ್ನು ಲೋಕದಲ್ಲಿ ಶಾಂತಿ ಸ್ಥಾಪನೆಗೋಸ್ಕರ ತಮ್ಮ ಪಾತ್ರ ನಿರ್ವಹಿಸಲು ಪ್ರೇರೇಪಿಸುವೆವು. ನಿಶ್ಚಯವಾಗಿಯೂ ನಿಮ್ಮಲ್ಲಿ ಕೆಲವರು ಅರಿತಿರಬಹುದು – ಶಾಂತಿಯನ್ನು ಪೋಷಿಸಲು ಮತ್ತು ಶಾರೀರಿಕವಾಗಿಯೂ ಭಾವನಾತ್ಮಕವಾಗಿಯೂ ಕಠಿಣವಾಗಿ ನೋವನ್ನು ಅನುಭವಿಸುವವರ ಕಷ್ಟ ನಿವಾರಣೆಗೋಸ್ಕರ ನಮ್ಮ ಜಮಾಅತ್ ಮಾಡುತ್ತಿರುವ ಪ್ರಯತ್ನಗಳ ಬಗ್ಗೆ.

## ಎಲ್ಲ ಪ್ರಮುಖ ಧರ್ಮಗಳು ಶಾಂತಿಯನ್ನು ಪ್ರೋತ್ಸಾಹಿಸುತ್ತವೆ

ಈ ಪ್ರಸ್ತಾವನೆಯ ನಂತರ ಲೋಕದಲ್ಲಿ ಶಾಂತಿಯನ್ನು ಹೇಗೆ ಸ್ಥಾಪಿಸಬಹುದು ಎನ್ನುವುದರ ಬಗ್ಗೆ ನನ್ನ ವಿಚಾರಗಳನ್ನು ಪ್ರಸ್ತಾಪಿಸಲು ಇಚ್ಛಿಸುತ್ತೇನೆ. ಧರ್ಮಗಳ ಬಗ್ಗೆ ಹೇಳುವುದಾದರೆ, ಪ್ರಮುಖ ಧರ್ಮಗಳ ಸ್ಥಾಪಕರಾದ ಪ್ರವಾದಿ ಈಸಾ[ಅ], ಪ್ರವಾದಿ ಮೂಸಾ[ಅ] ಅಥವಾ ಬೇರೆ ಯಾವುದಾದರೂ ಧರ್ಮದ ಪ್ರವಾದಿ ಅಥವಾ ಇಸ್ಲಾಮ್ ಧರ್ಮದ ಪ್ರವಾದಿ ಮುಹಮ್ಮದ್[ಸ] ತಮ್ಮ ಅನುಯಾಯಿಗಳೊಂದಿಗೆ ಸಮಾಜದಲ್ಲಿ ಶಾಂತಿಯನ್ನು ಕಾಪಾಡುವುದನ್ನು ನಿರ್ಲಕ್ಷಿಸಲು, ಅನ್ಯಾಯದಿಂದ ಅಕ್ರಮವಾಗಿ ವರ್ತಿಸಲು ಎಂದೂ ಉಪದೇಶಿಸಿಲ್ಲ.

ಅತ್ಯಂತ ಆವಶ್ಯಕ ಸಂದರ್ಭಗಳಲ್ಲಿ ಸೀಮಿತ ಮಟ್ಟದಲ್ಲಿ ಬಲಪ್ರಯೋಗ ಮಾಡಲು ಆ ಪ್ರವಾದಿಗಳು ಅನುಮತಿಸಿರುವರಾದರೂ ಅದರ ಉದ್ದೇಶಲಕ್ಷ್ಯ ಯುದ್ಧವನ್ನೂ ದಬ್ಬಾಳಿಕೆಯನ್ನೂ ಕೊನೆಗೊಳಿಸುವುದಾಗಿತ್ತು.

ಇಸ್ಲಾಮ್ ಬಗ್ಗೆ ಹೇಳುವುದಾದರೆ, ಇಸ್ಲಾಮ್ ಎಂದರೆ ಶಾಂತಿ ಎಂದಾಗಿದೆ ಮತ್ತು ಈ ಧರ್ಮದ ಪ್ರತಿಯೊಂದು ತತ್ವ ಈ ಹೆಸರನ್ನು ಪ್ರತಿಬಿಂಬಿಸುತ್ತದೆ. ಉದಾಹರಣೆಗೆ, ಪವಿತ್ರ ಖುರ್ಆನ್ ಅಧ್ಯಾಯ 42 ವಚನ 41ರಲ್ಲಿ ಸರ್ವಶಕ್ತನಾದ ಅಲ್ಲಾಹನು ಆಜ್ಞಾಪಿಸುತ್ತಾನೆ: ಒಬ್ಬ ವ್ಯಕ್ತಿಯಾಗಲಿ, ದೇಶವಾಗಲಿ ಅನ್ಯರಿಂದ ಕೇಡುಕಿಗೆ ಗುರಿಯಾದರೆ ತದ್ವಿರುದ್ಧವಾಗಿ ಅತಿಕ್ರಮವಾಗಿ ವರ್ತಿಸಬಾರದು. ಪ್ರತೀಕಾರ ಭಾವನೆಯಿಂದ ವರ್ತಿಸಬಾರದು. ಅಲ್ಲಾಹನು ಹೀಗೆಯೂ ಹೇಳಿದ್ದಾನೆ: ಕ್ಷಮಿಸುವುದರಿಂದ ಒಳಿತುಂಟಾಗಬಹುದಾದರೆ ಕ್ಷಮಿಸುವುದೇ ಉತ್ತಮ.

ಪವಿತ್ರ ಖುರ್ಆನ್ ಅಧ್ಯಾಯ 49 ವಚನ 10ರಲ್ಲಿ ಹೀಗೆ ಹೇಳಲಾಗಿದೆ: ಎರಡು ದೇಶಗಳು ಪರಸ್ಪರ ಯುದ್ಧ ಮಾಡಲು ತೊಡಗಿದರೆ ಅಲಿಪ್ತ ಪಕ್ಷಗಳು ಅವುಗಳ ಮಧ್ಯೆ ನ್ಯಾಯ ಮತ್ತು ಔಚಿತ್ಯಪೂರ್ಣವಾದ ಮಧ್ಯಸ್ಥಿಕೆ ನಡೆಸಬೇಕು. ರಾಜಿ ಮಾಡಿಕೊಂಡ ನಂತರ ಒಂದು ಪಕ್ಷವು ಒಪ್ಪಂದದ ಶರತ್ತುಗಳನ್ನು ಉಲ್ಲಂಘಿಸುವುದಾದರೆ ಮತ್ತು ಆಕ್ರಮಣ ಮಾಡುವುದಾದರೆ ಮಧ್ಯಸ್ಥಿಕೆ ವಹಿಸಿದ ದೇಶಗಳು ಅಕ್ರಮಣಕಾರಿ ದೇಶವನ್ನು ಬಲಪ್ರಯೋಗಿಸಿ ತಡೆಗಟ್ಟಬೇಕು. ಆಕ್ರಮಣಕಾರಿ ದೇಶ ಆಕ್ರಮಣದಿಂದ ಹಿಂದೆ ಸರಿದರೆ ಅನ್ಯದೇಶಗಳು ಬಲಪ್ರಯೋಗವನ್ನು ನಿಲ್ಲಿಸಬೇಕು.

## ನ್ಯಾಯದ ಅಸ್ತಿಭಾರದ ಮೇಲೆ ಸುಸ್ಥಿರವಾದ ಶಾಂತಿಯ ಸ್ಥಾಪನೆ

ನ್ಯಾಯದ ಅಸ್ತಿಭಾರದ ಮೇಲೆ ಸುಸ್ಥಿರವಾದ ಶಾಂತಿಯ ಸ್ಥಾಪನೆಯೇ ಮುಖ್ಯ ಉದ್ದೇಶವಾಗಿರಬೇಕು. ಹೋರಾಡುತ್ತಿರುವ ಎರಡು ದೇಶಗಳ ದುರ್ಬಲತೆಯನ್ನು ಮೂರನೆಯ ದೇಶ ತನ್ನ ಸ್ವಾರ್ಥ ಹಿತಾಸಕ್ತಿಗಳಿಗೋಸ್ಕರ ಬಳಸಿ ಅವರ ಹಕ್ಕುಗಳನ್ನು ಕಿತ್ತುಕೊಳ್ಳಬಾರದು.

ಪವಿತ್ರ ಖುರ್ಆನ್ ಪ್ರತಿಪಾದಿಸಿದ ತತ್ವವನ್ನು ಸಂಯುಕ್ತ ರಾಷ್ಟ್ರ ಸಂಘ ಮತ್ತು ಇತರ ಸಂಬಂಧಿತ ಸಂಸ್ಥೆಗಳು ಪಾಲಿಸುವುದಾದರೆ ಸಂಘರ್ಷಗಳು ವೇಗವಾಗಿಯೂ ಸೌಹಾರ್ದ ಪೂರ್ಣವಾಗಿಯೂ ಕೊನೆಗೊಳ್ಳುವವು. ಆದರೆ ದೇಶಗಳು ನೇರವಾಗಿ ಅಥವಾ ತಮ್ಮ ಶಕ್ತಿಶಾಲಿ ಮಿತ್ರ ರಾಷ್ಟ್ರಗಳ ಸಹಾಯದಿಂದ ವೀಟೋ ಅಧಿಕಾರವನ್ನು ಬಳಸುವುದಾದರೆ ನೈಜವಾದ ಶಾಂತಿ ಸ್ಥಾಪನೆಯು ಖಂಡಿತವಾಗಿಯೂ ಅಸಾಧ್ಯವಾಗುವುದು.

ಖೇದಕರವಾದುದೇನೆಂದರೆ, ಸಂಯುಕ್ತ ರಾಷ್ಟ್ರ ಸಂಘ ತನ್ನ ಅಂತರ್ಗತ ನ್ಯಾಯ ವಿಹೀನತೆಯ ಕಾರಣದಿಂದ ತನ್ನ

ಪೂರ್ವವರ್ತಿಯಾಗಿದ್ದ ಲೀಗ್ ಆಫ್ ನೇಶನ್ಸ್ ಸೋತ ಹಾಗೆ ಸೋತು ಹೋಗುವ ಸಾಧ್ಯತೆಗಳಿವೆ. ಅಂತರ್ರಾಷ್ಟ್ರೀಯ ನಿಯಮಗಳು ಬಲಹೀನವಾಗಿದ್ದರೂ ಅವು ಸಂಪೂರ್ಣವಾಗಿ ಕುಸಿದು ಬಿದ್ದರೆ ಅದರ ಪರಿಣಾಮವಾಗಿ ಸಂಭವಿಸುವ ಅರಾಜಕತೆ ಮತ್ತು ವಿನಾಶಗಳು ಊಹಾತೀತವಾಗಿದೆ.

ಲೋಕದಲ್ಲಿ ಈಗ ಅಸಂಖ್ಯಾತ ಸಂಘರ್ಷಗಳು ನಡೆಯುತ್ತಿವೆಯಾದರೂ ಅವುಗಳಲ್ಲಿ ತುರ್ತಾಗಿ ಪರಿಹರಿಸಬೇಕಾದ ಅಪಾಯಕರವಾದ ಸಂಘರ್ಷಗಳು ಇಸ್ರಾಯೇಲ್ ಮತ್ತು ಹಮಾಸ್ ಮಧ್ಯೆ ನಡೆಯುತ್ತಿರುವ ಯುದ್ಧ ಹಾಗೂ ರಶ್ಯ ಮತ್ತು ಉಕ್ರೈನ್ ಮಧ್ಯೆ ನಡೆಯುತ್ತಿರುವ ಯುದ್ಧಗಳಾಗಿವೆ.

ಇಸ್ರಾಯೇಲ್ ಮತ್ತು ಪೆಲೆಸ್ತೀನ್ ಮಧ್ಯೆ ನಡೆಯುತ್ತಿರುವ ಸಂಘರ್ಷ ಒಂದು ಧಾರ್ಮಿಕ ಯುದ್ಧವೆಂದು ಕೆಲವರು ಚಿಂತಿಸುತ್ತಿರಬಹುದು ಅಥವಾ ಹಾಗೆ ಚಿಂತಿಸುವಂತೆ ಮಾಡಿರಬಹುದು. ಆದರೆ ವಾಸ್ತವಿಕವಾಗಿ ಅದು ಭೌಗೋಲಿಕವೂ ರಾಜಕೀಯವೂ ಆಗಿರುವ ಯುದ್ಧವಾಗಿದೆ. ಉಕ್ರೈನ್ ಯುದ್ಧದ ಬಗ್ಗೆ ಹೇಳುವುದಾದರೆ, ಅದು ಭೂಪ್ರದೇಶ ಸ್ವಾಧೀನಪಡಿಸಲಿಕ್ಕೋಸ್ಕರ ಮಾಡುವ ಯುದ್ಧವೇ ಆಗಿದೆ. ಈ ಯುದ್ಧಗಳನ್ನು ಕೊನೆಗೊಳಿಸಲು ಏಕ ಮಾತ್ರ ಮಾರ್ಗ – ನ್ಯಾಯಕ್ಕೆ ಆದ್ಯತೆ ನೀಡಿ ನ್ಯಾಯಬದ್ಧವಾಗಿ ಒಪ್ಪಂದ ಮಾಡಿಕೊಳ್ಳಬೇಕೆಂದು ನಾನು ದೃಢವಾಗಿ ನಂಬುತ್ತೇನೆ. ಆ ಒಪ್ಪಂದ ಬಾಹ್ಯ ಶಕ್ತಿಶಾಲಿ ರಾಷ್ಟ್ರಗಳ ಹಿತಾಸಕ್ತಿಗೆ ಅನುಸಾರವಾಗಿರಬಾರದು. ಹೀಗೆ ಮಾಡುವುದಿಲ್ಲವಾದರೆ ಸಂಯುಕ್ತ ರಾಷ್ಟ್ರ ಸಂಘದಿಂದ ಯಾವ ಪ್ರಯೋಜನವೂ ಇಲ್ಲ. ಅಂತರ್ರಾಷ್ಟ್ರೀಯ ನಿಯಮಗಳಿಂದಲೂ ಯಾವ ಪ್ರಯೋಜನವೂ ದೊರಕಲಾರದು. ಅಂತಹ ಪರಿಸ್ಥಿತಿಯಲ್ಲಿ ಶಕ್ತರಾದವರು ಮಾಡುವುದೇ ಸರಿ ಎಂದು ಘೋಷಿಸುವ ತತ್ವವೇ ಬಲಯುತವಾಗುವುದು.

ಉಕ್ರೈನ್ ಯುದ್ಧಕ್ಕೆ ಸಂಬಂಧಿಸಿ ಹೇಳುವುದಾದರೆ, ರಶ್ಯ ದೇಶಕ್ಕೆ ಸೆಕ್ಯುರಿಟಿ ಕೌನ್ಸಿಲ್‌ನಲ್ಲಿ ವೀಟೋ ಅಧಿಕಾರವಿದೆ. ಅದೇ ರೀತಿ ಉಕ್ರೈನಿಗೂ ವೀಟೋ ಅಧಿಕಾರವಿದೆ ಎಂದು ಹೇಳಬಹುದು. ಏಕೆಂದರೆ ಸೆಕ್ಯುರಿಟಿ ಕೌನ್ಸಿಲ್‌ನಲ್ಲಿ ಸ್ಥಿರವಾದ ಸ್ಥಾನವಿರುವ ಪಾಶ್ಚಿಮಾತ್ಯ ದೇಶಗಳೊಂದಿಗೆ ಉಕ್ರೈನ್ ಮಿತ್ರ ಸಂಬಂಧ ಹೊಂದಿದೆ. ಎರಡು ಪಕ್ಷಗಳು ವೀಟೋ ಅಧಿಕಾರವನ್ನು ತಮಗಿಷ್ಟವಿರುವ ಹಾಗೆ ಬಳಸುವಾಗ ಸೌಹಾರ್ದಮಯ ಒಡಂಬಡಿಕೆಯಾಗಲು ಹೇಗೆ ತಾನೆ ಸಾಧ್ಯ? ಒಂದು ಪಕ್ಷ ತಮಗನುಕೂಲವಾದ ತೀರ್ಮಾನವನ್ನು ವೀಟೋ ಅಧಿಕಾರದಿಂದ ತಡೆಗಟ್ಟಬಹುದೆಂದು ತಿಳಿದಿರುವಾಗ ಅವರು ತಮ್ಮ ನಿಲುವಿನಿಂದ ಒಂದು ಇಂಚಿನಷ್ಟಾದರೂ ಹಿಂದೆ ಸರಿಯಲು ಹೇಗೆ ತಾನೆ ಇಚ್ಛಿಸುವರು?

ಗಾಝಾದ ಯುದ್ಧದ ಬಗ್ಗೆ ಹೇಳುವುದಾದರೆ, ಇಸ್ರಾಯೇಲ್‌ಗೂ ಪೆಲೆಸ್ತೀನ್‌ಗೂ ಬೆಂಬಲಿಗರಿದ್ದಾರೆ. ಈ ಯುದ್ಧ ಪ್ರಾರಂಭವಾಗಿ ಅನೇಕ ತಿಂಗಳುಗಳು ದಾಟಿ ಹೋದವು. ಆದರೆ ವೀಟೋ ಅಧಿಕಾರವನ್ನು ಇಸ್ರಾಯೇಲ್ ಪರವಾಗಿ ಮಾತ್ರ ಚಲಾಯಿಸಲಾಗಿದೆ. ಉದಾಹರಣೆಗೆ, ಈ ವರ್ಷ ಫೆಬ್ರವರಿಯಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಸೆಕ್ಯುರಿಟಿ ಕೌನ್ಸಿಲ್‌ನ 15 ಸದಸ್ಯರಲ್ಲಿ 13 ಸದಸ್ಯರು ಗಾಝಾದಲ್ಲಿ ತಕ್ಷಣ ಯುದ್ಧ ವಿರಾಮ ಘೋಷಿಸಬೇಕೆಂದು ಮತದಾನ ಮಾಡಿದರು. ಆಗ ಯುನೈಟೆಡ್ ಸ್ಟೇಟ್ಸ್ ವೀಟೋ ಅಧಿಕಾರ ಬಳಸಿ ಆ ಠರಾವನ್ನು ಸೋಲಿಸಿತು. ಬಹುಸಂಖ್ಯಾತರ ಅಭಿಪ್ರಾಯವನ್ನು ಈ ರೀತಿ ತಿರಸ್ಕರಿಸುವಾಗ ಶಾಂತಿ ಸ್ಥಾಪನೆಯಾಗುವುದು ಹೇಗೆ ತಾನೆ ಸಾಧ್ಯ? ಇದು ನ್ಯಾಯಬದ್ಧವಾದ ನಡೆವಳಿಕೆ ಅಲ್ಲ. ಅದು ಪ್ರಜಾಪ್ರಭುತ್ವ ಮತ್ತು ಸಮಾನತೆಯ ತತ್ವಗಳನ್ನು ತಿರಸ್ಕರಿಸುವುದಕ್ಕೆ ಸಮವಾಗಿದೆ.

## ಇಸ್ಲಾಮ್ ಧರ್ಮ ಅತ್ಯುತ್ಕೃಷ್ಟ ನ್ಯಾಯವನ್ನು ಪ್ರತಿಪಾದಿಸುತ್ತಿದೆ

ಮನುಷ್ಯ ನಿರ್ಮಿತ ನಿಯಮಗಳಿಗೆ ಪ್ರತಿಯಾಗಿ ಇಸ್ಲಾಮ್ ಧರ್ಮ ತತ್ವಗಳು ನ್ಯಾಯದ ಬಗ್ಗೆ ಎಷ್ಟು ಒತ್ತಿ ಹೇಳಿದೆ ಎಂದರೆ ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 9ರಲ್ಲಿ ಹೀಗೆ ಹೇಳಲಾಗಿದೆ: ಒಂದು ಜನಾಂಗದವರ ಶತ್ರುತ್ವ ಅವರ ವಿರುದ್ಧ ಅನ್ಯಾಯವಾಗಿ ವರ್ತಿಸಲು ನಿಮ್ಮನ್ನು ಪ್ರೇರೇಪಿಸದಿರಲಿ. ಸದಾ ನೀವು ನ್ಯಾಯಯುತವಾಗಿ ವರ್ತಿಸಿರಿ. ಅದು ದೇವಭಕ್ತಿಗೆ ಅತಿ ಸಮೀಪವಾದುದಾಗಿದೆ.

ಧಾರ್ಮಿಕರಲ್ಲದ ಜನರು ಸಹ ಈ ತತ್ವದಲ್ಲಿ ಅಡಕವಾದ ಜಾಣ್ಮೆಯನ್ನು ಗುರುತಿಸಿ ಅದನ್ನು ಪ್ರಾಯೋಗಿಕವಾಗಿ ಬಳಸಿ ನ್ಯಾಯಪಾಲನೆಯ ಈ ಅತ್ಯುತ್ತಮ ಮಾನದಂಡದಿಂದ ಲಾಭ ಪಡೆಯುವರು.

ಇದೇ ಸಮಯದಲ್ಲಿ ನೀವು ಆಶ್ಚರ್ಯಪಡಬಹುದು. ಇಸ್ಲಾಮ್ ಧರ್ಮ ತತ್ವಗಳು ನಾನು ವಿವರಿಸಿದ್ದಂತೆ ಆಗಿದ್ದರೆ ಇಸ್ಲಾಮ್ ಉಗ್ರವಾದಿ ಧರ್ಮ ಎಂದು ಪದೇ ಪದೇ ಏಕೆ ಆಕ್ಷೇಪಿಸಲ್ಪಡುತ್ತದೆ? ಇತ್ತೀಚೆಗೆ ಈ ವಿಷಯ ಚರ್ಚಿಸಲ್ಪಡುವುದು ಕೆಲವು ರಾಜಕಾರಣಿಗಳು ಮಾಡಿದ ಉದ್ರೇಕಕಾರಿ ಮತ್ತು ದಾರಿ ತಪ್ಪಿದ ವಿಮರ್ಶೆಗಳ ಕಾರಣದಿಂದಾಗಿದೆ. ಇದಕ್ಕೆ ಸಂಬಂಧಿಸಿ ಸ್ಪಷ್ಟವಾಗಿ ತಿಳಿದು ಬಂದಿರುವುದೇನೆಂದರೆ ಪವಿತ್ರ ಪೈಗಂಬರ್ ಮುಹಮ್ಮದ್(ಸ) ಮತ್ತು ಅವರ ಖಲೀಫರು ಮಾಡಿದ ಯುದ್ಧಗಳು ಎಲ್ಲವೂ ಪ್ರತಿರೋಧಾತ್ಮಕವಾಗಿದ್ದುವು. ಪವಿತ್ರ ಖುರ್‌ಆನ್ ಪ್ರತಿರೋಧ ಯುದ್ಧ ಮಾಡಲು ಅನುಮತಿಸಿರುವುದು ಅವರು ಶತ್ರುಗಳಿಂದ ಅನೇಕ ವರ್ಷಗಳ ಕಾಲ ನಿರಂತರವಾಗಿ ಪೀಡಿಸಲ್ಪಟ್ಟು ನಿಷ್ಕರುಣೆಯಿಂದ ಆಕ್ರಮಿಸಲ್ಪಟ್ಟಾಗ ಅದನ್ನು ತಡೆಗಟ್ಟಲು ಅಂತಿಮೋಪಾಯವಾಗಿ ಮಾತ್ರವಾಗಿದೆ. ಪವಿತ್ರ ಖುರ್‌ಆನ್ ಅಧ್ಯಾಯ 22 ವಚನ 40ರಲ್ಲಿ ಈ ಅನುಮತಿ ನೀಡಲಾಗಿದೆ. ಆ ವಚನದಲ್ಲಿ ಹೀಗೆ ಹೇಳಲಾಗಿದೆ: ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿಯುದ್ಧ ಮಾಡುವ ಅನುಮತಿ ಇದೆ. ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ.

ಪವಿತ್ರ ಖುರ್‌ಆನ್ ಹೀಗೆ ಸಹ ಪ್ರತಿಪಾದಿಸಿದೆ – ಪ್ರತಿರೋಧಕ್ಕೋಸ್ಕರ ಯುದ್ಧ ಮಾಡಲು ಅನುಮತಿಸಿರುವುದು ಇಸ್ಲಾಮ್ ಧರ್ಮವನ್ನು ಸಂರಕ್ಷಿಸಲು ಮಾತ್ರವಲ್ಲ, ಎಲ್ಲ ಧರ್ಮಗಳನ್ನು ಸಂರಕ್ಷಿಸಲಿಕ್ಕೋಸ್ಕರ ಮಾತ್ರವಲ್ಲ, ಮನಸ್ಸಾಕ್ಷಿ ಸ್ವಾತಂತ್ರ್ಯವನ್ನೂ ವಿಶ್ವಾಸ ಸ್ವಾತಂತ್ರ್ಯವನ್ನೂ ಜೋಪಾನವಾಗಿರಿಸಲಿಕ್ಕೋಸ್ಕರವಾಗಿದೆ. ಪವಿತ್ರ ಖುರ್‌ಆನಿನ ಮುಂದಿನ ವಚನದಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳುತ್ತಾನೆ: ಅಲ್ಲಾಹನು ಜನರಲ್ಲಿ ಕೆಲವರನ್ನು (ಅವರು

ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದುವು. ಅವುಗಳಲ್ಲಿ ದೇವ ನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ಮುಸ್ಲಿಮರು ಎಲ್ಲ ಧರ್ಮಗಳನ್ನೂ ಎಲ್ಲ ಆರಾಧನಾಲಯಗಳನ್ನೂ ಸಂರಕ್ಷಿಸಬೇಕೆಂದು ಆಜ್ಞಾಪಿಸಲಾಗಿದೆಯೇ ಹೊರತು ನಾಶಪಡಿಸಲು ಅಲ್ಲ.

## ಇಸ್ಲಾಮ್ ಪ್ರತಿಪಾದಿಸುವ ಯುದ್ಧಕ್ಕೆ ಸಂಬಂಧಿಸಿದ ನಿಯಮಗಳು ಆಧುನಿಕ ಲೋಕಕ್ಕೆ ಮಾರ್ಗದರ್ಶಕಗಳಾಗಿವೆ

ಪ್ರತಿರೋಧಕ ಯುದ್ಧವನ್ನು ಪ್ರಾರಂಭಿಸಲು ಅನುಕೂಲವಾದ ಶರತ್ತುಗಳು ಈಡೇರಿದಾಗ ಹೋರಾಡುವ ಮುಸ್ಲಿಮ್ ಸೈನ್ಯವು ಇಸ್ಲಾಮಿನ ಪೈಗಂಬರರು(ಸ) ಜಾರಿಗೆ ತಂದ ಕಟ್ಟುನಿಟ್ಟಾದ ನಿಯಮಗಳನ್ನು ಪಾಲಿಸುತ್ತಿತ್ತು. ಹಝ್ರತ್ ಪೈಗಂಬರರು(ಸ) ಹೀಗೆ ಉಪದೇಶಿಸಿದ್ದರು: ವೈಯಕ್ತಿಕ ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸಲು, ಭೂಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತು ಅನ್ಯರ ಮೇಲೆ ಮೇಲ್ಮೈ ಸಾಧಿಸಲು ಎಂದೂ ಯುದ್ಧ ಮಾಡಬಾರದು. ಮುಸ್ಲಿಮರ ವಿರುದ್ಧ ಶತ್ರುಗಳು ಯುದ್ಧ ಹೂಡಿದರೆ ಮಾತ್ರ ಪ್ರತಿರೋಧಾತ್ಮಕ ಯುದ್ಧ ಮಾಡಲು ಅನುಮತಿಸಲಾಗಿದೆ. ಯುದ್ಧವನ್ನು ತಡೆಗಟ್ಟಲು ಅನ್ಯ ದೇಶಗಳು ಸಹಕರಿಸಿ ಅತಿಕ್ರಮಣಗಳನ್ನು ನಿಲ್ಲಿಸಬೇಕು. ಅತಿಕ್ರಮಣವು ಕೊನೆಗೊಂಡರೆ ಅನ್ಯದೇಶಗಳು ಕೂಡಲೆ ಯುದ್ಧವನ್ನು ನಿಲ್ಲಿಸಬೇಕು ಮತ್ತು ಸ್ಥಿರವಾದ ಶಾಂತಿ ಸ್ಥಾಪನೆಗೆ ಪ್ರಯತ್ನಿಸಬೇಕು. ಪವಿತ್ರ ಪೈಗಂಬರ್ ಮುಹಮ್ಮದ್(ಸ) ಯುದ್ಧದಲ್ಲಿ ಭಾಗವಹಿಸದ ನಾಗರಿಕರನ್ನು ಆಕ್ರಮಣಗಳಿಗೆ ಗುರಿಪಡಿಸಬಾರದೆಂದು ಕಟ್ಟುನಿಟ್ಟಾಗಿ ಆಜ್ಞಾಪಿಸಿದ್ದಾರೆ. ಇಂದಿನ ಕಾಲದಲ್ಲಿ ಸಹ ಇಂತಹ ಆಕ್ರಮಣಗಳು ನಡೆಯುತ್ತಾ ಇವೆ. ಯುದ್ಧವನ್ನು ವಿಸ್ತರಿಸಬಾರದೆಂದೂ ಸಾಧ್ಯವಿರುವಷ್ಟು ಸೀಮಿತಗೊಳಿಸಬೇಕೆಂದು ಸಹ ಉಪದೇಶಿಸಲಾಗಿದೆ. ಭೌಗೋಲಿಕವಾಗಿ ಯುದ್ಧವನ್ನು ವಿಸ್ತರಿಸಬಾರದೆಂದೂ ಹೆಚ್ಚು ಸಾಧನ ಸಂಪತ್ತುಗಳನ್ನು ಧ್ವಂಸಗೊಳಿಸಬಾರದೆಂದೂ ಉಪದೇಶಿಸಲಾಗಿದೆ.

ಇಸ್ಲಾಮ್ ಹೀಗೆ ಸಹ ಉಪದೇಶಿಸಿದೆ ಒಂದು ಆರಾಧನಾಲಯವನ್ನು ಶತ್ರುಗಳು ಸೈನಿಕ ಕಾರ್ಯನಿರ್ವಾಹಕ ಕೇಂದ್ರವಾಗಿ ಬಳಸುವುದಿಲ್ಲವಾದರೆ ಆ ಆರಾಧನಾಲಯದ ಪಾವಿತ್ರ್ಯಕ್ಕೆ ಭಂಗವುಂಟುಮಾಡಬಾರದು. ಅದರ ಸಮೀಪ ಕೂಡ ಯುದ್ಧ ಮಾಡಬಾರದು. ಶತ್ರುಗಳ ಆರಾಧನಾಲಯಗಳನ್ನು ಕೆಡವಿ ಹಾಕಬಾರದೆಂದು ಕಟ್ಟುನಿಟ್ಟಾಗಿ ಆಜ್ಞಾಪಿಸಲಾಗಿದೆ. ಶತ್ರು ಸೈನಿಕರ ಮೃತದೇಹಗಳನ್ನು ಊನಗೊಳಿಸುವುದು ಆ ಕಾಲದಲ್ಲಿ ಸಾಮಾನ್ಯವಾಗಿದ್ದರೂ ಅದನ್ನು ಪವಿತ್ರ ಪ್ರವಾದಿ ಮುಹಮ್ಮದ್(ಸ) ತಡೆಗಟ್ಟಿದರಲ್ಲದೆ ಸೈನಿಕರ ಮೃತ ಶರೀರಗಳನ್ನು ಸಂರಕ್ಷಿಸಬೇಕೆಂದೂ ಗೌರವಿಸಬೇಕೆಂದೂ ಉಪದೇಶಿಸಿರುವರು. ಯುದ್ಧದಲ್ಲಿ ಮೋಸಗಾರಿಕೆಯ ತಂತ್ರ ಬಳಸಬಾರದೆಂದು ಸಹ ಉಪದೇಶಿಸಿರುವರು. ಯುದ್ಧ ಕಾಲದಲ್ಲಿ ಮಹಿಳೆಯರನ್ನೂ ಮಕ್ಕಳನ್ನೂ ವೃದ್ಧರನ್ನೂ ಇತರ ನಿಷ್ಕಳಂಕ ನಾಗರಿಕರನ್ನೂ ಎಂದೂ ಆಕ್ರಮಣಗಳಿಗೆ ಗುರಿಪಡಿಸಬಾರದೆಂದು ಉಪದೇಶಿಸಲಾಗಿದೆ. ಇದೇ ರೀತಿ ದೇವಾಲಯಗಳ ಪುರೋಹಿತರು ಮತ್ತು ಇತರ ಧಾರ್ಮಿಕ ನಾಯಕರಿಗೆ ಯಾವ ಹಾನಿಯನ್ನು ಉಂಟುಮಾಡಬಾರದೆಂದೂ ಅವರ ಧಾರ್ಮಿಕ ಅನುಷ್ಠಾನ ಕರ್ಮಗಳನ್ನು ತಡೆಯಬಾರದೆಂದೂ ಉಪದೇಶಿಸಲಾಗಿದೆ.

ಯುದ್ಧ ಕಾಲದಲ್ಲಿ ಸೈನಿಕರು ಸಾರ್ವಜನಿಕರಲ್ಲಿ ಭೀತಿಯನ್ನು ಹರಡಬಾರದೆಂದು ಇಸ್ಲಾಮಿನ ಪವಿತ್ರ ಪೈಗಂಬರ್(ಸ) ಉಪದೇಶಿಸಿದ್ದಾರೆ. ಯುದ್ಧದಲ್ಲಿ ಭಾಗವಹಿಸದ ನಾಗರಿಕರೊಂದಿಗೆ ಕಾರುಣ್ಯದಿಂದ ವರ್ತಿಸಬೇಕೆಂದೂ ಅವರೊಂದಿಗೆ ಅನ್ಯಾಯದಿಂದ ವರ್ತಿಸಬಾರದೆಂದೂ ಉಪದೇಶಿಸಲಾಗಿದೆ. ಮುಸ್ಲಿಮ್ ಸೈನ್ಯಗಳು ತಮ್ಮ ಶಿಬಿರಗಳನ್ನು ಪಟ್ಟಣಗಳ ಸಮೀಪ ಸ್ಥಾಪಿಸಬಾರದೆಂದೂ ಸಾಮಾನ್ಯ ಜನರಿಗೆ ತೊಂದರೆ ಉಂಟುಮಾಡಬಾರದೆಂದು ಸಹ ಪವಿತ್ರ ಪೈಗಂಬರ್(ಸ) ಉಪದೇಶಿಸಿದ್ದಾರೆ. ಯುದ್ಧ ಮಾಡುವಾಗ ವಿರೋಧಿ ಸೈನಿಕರ ಮುಖಕ್ಕೆ ಹೊಡೆಯಬಾರದೆಂದೂ ಶತ್ರು ಸೈನಿಕರಿಗೆ ಅತ್ಯಂತ ಕಡಿಮೆ ಹಾನಿ ತಟ್ಟುವಂತೆ ಪ್ರಯತ್ನಿಸಬೇಕೆಂದು ಸಹ ಉಪದೇಶಿಸಲಾಗಿದೆ.

ಯುದ್ಧ ಕೈದಿಗಳಾಗಿ ಸಂಬಂಧಿಕರಾದ ಜನರು ಬಂಧಿಸಲ್ಪಟ್ಟರೆ ಅವರನ್ನು ಬೇರ್ಪಡಿಸಿ ಇರಿಸಬಾರದೆಂದೂ ಉಪದೇಶಿಸಲಾಗಿದೆ. ಯುದ್ಧ ಕೈದಿಗಳಿಗೆ ಆವಶ್ಯಕವಾದ ಸೌಕರ್ಯಗಳನ್ನು ಒದಗಿಸಬೇಕೆಂದು, ಬಂಧಿಸಿದವರ ಸೌಕರ್ಯಕ್ಕಿಂತ ಬಂಧಿತರ ಸೌಕರ್ಯಕ್ಕೆ ಆದ್ಯತೆ ನೀಡಬೇಕೆಂದು ಸಹ ಉಪದೇಶಿಸಲಾಗಿದೆ. ಒಬ್ಬ ಮುಸ್ಲಿಮನು ತನ್ನ ಬಂಧನದಲ್ಲಿರುವ ಯುದ್ಧ ಕೈದಿಗೆ ಯಾವುದೇ ರೀತಿಯಲ್ಲಿ ಹಾನಿಯನ್ನುಂಟುಮಾಡಿದರೆ ತಕ್ಷಣ ಆ ಯುದ್ಧ ಕೈದಿಯನ್ನು ಬಿಡುಗಡೆಗೊಳಿಸಲಾಗುವುದು.

ಇಸ್ಲಾಮಿನ ಪವಿತ್ರ ಪೈಗಂಬರರು(ಸ) ನೀಡಿದ ಇನ್ನೊಂದು ಉಪದೇಶ ಹೀಗಿದೆ: ಅನ್ಯ ದೇಶಗಳ ರಾಯಭಾರಿಗಳನ್ನೂ ಪ್ರತಿನಿಧಿಗಳನ್ನೂ ಅತ್ಯಂತ ಗೌರವಭಾವದಿಂದ ಕಾಣಬೇಕು. ಅಂತಹ ಜನರು ಯಾವುದಾದರೂ ತಪ್ಪು ಮಾಡಿದರೆ ಶಾಂತಿ ಮತ್ತು ಸೌಹಾರ್ದ ಸ್ಥಾಪನೆಯ ದೃಷ್ಟಿಯಿಂದ ನಿರ್ಲಕ್ಷಿಸಬೇಕು ಎಂದು ಸಹ ಉಪದೇಶಿಸಲಾಗಿದೆ.

ಪವಿತ್ರ ಪೈಗಂಬರರು(ಸ) ಹೀಗೆ ಸಹ ಹೇಳಿದ್ದಾರೆ: ಮುಸ್ಲಿಮರು ಇಸ್ಲಾಮ್ ಪ್ರತಿಪಾದಿಸುವ ಯುದ್ಧಕ್ಕೆ ಸಂಬಂಧಿಸಿದ ಇಸ್ಲಾಮೀ ನಿಯಮಗಳನ್ನು ಉಲ್ಲಂಘಿಸಿ ಯುದ್ಧ ಮಾಡುವುದಾದರೆ ಅವರು ನ್ಯಾಯಕ್ಕೋಸ್ಕರ ಹೋರಾಡುವವರಲ್ಲ. ಅವರು ಕ್ರೂರ ಕೃತ್ಯಗಳನ್ನು ಮಾಡುವವರೂ ಸ್ವಾರ್ಥಾಭಿಲಾಷೆಯಿಂದ ಯುದ್ಧ ಮಾಡುವವರೂ ಆಗಿದ್ದಾರೆ. ನಿಸ್ಸಂಶಯವಾಗಿ ಪ್ರತಿಯೊಂದು ಮುಸ್ಲಿಮ್ ರಾಷ್ಟ್ರ ಈ ಇಸ್ಲಾಮೀ ನಿಯಮಗಳಿಗೆ ಬದ್ಧವಾಗಬೇಕಾಗಿದೆ. ಧರ್ಮವನ್ನು ಬದಿಗಿರಿಸಿ ಹೇಳುವುದಾದರೆ, ಮುಸ್ಲಿಮೇತರ ದೇಶಗಳು ಈ ನಿಯಮಗಳನ್ನು ಪಾಲಿಸುವುದಾದರೆ ಯುದ್ಧ ಪ್ರಾರಂಭವಾದರೂ ಅದರ ಪರಿಣಾಮವಾಗಿ ಪೀಳಿಗೆಗಳಲ್ಲಿ ಆಳವಾಗಿ ಬೇರೂರಿದ ಹಗೆತನ ತಲೆದೋರಲಾರದು.

ಯುದ್ಧ ನಿರತರಾಗಿರುವ ಎಲ್ಲ ದೇಶಗಳು ಅವು ಪಾಶ್ಚಿಮಾತ್ಯ




ದೇಶಗಳಾಗಿರಲಿ, ಇಸ್ಲಾಮೀ ಲೋಕದೊಂದಿಗೆ ಶತ್ರುತ್ವ ಹೊಂದಿದ ದೇಶಗಳಾಗಿರಲಿ ಅಥವಾ ಮುಸ್ಲಿಮ್ ದೇಶಗಳಾಗಿರಲಿ ಅವು ಮನಗಾಣಬೇಕು – ಸಂಘರ್ಷಗಳನ್ನೂ ಯುದ್ಧಗಳನ್ನೂ ಕೊನೆಗೊಳಿಸಲು ನಾನು ವಿವರಿಸಿದ ಇಸ್ಲಾಮೀ ನಿಯಮಗಳನ್ನು ಪಾಲಿಸಬೇಕು. ಹಾಗೆ ಮಾಡುವುದಿಲ್ಲವಾದರೆ ನಾವು ಅತ್ಯಂತ ವಿನಾಶಕಾರಿ ಜಾಗತಿಕ ಯುದ್ಧದ ಪ್ರಪಾತದ ಅಂಚಿನಲ್ಲಿದ್ದೇವೆ. ಆ ಯುದ್ಧದಿಂದ ಅತ್ಯಂತ ಹೆಚ್ಚು ಊಹಾತೀತ ವಿನಾಶಗಳೂ ಹತ್ಯಾಕಾಂಡಗಳೂ ಸಂಭವಿಸುವುವು.

## ಪಾಶ್ಚಾತ್ಯ ವಿದ್ವಾಂಸರ ಪ್ರತಿಕ್ರಿಯೆ

ನಾನು ಇದರ ಮೊದಲು ಹೇಳಿದ ಹಾಗೆ ಈಗ ಅನೇಕ ವ್ಯಕ್ತಿಗಳು ಇಂತಹ ನಿಷ್ಕರ್ಷಗಳಿಗೆ ತಲಪಿದ್ದಾರೆ. ಉದಾಹರಣೆಗೆ, ಕೊಲಂಬಿಯ ಯುನಿವರ್ಸಿಟಿಯ ಅತ್ಯಂತ ಗೌರವಾನ್ವಿತ ಆರ್ಥಿಕ ತಜ್ಞ ಪ್ರೊಫೆಸರ್ ಜೆಫ್ರೀ ಸಾಚ್ಸ್ (Jeffrey Sachs) ಹೀಗೆ ಬರೆಯುತ್ತಾರೆ: "ಲೋಕವು ಈಗ ಅಣುವಿಕ ಮಹಾ ವಿನಾಶದ ಅಂಚಿನಲ್ಲಿರುವುದು ಸ್ವಲ್ಪ ಮಟ್ಟಿಗೆ ಅಲ್ಲ. ಇದಕ್ಕೆ ಕಾರಣವಾಗಿರುವುದು, ಜಾಗತಿಕ ಸಂಘರ್ಷಗಳು ವರ್ಧಿಸುತ್ತಿರುವುದಕ್ಕೆ ಹೇತುವಾದ ಕಾರಣಗಳ ಬಗ್ಗೆ ಪಾಶ್ಚಿಮಾತ್ಯ ರಾಜಕೀಯ ಮುಂದಾಳುಗಳು ಮುಚ್ಚುಮರೆಯಿಲ್ಲದೆ ಹೇಳಿಕೆ ನೀಡದಿರುವುದಾಗಿದೆ."

ಪ್ರೊಫೆಸರ್ ಮುಂದುವರಿಯುತ್ತಾ ಹೇಳುತ್ತಾರೆ: "ಪಶ್ಚಿಮ ಎಂದರೆ ಉದಾತ್ತ, ರಶ್ಯ ಮತ್ತು ಚೈನ ಕೆಟ್ಟದ್ದು ಎಂಬ ಪಾಶ್ಚಿಮಾತ್ಯದ ಹಠ ತೊಟ್ಟ ನಿರೂಪಣೆ ಅವಿವೇಕತನದ ಮತ್ತು ಅಸಾಧಾರಣವಾಗಿ ಅಪಾಯಕಾರಿ ಆಗಿದೆ. ತುರ್ತಾಗಿ ರಾಜಕಾರಣ ನಿರ್ವಹಿಸದಿರಲು ಸಾರ್ವಜನಿಕ ಅಭಿಪ್ರಾಯವನ್ನು ಸ್ವಾಧೀನಪಡಿಸುವಂತೆ ಮಾಡುವ ಪ್ರಯತ್ನ ಇದಾಗಿದೆ."

ಪ್ರೊಫೆಸರ್ ಪುನಃ ಹೇಳುತ್ತಾರೆ: "ಎಲ್ಲದಕ್ಕಿಂತಲೂ ಮುಖ್ಯವಾಗಿ ಅತ್ಯಂತ ಹೆಚ್ಚು ಅಪಾಯಕರವಾದ ಕಾಲದಲ್ಲಿ ಯುರೋಪಿಯನ್ ನಾಯಕರು ಯುರೋಪಿನ ಭದ್ರತೆಗೋಸ್ಕರ ಯು.ಎಸ್. ಪ್ರಾಬಲ್ಯಕ್ಕೆ ಮೊರೆಹೊಗದೆ ವಾಸ್ತವಿಕ ಮಾರ್ಗಗಳನ್ನು ಅನ್ವೇಷಿಸಬೇಕು. ಯುರೋಪಿಯನ್ ಭದ್ರತೆಯ ವ್ಯವಸ್ಥೆ ಎಲ್ಲ ಯುರೋಪಿಯನ್ ದೇಶಗಳ ಭದ್ರತೆಯನ್ನು ಗೌರವಿಸಬೇಕು. ಉಕ್ರೈನ್ ಮಾತ್ರವಲ್ಲ, ಕಪ್ಪು ಸಮುದ್ರದ ತನಕ ವಿಸ್ತರಿಸುವ ನೇಟೋವನ್ನು ಎದುರಿಸುವ ರಶ್ಯ ಸಹ ಆ ದೇಶಗಳಲ್ಲಿ ಸೇರಿದೆ. ಯುರೋಪಿನ ಮತ್ತು ಜಾಗತಿಕ ಭದ್ರತೆಗೆ ಈ ಸಂದರ್ಭದಲ್ಲಿ ಆವಶ್ಯಕವಾದುದು ರಾಜ ತಾಂತ್ರಿಕ ಕ್ರಮಗಳೇ ಹೊರತು ಸೈನಿಕ ಕಾರ್ಯಾಚರಣೆಗಳಲ್ಲ."

ಗಾಝಾದಲ್ಲಿ ಇಸ್ರಾಯೇಲ್ ಮತ್ತು ಹಮಾಸ್ ಮಧ್ಯೆ ನಡೆಯುತ್ತಿರುವ ಯುದ್ಧದ ಬಗ್ಗೆ ಬಹಳ ಬರೆಯಲಾಗಿದೆ ಮತ್ತು ಹೇಳಿಕೆಗಳನ್ನು ನೀಡಲಾಗಿದೆ. ಗಾಝಾದ ದಾರುಣ ಸ್ಥಿತಿ ದಿನಗಳೆಂದಂತೆ ಕೆಟ್ಟು ಹೋಗುತ್ತಾ ಇದೆ. ಇತ್ತೀಚೆಗೆ ಯು.ಎಸ್. ಸೆನೆಟರ್ ಬೆರ್ನೀ ಸ್ಯಾಂಡರ್ಸ್ ಸ್ವತಃ ಯಹೂದಿಯಾಗಿದ್ದರೂ ಇಸ್ರಾಯೇಲ್ ಸರಕಾರದ ಕ್ರಮಗಳನ್ನು ಖಂಡಿಸಿರುವರು. ಅವರು ಒಂದು ಸಂದರ್ಶನದಲ್ಲಿ ಹೀಗೆ ಹೇಳಿದರು: ನೆತನ್‌ಯಾಹು ಮತ್ತು ಅವರ ಬಲಪಂಥೀಯ ಸರಕಾರ ಮಾಡುತ್ತಿರುವುದು ವಿವರಿಸಲು ಮತ್ತು ಮಾತನಾಡಲು ಅಸಾಧ್ಯವಾದ ರೀತಿಯಲ್ಲಾಗಿದೆ. ಇಷ್ಟರ ತನಕ ಇಪ್ಪತ್ತೈದು, ಇಪ್ಪತ್ತಾರು ಸಾವಿರ ಜನರು ಗಾಝಾದಲ್ಲಿ ಕೊಲ್ಲಲ್ಪಟ್ಟಿದ್ದಾರೆ. (ಇದು ಸಂದರ್ಶನ ನಡೆಸಿದ ಕಾಲದ ಲೆಕ್ಕವಾಗಿದೆ. ಈಗ ಕೊಲ್ಲಲ್ಪಟ್ಟವರ ಸಂಖ್ಯೆ ಅದಕ್ಕಿಂತ ಹೆಚ್ಚಾಗಿದೆ). ಕೊಲ್ಲಲ್ಪಟ್ಟವರಲ್ಲಿ ಮೂರನೆಯ ಎರಡು ಭಾಗ ಮಹಿಳೆಯರು ಮತ್ತು ಮಕ್ಕಳು. 65000 ಜನರು ಗಾಯಗೊಂಡಿದ್ದಾರೆ. ಗಾಝಾದ ಶೇಕಡ 70ರಷ್ಟು ವಾಸ ಸ್ಥಳಗಳು ಮತ್ತು ಕಟ್ಟಡಗಳು ಧ್ವಂಸಗೊಳಿಸಲ್ಪಟ್ಟಿವೆ. 1.8 ಮಿಲಿಯ ಜನರು ತಮ್ಮ ಮನೆಗಳಿಂದ

ಹೊರಹಾಕಲ್ಪಟ್ಟಿದ್ದಾರೆ. ಅವರೆಲ್ಲಿಗೆ ಹೋಗಿದ್ದಾರೆಂದು ದೇವನಿಗೆ ಮಾತ್ರ ತಿಳಿದಿದೆ."

ಸೆನೆಟರ್ ಸ್ಯಾಂಡರ್ಸ್ ಪುನಃ ಹೇಳಿದರು: "ಈಗ ಎಲ್ಲರೂ ನನ್ನನ್ನು ಆಲಿಸುವರೆಂದು ನಾನು ಪ್ರತೀಕ್ಷಿಸುತ್ತೇನೆ. ಲಕ್ಷಗಟ್ಟಲೆ ಮಕ್ಕಳು ಗಾಝಾದಲ್ಲಿ ಹಸಿವೆಯಿಂದ ಸಾಯುವ ಸಾಧ್ಯತೆಗಳು ಇರುವಾಗ ಯುನೈಟೆಡ್ ಸ್ಟೇಟ್ಸ್‌ನಲ್ಲಿರುವ ನಾವು ಇಸ್ರಾಯೇಲ್‌ಗೆ ಆರ್ಥಿಕ ಸಹಾಯ ನೀಡುವುದರಿಂದ ನಾವು ಇಸ್ರಾಯೇಲ್‌ನ ಕುಕೃತ್ಯಗಳಲ್ಲಿ ಸಹಭಾಗಿಗಳಾಗುತ್ತೇವೆ. ಪೆಲೆಸ್ತೀನ್ ಜನರ ವಿರುದ್ಧ ನಡೆಸುವ ಈ ಯುದ್ಧಕ್ಕೋಸ್ಕರ ನೇತನ್‌ಯಾಹುಗೆ ನಾನು ಇನ್ನೊಂದು ನಿಕೆಲ್ ನಾಣ್ಯ ನೀಡಿದರೂ ನಾನು ಶಪಿಸಲ್ಪಡುವೆನು."

ಮಧ್ಯಪೂರ್ವದಲ್ಲಿ ವಿವಾದ ಪರಿಹಾರ ಹೇಗೆ ಸಾಧ್ಯ? ಎಂದು ಪ್ರಶ್ನಿಸಿದಾಗ ಸೆನೆಟರ್ ಸ್ಯಾಂಡರ್ಸ್ ಹೇಳಿದರು: "ಈ ಪ್ರದೇಶದ ಚರಿತ್ರೆ ಭಯಾನಕವಾಗಿದೆ. ಆರು ಮಿಲಿಯ ಯಹೂದಿಯರ ಸಾಮೂಹಿಕ ಹತ್ಯೆ ಅದಕ್ಕೆ ಸಂಬಂಧಿಸಿದೆ. ಲಕ್ಷಾಂತರ ಪೆಲೆಸ್ತೀನ್ ನಿವಾಸಿಗಳು ತಮ್ಮ ಮನೆಗಳಿಂದ ಹೊರಹಾಕಲ್ಪಟ್ಟ ವಿಷಯವಿದೆ. ಕೊನೆಗೆ ಪೆಲೆಸ್ತೀನ್ ಜನತೆ ತಮ್ಮದೇ ಆದ ಒಂದು ತಾಯ್ನಾಡು ಹೊಂದುವ ಅರ್ಹತೆ ಇದೆ. ಆದುದರಿಂದ ನಾವು ಎರಡು ದೇಶಗಳ ಪರಿಹಾರ ಮಾರ್ಗದ ಬಗ್ಗೆ ಮಾತನಾಡುತ್ತೇವೆ."

ನಾನು ಮೇಲೆ ಉಲ್ಲೇಖಿಸಿದ ಇಬ್ಬರಲ್ಲದೆ ಅನೇಕ ಇತರ ವಿಶ್ಲೇಷಣೆಗಾರರು ನಾನು ದೀರ್ಘಕಾಲದಿಂದ ಮುನ್ನೆಚ್ಚರಿಕೆ ನೀಡುತ್ತಾ ಇದ್ದ ಲೋಕದ ವಿಷಮ ಸ್ಥಿತಿಯ ಬಗ್ಗೆ ಸಮಾನ ತೀರ್ಮಾನಕ್ಕೆ ತಲಪುತ್ತಿದ್ದಾರೆ. ನಾನು ಇದರ ಬಗ್ಗೆ ತೃಪ್ತನಾಗಿಲ್ಲ. ನಾನು ಹೃತ್ಪೂರ್ವಕವಾಗಿ ಪ್ರತೀಕ್ಷಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ. ಲೋಕ ಬೇಗನೆ ಪ್ರಜ್ಞೆಯನ್ನು ಹೊಂದಲಿ. ಈಗ ನಡೆಯುತ್ತಿರುವ ಕ್ರೂರ ಕೃತ್ಯಗಳು ಮತ್ತು ಯುದ್ಧಗಳು ಲೋಕದಲ್ಲಿ ಕೊನೆಗೊಳ್ಳುವಂತಾಗಲಿ. ನನ್ನ ಅಭಿಪ್ರಾಯದಲ್ಲಿ ಖಂಡಿತವಾಗಿಯೂ ಇಸ್ರಾಯೇಲ್ ಮತ್ತು ಹಮಾಸ್ ಅಥವಾ ಪೆಲೆಸ್ತೀನ್ ಮಧ್ಯೆ ಪೂರ್ಣ ಪ್ರಮಾಣದ ಯುದ್ಧ ವಿರಾಮ ಸ್ಥಾಪಿತವಾಗಬೇಕು. ಅದೇ ರೀತಿ ಉಕ್ರೈನ್ ಮತ್ತು ರಶ್ಯ ಮಧ್ಯದ ಯುದ್ಧದಲ್ಲಿಯೂ ಪೂರ್ಣ ಪ್ರಮಾಣದ ಯುದ್ಧ ವಿರಾಮ ಸ್ಥಾಪಿತವಾಗಬೇಕು.

ಆದುದರಿಂದ ಮಿತ್ರ ರಾಷ್ಟ್ರಗಳನ್ನು ಉತ್ತೇಜಿಸುವುದಕ್ಕೆ ಪ್ರತಿಯಾಗಿ ಎಲ್ಲ ದೇಶಗಳು ಸಂತ್ರಸ್ತರಿಗೆ ನೆರವು ತಲಪಿಸುವ ಬಗ್ಗೆ ಆದ್ಯತೆ ನೀಡಬೇಕು ಮತ್ತು ಸ್ಥಿರವಾಗಿ ಶಾಂತಿಯನ್ನು ಕಾಪಾಡುವ ಒಪ್ಪಂದಗಳು ಆಗುವಂತೆ ಮಾಡಬೇಕು.

ನಾವು ಏನನ್ನೂ ಮಾಡದಿದ್ದರೆ ಈ ಯುದ್ಧಗಳು ಇನ್ನಷ್ಟು ಉಲ್ಬಣಗೊಳ್ಳುವುವು. ಅಸಂಖ್ಯಾತ ನಿರಪರಾಧಿ ಜನರಿಗೆ ಜೀವ ಹಾನಿ ಸಂಭವಿಸುವುದು. ನಾವೇ ನಮ್ಮ ನಾಶಕ್ಕೆ ಹೊಣೆಗಾರರಾದೆವೆಂದು ಚರಿತ್ರೆ ತಿರಸ್ಕಾರ ಭಾವದಿಂದ ನಮ್ಮನ್ನು ದೂಷಿಸುವುದು.

## ನಮ್ಮ ಮುಂದಿನ ಪೀಳಿಗೆಗಳ ಸಂರಕ್ಷಣೆ

ಕೊನೆಯದಾಗಿ ಹೇಳುವುದೇನೆಂದರೆ, ನಮ್ಮ ಮುಂದಿನ ಪೀಳಿಗೆಗಳು ಆಣವಿಕ ಯುದ್ಧದ ದುಷ್ಪರಿಣಾಮವಾಗಿ ಅಂಗವಿಕಲರಾಗಿ ಜನಿಸುವುದನ್ನು ತಡೆಗಟ್ಟಲು ಮತ್ತು ಅವರನ್ನು ನ್ಯೂನತೆಗಳಿಂದಲೂ ಖಿನ್ನತೆಗಳಿಂದಲೂ ರಕ್ಷಿಸಲು ನಾವು ಇಚ್ಛಿಸುವುದಾದರೆ ಅವರ ಶಾಪಗಳಿಂದಲೂ ಗೋಳಾಟಗಳಿಂದಲೂ ನಮ್ಮನ್ನು ರಕ್ಷಿಸಿಕೊಳ್ಳಲು ನಾವು ತುರ್ತಾಗಿ ಮತ್ತು ಜಾಣ್ಮೆಯಿಂದ ವರ್ತಿಸಬೇಕು. ರಾಜಕಾರಣಿಗಳು ಮತ್ತು ಧೋರಣೆಗಳನ್ನು ರೂಪಿಸುವವರಿಗೆ ಸಮೀಪ ವರ್ತಿಗಳಾದ ಜನರು ದೀರ್ಘಕಾಲೀನ ಹಿತಕರವಾದ ಕ್ರಮಗಳನ್ನು ಮಾನವರಿಗೋಸ್ಕರ ಕೈಗೊಳ್ಳಬೇಕು ಮತ್ತು ತಮ್ಮ ಮೇಧಾವಿತ್ವವನ್ನು ಅನ್ಯರ ವಿರುದ್ಧ ಪ್ರಕಟಿಸುವ ಇಚ್ಛೆಯಿಂದ ಅಂಧರಾಗಿ ವರ್ತಿಸಬಾರದು. ರಾಷ್ಟ್ರೀಯ, ರಾಜಕೀಯ ಮತ್ತು ಇತರ ಸ್ವಾರ್ಥ ಹಿತಾಸಕ್ತಿಗಳನ್ನು ಬದಿಗಿರಿಸಿ ನಾವು ಒಗ್ಗೂಡಬೇಕು ಮತ್ತು ನಮ್ಮ ಮುಂದಿನ ಪೀಳಿಗೆಗಳಿಗೆ ಸಮೃದ್ಧಿ ಭರಿತ ಲೋಕವನ್ನು ಖಾತರಿಪಡಿಸಬೇಕು. ನಾವು ನಮ್ಮ ಶಕ್ತಿ ಸಾಮರ್ಥ್ಯಗಳನ್ನು ಲೋಕದಲ್ಲಿ ವಾಸ್ತವಿಕ ಶಾಂತಿಯನ್ನು ಸ್ಥಾಪಿಸಲು ಬಳಸಬೇಕು. ಆ ಮೂಲಕ ನಾವು ಅಸಮತ್ವ, ದ್ವೇಷ ಮತ್ತು ರಕ್ತಪಾತ ಭರಿತ ಲೋಕಕ್ಕೆ ಪ್ರತಿಯಾಗಿ ಪ್ರತೀಕ್ಷೆ ಭರಿತ ಲೋಕದಲ್ಲಿ ಜೀವಿಸುವವರಾಗಬೇಕು.

ಅಂತಿಮವಾಗಿ, ನಮ್ಮ ಎಲ್ಲ ಅತಿಥಿಗಳಿಗೆ ಅವರು ಇಲ್ಲಿಗೆ ಬಂದು ನಮ್ಮೊಂದಿಗೆ ಈ ಸಮಾರಂಭದಲ್ಲಿ ಭಾಗವಹಿಸಿದುದಕ್ಕೋಸ್ಕರ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನಾನು ದೀರ್ಘವಾಗಿ ಮಾತಾನಾಡಿದ ಬಗ್ಗೆ ಕ್ಷಮೆಯನ್ನು ಕೋರುತ್ತೇನೆ. ಆದರೆ ಲೋಕದ ಇಂದಿನ ವಿಷಮ ಪರಿಸ್ಥಿತಿಯಲ್ಲಿ ಹಾಗೆ ಮಾಡಬೇಕಾಯಿತು. ನಿಮಗೆ ಇನ್ನೊಮ್ಮೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನಿಮಗೆ ಬಹಳ ಧನ್ಯವಾದಗಳು.

(Review of Religions April 2024 ಸಂಚಿಕೆಯಿಂದ.
**ಅನುವಾದಕ: ಎಮ್. ಉಬೈದುಲ್ಲಾ)**

♦

# LOVE FOR ALL - HATRED FOR NONE
# ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ

# ಜಾಗತಿಕ ಶಾಂತಿ ಇಸ್ಲಾಮಿನ ಬೋಧನೆಗಳ ಬೆಳಕಿನಲ್ಲಿ

## 2022ರ ಜಮಾಅತ್ ಅಹ್ಮದಿಯಾ ಜರ್ಮನಿಯ ವಾರ್ಷಿಕ ಸಮಾರೋಪ ಸಮ್ಮೇಳನದಲ್ಲಿ ಅಹ್ಮದಿಯಾ ಜಮಾಅತಿನ ಐದನೇ ಖಲೀಫರು ಆಗಸ್ಟ್ 21ರಂದು ಮಾಡಿದ ಭಾಷಣ

ಇಸ್ಲಾಮಿನ ಸಾಂಪ್ರದಾಯಿಕ ಪ್ರಾರ್ಥನೆಗಳ ನಂತರ ಹುಝೂರ್ ಹೇಳಿದರು:

ಅಲ್ಲಾಹನ ಅಪಾರವಾದ ಅನುಗ್ರಹದಿಂದ ಪ್ರಪಂಚದ ಪ್ರಸ್ತುತ ಪರಿಸ್ಥಿತಿಗಳ ಹೊರತಾಗಿಯೂ ಜರ್ಮನಿಯ ಅಹ್ಮದಿಯಾ ಜಮಾಅತಿಗೆ ವಾರ್ಷಿಕ ಸಮ್ಮೇಳನವನ್ನು ನಡೆಸಲು ಸೌಭಾಗ್ಯ ಲಭಿಸಿದೆ. ಕಳೆದ ವರ್ಷಕ್ಕಿಂತ ಹೆಚ್ಚು ವಿಸ್ತಾರವಾದ ವ್ಯವಸ್ಥೆಗಳೊಂದಿಗೆ ಈ ಜಲ್ಸವನ್ನು ಆಯೋಜಿಸಲಾಗಿದೆ.

ಮೊದಲು, ಕೋವಿಡ್ ಜಗತ್ತನ್ನು ತೊಂದರೆಗೀಡು ಮಾಡಿ ಅದರ ಸಮಸ್ಯೆ ಇನ್ನೂ ಕೊನೆಗೊಂಡಿಲ್ಲದಿರುವಾಗಲೇ ಜಗತ್ತಿನಲ್ಲಿ ಈಗ ಯುದ್ಧಗಳ ಪರಿಸ್ಥಿತಿ ನಿರ್ಮಾಣವಾಗಿದೆ ಮತ್ತು ಅದು ಜಗತ್ತನ್ನು ಅತ್ಯಂತ ಅಪಾಯಕಾರಿ ಹಂತಕ್ಕೆ ತಂದು ನಿಲ್ಲಿಸಿದೆ. ಪ್ರಪಂಚದ ಯಾವುದೇ ಪ್ರದೇಶವು ಈ ಸನ್ನಿಹಿತ ವಿಪತ್ತಿನಿಂದ ಸುರಕ್ಷಿತವಾಗಿಲ್ಲ ಮತ್ತು ಜನರು ಏಕದೇವನ ಕಡೆಗೆ ತಿರುಗದಿದ್ದರೆ ದುರಂತದಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಯುದ್ಧದ ಪರಿಸ್ಥಿತಿ, ಗಲಭೆಗಳ ಪರಿಸ್ಥಿತಿ, ಅವು ಉದ್ಭವಿಸಿದ ಅಥವಾ ಸಂಭವಿಸುತ್ತಿರುವ ಪ್ರದೇಶಗಳು ಮತ್ತು ದೇಶಗಳ ನಾಶದ ಪರಿಸ್ಥಿತಿಗಳು ನಮ್ಮಿಂದ ಸಾವಿರಾರು ಮೈಲಿ ದೂರದಲ್ಲಿವೆ ಮತ್ತು ನಾವು ಸುರಕ್ಷಿತವಾಗಿರುತ್ತೇವೆ ಎಂಬ ನಂಬಿಕೆಯಲ್ಲಿ ಮೊದಲೆಲ್ಲ ಯುರೋಪ್ ಮತ್ತು ಪಾಶ್ಚಿಮಾತ್ಯ ದೇಶಗಳು ಕುಳಿತಿದ್ದವು. ಪರಿಸ್ಥಿತಿ ಹದಗೆಟ್ಟಿದೆ, ಬಾಂಬುಗಳು ಬೀಳುತ್ತಿವೆ, ಜನರು ಸಾಯುತ್ತಿದ್ದಾರೆ, ಮಹಿಳೆಯರು ವಿಧವೆಯರಾಗುತ್ತಿದ್ದಾರೆ, ಮಕ್ಕಳು ಅನಾಥರಾಗುತ್ತಿದ್ದಾರೆ, ಜನರು ಅಂಗವಿಕಲರಾಗುತ್ತಿದ್ದಾರೆ, ಏಷ್ಯಾ ಮತ್ತು ಮಧ್ಯಪ್ರಾಚ್ಯದಲ್ಲಿ ಮತ್ತು ಬಡ ದೇಶಗಳಲ್ಲಿ ಅವು ನಡೆಯುತ್ತಿವೆ, ಅದರಿಂದ ನಮಗೆ ಏನಾಗಲಿಕ್ಕಿದೆಯೆಂದು ಅಭಿವೃದ್ಧಿ ಹೊಂದಿದ ದೇಶಗಳು ಭಾವಿಸುತ್ತಿದ್ದುವು. ಅವರ ಶಸ್ತ್ರಾಸ್ತ್ರಗಳು ಮಾರಾಟವಾಗುತ್ತಿರಲಿಕ್ಕಾಗಿ ಅಭಿವೃದ್ಧಿ ಹೊಂದಿದ ದೇಶಗಳು ಈ ದೇಶಗಳಿಗೆ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಲೇ ಇರುತ್ತವೆ. ಅಭಿವೃದ್ಧಿಯೇತರ ದೇಶದ ಜನರು ಸತ್ತರೆ ಸಾಯಲಿ ಅದರಿಂದ ನಮಗೇನಾಗಲಿಕ್ಕಿದೆ ಎಂದು ಭಾವಿಸುತ್ತಾರೆ. ಆದರೆ ಅಂತಹ ಸ್ಥಿತಿ ತಮಗೂ ಬರಬಹುದೆಂಬುದನ್ನು ಮರೆತು ತಮ್ಮ ಪ್ರಗತಿಯ ಬೆನ್ನತ್ತಿರುವ ಅವರ ಬುದ್ಧಿ ಭ್ರಮಣವಾಗಿದೆ ಹಾಗು ಅವರ ಕಣ್ಣುಗಳು ಕುರುಡಾಗಿವೆ. ಈಗ ಯುರೋಪಿನಲ್ಲೂ ಯುದ್ಧದ ಪರಿಸ್ಥಿತಿ ನಿರ್ಮಾಣವಾಗಿರುವುದನ್ನು ಇಡೀ ಜಗತ್ತೇ ನೋಡುತ್ತಿದೆ. ಉಕ್ರೇನ್‌ನಿಂದಾಗಿ ರಷ್ಯಾ ಮತ್ತು ನ್ಯಾಟೋ ದೇಶಗಳು ಮುಖಾಮುಖಿಯಾಗಿ ನಿಂತಿವೆ. ಕೊನೆಗೆ ಯಾರು ಮೇಲುಗೈ ಸಾಧಿಸುತ್ತಾರೆ ಅಥವಾ ಎರಡೂ ಕಡೆಯವರಿಗೆ ಎಷ್ಟು ಹಾನಿಯಾಗುತ್ತದೆ ಎಂಬುದು ಅಲ್ಲಾಹನೇ ಬಲ್ಲನು. ಆದರೆ ಇದರ ಪರಿಣಾಮಗಳು ತುಂಬಾ ಅಪಾಯಕಾರಿ ಮತ್ತು ಇನ್ನೂ ಬುದ್ಧಿವಂತಿಕೆಯಿಂದ ವರ್ತಿಸದಿದ್ದರೆ, ಭಯಾನಕ ಅನಾಹುತದಲ್ಲಿ ಅಂತ್ಯಗೊಳ್ಳುತ್ತದೆ ಎಂಬುದು ಖಚಿತ. ಈಗ ತೈವಾನಿನ ವಿಷಯವೂ ಎದ್ದಿರುವುದನ್ನು ನಾವು ಕಾಣುತ್ತಿದ್ದೇವೆ ಮತ್ತು ಇಡೀ ಜಗತ್ತು ಈಗ ಭಯಾನಕ ಯುದ್ಧದ ಅಂಚಿನಲ್ಲಿದೆ ಎಂಬುದು ಸ್ಪಷ್ಟವಾಗಿದೆ. ಈ ಕಾಲದಲ್ಲಿ ಸಂಭವಿಸಲಿರುವುದರ ಬಗ್ಗೆ ವಾಗ್ದತ್ತ ಮಸೀಹರು ಶಕ್ತಿಯುತವಾಗಿ ಹೀಗೆ ಎಚ್ಚರಿಸಿದ್ದರು: "ಎಲೈ ಯುರೋಪ್, ನೀನು ಸುರಕ್ಷಿತವಲ್ಲ, ಎಲೈ ಏಷ್ಯಾ ನೀನೂ ಸುರಕ್ಷಿತವಾಗಿಲ್ಲ ಮತ್ತು ಎಲೈ ದ್ವೀಪ ನಿವಾಸಿಗಳೇ, ಯಾವುದೇ ಮಿಥ್ಯಾ ದೇವರು ನಿಮ್ಮ ಸಹಾಯಕ್ಕೆ ಬರಲಾರರು. ನಗರಗಳು ಬೀಳುತ್ತಿರುವುದನ್ನು ನಾನು ನೋಡುತ್ತಿದ್ದೇನೆ ಮತ್ತು ಜನನಿಬಿಡ ಪ್ರದೇಶಗಳು ನಿರ್ಜನವಾಗುತ್ತಿರುವುದನ್ನು ನಾನು ಕಾಣುತ್ತಿದ್ದೇನೆ" (ಹಕೀಕತುಲ್ ವಹ್ಯ್, ರೂಹಾನೀ ಖಝಾಇನ್, ಸಂಪುಟ 22, ಪುಟ 269).

ಅಹ್ಮದಿಯತಿನ ಖಲೀಫರು ಪದೇ ಪದೇ ಜನತೆಯ ಗಮನವನ್ನು ಸೆಳೆಯುತ್ತಿರುವ ಬೋಧನೆ ಮತ್ತು ಎಚ್ಚರಿಕೆ ಇದೇ ಆಗಿದೆ. ತಮ್ಮನ್ನು ಸೃಷ್ಟಿಸಿದ ಒಬ್ಬನೇ ದೇವನ ಕಡೆಗೆ ತಿರುಗದಿದ್ದರೆ ವಿನಾಶ ಖಚಿತವೆಂದೂ ಬ್ಲಾಕ್‌ಗಳು ರೂಪುಗೊಳ್ಳುತ್ತಿವೆ ಮತ್ತು ಅಂತಿಮ ಫಲಿತಾಂಶವು ಪರಸ್ಪರ ವಿನಾಶವಾಗಿರುತ್ತದೆಯೆಂದೂ ಆದ್ದರಿಂದ ಜಾಗೃತರಾಗಿರಿ ಎಂದೂ ನಾನು ಬಹಳ ಕಾಲದಿಂದ ಈ ಜನರೊಡನೆ ಹೇಳುತ್ತಿದ್ದೇನೆ. ಅವರು ಈ ವಿಷಯಗಳನ್ನು ಆಲಿಸುತ್ತಿರುತ್ತಾರೆ ಮತ್ತು ಇನ್ನೂ ಆಲಿಸುವರು. ಹೌದು ಒಂದು ಮಿತಿಯವರೆಗೆ ಪರಿಸ್ಥಿತಿಯು ಕೆಟ್ಟದ್ದಾಗಿದೆ, ಆದರೆ ನೀವು ಚಿತ್ರಿಸುತ್ತಿರುವಂತೆ ಭೀಕರ ಮತ್ತು ಹತಾಶ ಪರಿಸ್ಥಿತಿ ಇಲ್ಲವೆಂದು ಅವರು ಹೇಳುತಾರೆ. ಹೀಗೆ ನನ್ನೊಡನೆ ಮತ್ತು ಜಮಾಅತಿನ ಸದಸ್ಯರೊಡನೆ ಜನರು ಹೇಳಿದ್ದರು. ಆದರೆ ಈಗ ಈ ಸಂಗತಿಗಳನ್ನು ಮೇಲ್ನೋಟದಿಂದ ನೋಡುತ್ತಿದ್ದ ಅದೇ ಜನರು ಪರಿಸ್ಥಿತಿ ಇನ್ನಷ್ಟು ಹದಗೆಡುತ್ತಿದೆಯೆಂದು ಸ್ವತಃ ಹೇಳಲು ಪ್ರಾರಂಭಿಸಿದ್ದಾರೆ. ಪರಿಸ್ಥಿತಿ ಹದಗೆಡುತ್ತಿದ್ದು, ಇದೇ ರೀತಿ ಮುಂದುವರೆದರೆ ಯಾವಾಗ ಬೇಕಾದರೂ ಭೀಕರ ಪರಿಸ್ಥಿತಿ ಎದುರಾಗಬಹುದೆಂದು ಅವರೇ ಹೇಳಲಾರಂಭಿಸಿದ್ದಾರೆ. ಈಗ ಈ ವಿಷಯಗಳನ್ನು ಅವರ ವಿಚಾರ ವೇದಿಕೆಗಳು ಮತ್ತು ವಿಶ್ಲೇಷಕರು ಹೇಳುತ್ತಿದ್ದಾರೆ, ಆದರೆ ಇದರ ಹೊರತಾಗಿಯೂ, ಸುಸ್ಥಿರ ಶಾಂತಿಯನ್ನು ಸ್ಥಾಪಿಸಲು ಅವರ ಬಳಿ ಪರಿಹಾರವಿಲ್ಲ ಮತ್ತು ಇದು ಆಗುವುದಾದರೂ ಹೇಗೆ? ಶಾಂತಿಯ ಮೂಲದ ಕಡೆಗೆ ಅವರ ಗಮನವಿಲ್ಲ. ಲೌಕಿಕತೆಯಲ್ಲಿ ಮುಳುಗಿದ್ದಾರೆ ಮತ್ತು ಧರ್ಮವನ್ನು ಮರೆತು ಬಿಟ್ಟಿದ್ದಾರೆ. ಶಾಂತಿದಾಯಕ ಪರಿಹಾರ ಇರುವಲ್ಲಿ ಈ ಮುಸ್ಲಿಮೇತರ ಸರ್ಕಾರಗಳು ಬರಲು ಬಯಸುವುದಿಲ್ಲ ಹಾಗು ದುರದೃಷ್ಟವಶಾತ್ ಮುಸ್ಲಿಂ ಸರ್ಕಾರಗಳು ಕೂಡ ಬರಲು ಬಯಸುವುದಿಲ್ಲ. ಈಗ ಕೆಲವೆಡೆ ವಿಶ್ಲೇಷಕರು ಕೂಡ ಯುದ್ಧಗಳ ರೂಪದಲ್ಲಿ ಸಂಭವಿಸುವ ವಿನಾಶವು ತುಂಬಾ ಭಯಾನಕವಾಗಿರುವುದು ಎಂದು ಹೇಳುತ್ತಿದ್ದಾರೆ.

ಒಂದು ಅಂದಾಜಿನ ಪ್ರಕಾರ, ಯುದ್ಧದಲ್ಲಿ ಮತ್ತು ನಂತರದ ಎರಡು ವರ್ಷಗಳಲ್ಲಿ ಅಣ್ವಸ್ತ್ರಗಳ ಬಳಕೆಯಿಂದಾಗಿ ವಿಶ್ವದ ಜನಸಂಖ್ಯೆಯ 66 ಪ್ರತಿಶತದಷ್ಟು ಭೂಮಿಯಿಂದ ಅಳಿದು ಹೋಗುವ ಸಾಧ್ಯತೆಯಿದೆ ಮತ್ತು ಯಾರೂ ಊಹಿಸಲೂ ಸಾಧ್ಯವಾಗದಂತಹ ವಿನಾಶ ಕಾದಿದೆ ಎಂದು ಹೇಳಲಾಗುತ್ತಿದೆ. ಒಬ್ಬ ಸಾಮಾನ್ಯ ಮನುಷ್ಯನಿಗೂ ಯೋಚಿಸಲು ಕೂಡ ಸಾಧ್ಯವಲ್ಲ. ಬಹಳ ಭಯಾನಕ ಅವಸ್ಥೆಗಳಾಗಿವೆ. ಇಂತಹ ಪರಿಸ್ಥಿತಿಯಲ್ಲಿ, ಭರವಸೆಯ ಕಿರಣವಿದ್ದರೆ, ಸುರಕ್ಷೆಯ ಭರವಸೆ ಇದ್ದರೆ, ಅದು ಒಬ್ಬರೇ ಒಬ್ಬ ವ್ಯಕ್ತಿಯ ಮೂಲಕ ಮಾತ್ರ ಸಾಧ್ಯ. ಅವರನ್ನು ಶಾಂತಿ ಮತ್ತು ಸುರಕ್ಷತೆಯ ಬೋಧನೆಯೊಂದಿಗೆ ಸರ್ವಶಕ್ತನಾದ ಅಲ್ಲಾಹನು ಜಗತ್ತಿಗೆ ಕಳುಹಿಸಿದ್ದನು. ಅವರು ಶಾಂತಿಯ ಚಕ್ರವರ್ತಿ ಮತ್ತು ಎಲ್ಲ ಮಾನವರಿಗಿಂತ ಸರ್ವಶಕ್ತನಾದ ಅಲ್ಲಾಹನಿಗೆ ಪ್ರಿಯರಾದ ವ್ಯಕ್ತಿಯಾಗಿದ್ದಾರೆ. ಅವರ ಮೇಲೆ ಅಲ್ಲಾಹನ ಕೊನೆಯ ಪರಿಪೂರ್ಣ ಶರೀಯತ್ (ಕಾನೂನುಸಂಹಿತೆ) ಅವತೀರ್ಣವಾಯಿತು. ಅವರ ಬೋಧನೆಯು ಪ್ರೀತಿ ಮತ್ತು ವಾತ್ಸಲ್ಯದ ಬೋಧನೆಯಾಗಿದೆ. ಅವರು ತನ್ನ ಸರ್ವಶಕ್ತನಾದ ಅಲ್ಲಾಹನೊಂದಿಗಿನ ಸಂಬಂಧದಿಂದಾಗಿ ತನಗೆ ಅವತೀರ್ಣವಾದ ಬೋಧನೆಗಳನ್ನು ಜಗತ್ತಿನಲ್ಲಿ ಹರಡಲು ಮತ್ತು ಜಗತ್ತನ್ನು ವಿನಾಶದಿಂದ ರಕ್ಷಿಸಲು ತೀವ್ರವಾದ ನೋವನ್ನು ಅನುಭವಿಸಿ ತನ್ನ ಜೀವನವನ್ನೇ ಸಮರ್ಪಿಸಿದ್ದರು. ಅವರು ತಮ್ಮ ಸ್ಥಿತಿಯನ್ನು ಎಷ್ಟರ ಮಟ್ಟಿಗೆ ದುಃಖಿತರಾಗಿ ಅಳುತ್ತಾ ಸರ್ವಶಕ್ತನಾದ ಅಲ್ಲಾಹನಲ್ಲಿ ಮೊರೆಯಿಡುತ್ತಾ ಪ್ರಾರ್ಥಿಸಿದ್ದರು. ಆಗ ಅಲ್ಲಾಹನು ಹಝ್ರತ್ ಪೈಗಂಬರ್‌ರೊಡನೆ(ಸ) ಹೀಗೆ ಹೇಳಿದನು:

**"ಅವರು ನಂಬದ ಕಾರಣ ನೀನು (ದುಃಖದಿಂದ) ನಿನ್ನ ಆತ್ಮವನ್ನು ಕೊಲ್ಲುವಿಯಾ?"** (ಪವಿತ್ರ ಖುರ್‌ಆನ್ 26:4).

ಒಟ್ಟಿನಲ್ಲಿ, ಜನರು ತಮ್ಮ ಸೃಷ್ಟಿಕರ್ತನ ಕಡೆಗೆ ತಿರುಗಿ ವಿನಾಶದಿಂದ ತಪ್ಪಿಸಿಕೊಳ್ಳಲಿ ಮತ್ತು ತಮ್ಮ ಇಹಪರ ಜೀವಿತವನ್ನು ಕಾಪಾಡಿಕೊಳ್ಳಲಿ ಎಂದು ಅವರು ಮಾನವೀಯತೆಯ ಬಗ್ಗೆ ಹೃದಯದಲ್ಲಿ ನೋವು ಹೊಂದಿದ್ದರು. ಸರಿಸಾಟಿ ಇಲ್ಲದಂತಹ ಸಮಗ್ರ ಶಿಕ್ಷಣವನ್ನು ಅವರು ನೀಡಿದರು. ಅವರು ಸುರಕ್ಷೆಯ ಭರವಸೆಯನ್ನು ನೀಡಿದರು. ಅದು ಸತ್ಯದಲ್ಲಿ ಸರ್ವಶಕ್ತನಾದ ಅಲ್ಲಾಹನು ನೀಡಿದ ಭರವಸೆಯಾಗಿದೆ. ಆದರೆ ದೌರ್ಭಾಗ್ಯದಿಂದ ಮುಸ್ಲಿಮರು ಈ ಬೋಧನೆಯನ್ನು ಮರೆತು ನಂಬಿಕೆಯ ಕೇವಲ ಮೌಖಿಕ ಘೋಷಣೆಗಳನ್ನು ಮಾಡಿ ಪರಸ್ಪರರ ರಕ್ತದಾಹಿಗಳಾಗಿದ್ದಾರೆ ಮತ್ತು ಆ ಕಾರ್ಯಕ್ಕಾಗಿ ಇತರರಿಂದ ಸಹಾಯ ಕೇಳುತ್ತಾರೆ. ವಿರೋಧಿಗಳ ನೆರವಿನಿಂದ ಮುಸ್ಲಿಮನು ಕಲಿಮ ಪಠಿಸುವ ಮುಸ್ಲಿಮನ ಹತ್ಯೆ ಮಾಡುತ್ತಿದ್ದಾನೆ. ಮುಸ್ಲಿಮರಿಗೆ ಇದಕ್ಕಿಂತ ಕೆಟ್ಟದ್ದೇನು ಬರಲಿಕ್ಕಿದೆ? ಇಂತಹ ಸುಂದರವಾದ ಬೋಧನೆ ಮತ್ತು ಇಂತಹ ನೋವನ್ನನುಭವಿಸಿದಂತಹ ಸಂದೇಶವಾಹಕರನ್ನು ಅನುಸರಿಸುವುದಾಗಿ ಹೇಳಿಕೊಂಡರೂ ಅಲ್ಲಾಹನ ಕೋಪಕ್ಕೆ ಒಳಗಾಗುತ್ತಿದ್ದಾರೆ. ಜಗತ್ತಿನಲ್ಲಿ ಶಾಂತಿ ಸಮಾಧಾನವನ್ನು ಹರಡುವ ಬದಲು ಅಶಾಂತಿಯನ್ನು ಹರಡುವುದರಲ್ಲಿ ಪ್ರಸಿದ್ಧರಾಗುತ್ತಿದ್ದಾರೆ. ಇವೆಲ್ಲವೂ ಏಕೆಂದರೆ ಸರ್ವಶಕ್ತನಾದ ಅಲ್ಲಾಹನು ಈ ಯುಗದಲ್ಲಿ ಕಳುಹಿಸಿದಂತಹ ಶಾಂತಿ ಸಮಾಧಾನದ ಸಾಮ್ರಾಟರಾಗಿದ್ದ ಮತ್ತು ಸರ್ವಶಕ್ತನಾದ ಅಲ್ಲಾಹನ ಅತ್ಯಂತ ಪ್ರೀತಿಯ ಪ್ರವಾದಿಯ(ಸ) ಗುಲಾಮನನ್ನು ಈ ಜಗತ್ತಿನಲ್ಲಿ ಶಾಂತಿ ಮತ್ತು ಸುರಕ್ಷತೆಯ ಬೋಧನೆಗಳನ್ನು ಹರಡಲು ಕಳುಹಿಸಿರುವಾಗ ಅವರ ಮಾತನ್ನು ಆಲಿಸಲು ಇವರು ಬಯಸುವುದಿಲ್ಲ. ಆ ಮಹಾಪುರುಷರ ಮಾತನ್ನು ಆಲಿಸದಿರುವುದು ಮಾತ್ರವಲ್ಲದೆ ಇವರು ಆ ದಿವ್ಯಪುರುಷನ ಮತ್ತು ಅವರ ಅನುಯಾಯಿಗಳ ಮೇಲೆ ಕುಫ್ರ್ ಫತ್ವಾಗಳನ್ನು ಹೊರಡಿಸಿ ಅವರನ್ನು ಕೊಲ್ಲುವವರು ಇಸ್ಲಾಮಿನ ಸೇವೆ ಮತ್ತು ಪ್ರವಾದಿ ಮುಹಮ್ಮದ್ ಮುಸ್ತಫಾರ(ಸ) ಪ್ರೀತಿಯನ್ನು ಗಳಿಸುವವರೆಂದು ಹೇಳುವಷ್ಟು ಮೀರಿದ್ದಾರೆ. ಅಹ್ಮದಿಯರ ಬದುಕಿನೊಂದಿಗೆ ಆಟವಾಡುವುದು ಪುಣ್ಯದ ಕೆಲಸವೆಂದು ಅವರು ಭಾವಿಸುತ್ತಾರೆ. ಹೀಗಿರುವಾಗ ಇಂಥವರು ಇಸ್ಲಾಮಿನ ಬೋಧನೆಗಳನ್ನು ಜಗತ್ತಿನಲ್ಲಿ ಹೇಗೆ ಹರಡುವರು?

ಅಕಟಾ, ಈ ಜನರಿಗೆ ಒಂದಿಷ್ಟು ವಿವೇಕವಿರುತ್ತಿದ್ದರೆ! ಅವರ ಉಲೆಮಾಗಳು ಕೆಟ್ಟ ಉಲೆಮಾರಾಗುವ ಬದಲು, ಬುದ್ಧಿವಂತಿಕೆ ಮತ್ತು ಜ್ಞಾನವನ್ನು ಹರಡುವ ಉಲೆಮಾಗಳಾಗಿ ಈ ಸಮುದಾಯವು ಒಂದಾಗಿ ಪ್ರವಾದಿ ಮುಹಮ್ಮದ್‌ರ(ಸ) ಸಂದೇಶವನ್ನು ಜಗತ್ತಿನಲ್ಲಿ ಹರಡಿ ಪೈಗಂಬರರ(ಸ) ನಿಷ್ಠಾವಂತ ಸೇವಕರಾದ ಮಸೀಹ್ ಮೌಊದ್‌ರೊಂದಿಗೆ(ಅ) ಸೇರಿ ಜಗತ್ತಿಗೆ ನಿಜವಾದ ಶಾಂತಿ ಮತ್ತು ಭದ್ರತೆಯ ಸಂದೇಶವನ್ನು ತಲುಪಿಸುವಂತಾಗಿದ್ದರೆ ಎಷ್ಟು ಚೆನ್ನಾಗಿತ್ತು! ಹೇಗಿದ್ದರೂ ಇದು ಬೇರೆಯೇ ಒಂದು ವಿವರವಾದ ವಿಷಯವಾಗಿದೆ.

ನಾನೀಗ ಪೈಗಂಬರರ(ಸ) ಬೋಧನೆಗಳ ಬಗ್ಗೆ, ಅವರಿಗೆ ಅವತೀರ್ಣವಾದ ಶರೀಅತಿನ ಬಗ್ಗೆ, ಶಾಂತಿ ಮತ್ತು ಭದ್ರತೆಯನ್ನು ಹರಡುವ ಅವರ ಪಾಠಗಳ ಬಗ್ಗೆ ಒಂದಿಷ್ಟು ಮಾತನಾಡುತ್ತೇನೆ. ಪೈಗಂಬರರ(ಸ) ಬೋಧನೆಗಳು ಎಷ್ಟು ವಿಸ್ತಾರವಾಗಿವೆ ಎಂದರೆ ಅವುಗಳನ್ನು ಸ್ವಲ್ಪ ಸಮಯದಲ್ಲಿ ವಿವರಿಸುವುದು ಅಸಾಧ್ಯ, ಆದರೆ ಹೇಗಾದರೂ ನಾನು ಕೆಲವು ವಿಷಯಗಳನ್ನು ಹೇಳಲು ಶ್ರಮಿಸುತ್ತೇನೆ. ನಾವು ಪೈಗಂಬರರನ್ನು(ಸ) ಅವಮಾನಿಸುವವರೆಂದೂ ನಾವು ಧರ್ಮನಿಂದೆಯ ಶಿಕ್ಷಣ ನೀಡುವವರಾಗಿದ್ದೇವೆಂದೂ ಅಹ್ಮದಿಯಾ ಜಮಾಅತಿನ ಬಗ್ಗೆ ಹೇಳಲಾಗುತ್ತದೆ – (ನಊಝುಬಿಲ್ಲಾಹ್). ಆದರೆ ವಾಸ್ತವದಲ್ಲಿ ನಾವು ಪೈಗಂಬರರ(ಸ) ಬೋಧನೆಗಳನ್ನು ಅನುಸರಿಸುವವರಾಗಿದ್ದೇವೆ ಮತ್ತು ಅವರನ್ನು ಪ್ರೀತಿಸುವವರಾಗಿದ್ದೇವೆ. ಅಹ್ಮದಿಯಾ ಜಮಾಅತಿನ ಸಾಹಿತ್ಯಗಳು ಅದಕ್ಕೆ ಸಾಕ್ಷಿಯಾಗಿವೆ. ಪ್ರತಿ ವರ್ಷ ಸಾವಿರಾರು ಸದ್ಗುಣವುಳ್ಳ ಜನರು ಈ ಶಿಕ್ಷಣ ಮತ್ತು ಜಮಾಅತಿನ ಜನರ ಪ್ರೀತಿಯನ್ನು ನೋಡಿ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಬಂದು ಸೇರುತ್ತಾರೆ. ಇಸ್ಲಾಮಿನ ಈ ಬೋಧನೆಯು ಬಹಳ ಪರಿಣಾಮಕಾರಿ ಮತ್ತು ಪ್ರೀತಿ ಹಾಗು ಶಾಂತಿಯನ್ನು ಹರಡುವ ಶಿಕ್ಷಣವಾಗಿದೆ ಮತ್ತು ಇದು ಇಂದು ಜಗತ್ತಿನ ಶಾಂತಿಗೆ ಬೇಕಾದ ಏಕೈಕ ಪರಿಹಾರವಾಗಿದೆ ಎಂದು ಇತರರು ಕೂಡ ಹೇಳಲು ನಿರ್ಬಂಧಿತರಾಗಿದ್ದಾರೆ.

ಕೆಲವು ದಿನಗಳ ಹಿಂದೆ ನಾನು ಯು.ಕೆ ಜಮಾಅತಿನ ವಾರ್ಷಿಕ ಸಮ್ಮೇಳನದಲ್ಲಿ ಜಮಾಅತಿನ ಪ್ರಗತಿಯ ವರದಿಯಲ್ಲಿ ಜನರು ಅಹ್ಮದಿಯರ ಕೂಟದಲ್ಲಿ ಮತ್ತು ಸಮ್ಮೇಳನದ ವಾತಾವರಣದಲ್ಲಿ ಹೇಗೆ ಪ್ರಭಾವಿತರಾದರು ಮತ್ತು ಇಸ್ಲಾಂ ಧರ್ಮದ ಶಾಂತಿಯುತ ಬೋಧನೆಗಳಿಂದ ಅವರು ಹೇಗೆ ಸ್ಫೂರ್ತಿ ಪಡೆದರು ಎಂಬುದರ ಕುರಿತು ಜನರ ಅನಿಸಿಕೆಗಳನ್ನು ವಿವರಿಸಿದ್ದೆ. ಹೇಗಿದ್ದರೂ ನಮ್ಮ ವಿರೋಧಿಗಳು ಏನು ಬೇಕಾದರೂ ಯೋಚಿಸಲಿ ಮತ್ತು ಮಾಡಲಿ.

ಅಲ್ಲಾಹನ ಸಂದೇಶವಾಹಕರ(ಸ) ಮೇಲೆ ನಮಗೆ ನಿಜವಾದ ಪ್ರೀತಿ ಇದ್ದರೆ ಅವರ ಬೋಧನೆಗಳನ್ನು ಅಳವಡಿಸಿಕೊಳ್ಳುವುದು ಮತ್ತು ಅವುಗಳನ್ನು ಜಗತ್ತಿನಲ್ಲಿ ಹರಡುವುದು ನಮ್ಮ ಕರ್ತವ್ಯವಾಗಿದೆ. ಇಂದು ಜಗತ್ತಿನಲ್ಲಿ ಶಾಂತಿ ಮತ್ತು ಭದ್ರತೆಗೆ ಇದೊಂದೇ ಪರಿಹಾರ ಎಂದು ಜಗತ್ತಿಗೆ ತಿಳಿಸಿರಿ. ಆದ್ದರಿಂದ ಬನ್ನಿರಿ, ಶಾಂತಿ ಮತ್ತು ಭದ್ರತೆಯನ್ನು ಕಲಿಸುವ ಆ ಮಹಾನ್ ವ್ಯಕ್ತಿಯೊಂದಿಗೆ ಸಂಪರ್ಕ ಸಾಧಿಸಿ ನಿಮ್ಮ ಇಹ ಮತ್ತು ಪರಲೋಕದಲ್ಲಿ ನಿಮ್ಮ ಸುರಕ್ಷತೆಯನ್ನು ಭದ್ರಪಡಿಸಿಕೊಳ್ಳಿರಿ. ಇವು ಕೇವಲ ಮಾತುಗಳಲ್ಲ. ನಾವು ಇತಿಹಾಸವನ್ನು ಅವಲೋಕಿಸುವುದಾದರೆ, ಆ ಪ್ರವಾದಿಯು ಹೇಗೆ ಅನಾಗರಿಕ ಮತ್ತು ಅಜ್ಞಾನಿಗಳಾದ ಅರಬರನ್ನು ಅಜ್ಞಾನದ ಕತ್ತಲೆಯಿಂದ ಹೊರತಂದು ಉನ್ನತ ನೈತಿಕ ಮತ್ತು ಜ್ಞಾನದ ಗೋಪುರಗಳಿಗೆ ತಲುಪಿಸಿದರು ಎಂಬುದನ್ನು ನಾವು ಕಾಣುತ್ತೇವೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಆ ಸಂದೇಶವಾಹಕರು [ಎಂದರೆ, ಹಝ್ರತ್ ಮುಹಮ್ಮದ್(ಸ)] ಅನಾಗರಿಕರನ್ನು ಮನುಷ್ಯರನ್ನಾಗಿ ಮತ್ತು ಮನುಷ್ಯರಿಂದ ನೈತಿಕ ಮಾನವರನ್ನಾಗಿ ಮಾಡಿದರು. ಬೇರೆ ರೀತಿಯಲ್ಲಿ ಹೇಳುವುದಾದರೆ, ಅವರು ನಿಜವಾದ ನೈತಿಕತೆಯನ್ನು ಸಮತೋಲನದ ಕೇಂದ್ರದಲ್ಲಿ ಸ್ಥಾಪಿಸಿದರು. ಅನಂತರ ನೈತಿಕ ವ್ಯಕ್ತಿಯನ್ನು ದೈವಿಕ ಬಣ್ಣದಿಂದ ರಂಗೇರಿಸಿದರು." (ಮಜ್ಮೂಅ ಇಶ್ತಿಹಾರಾತ್, ಸಂಪುಟ 2, ಪುಟ 183, ಅಲ್-ಇಶ್ತಹಾರ್ ಮಸ್ತೈಕಿನನ್' ಬಿವಹಿಯುಲ್ಲಾಹು ಅಲ್‌ಖಹ್ಹಾರ್, ನಝಾರತ್ ನಶ್ರೋ ಇಶಾಅತ್ ಖಾದಿಯನ್ 2019).

ಒಟ್ಟಿನಲ್ಲಿ, ಹಝ್ರತ್ ಪೈಗಂಬರ್(ಸ) ತನ್ನ ಅನುಯಾಯಿಗಳಿಗೆ ಮತ್ತು ತನ್ನನ್ನು ಪ್ರೀತಿಸುವವರಿಗೆ ನಡವಳಿಕೆ ಮತ್ತು ಆರಾಧನೆಯ ನಿಯಮಗಳನ್ನು ಕಲಿಸಿದರು; ಅದು ಅವರನ್ನು ದೇವ ಸಾಮೀಪ್ಯ ಗಳಿಸುವಂತೆ ಮಾಡಿ ಅವರ ಪ್ರತಿಯೊಂದು ಮಾತು ಮತ್ತು ಕ್ರಿಯೆಯು ದೇವ ಸಂಪ್ರೀತಿಗೋಸ್ಕರವಾಯಿತು. ಅವರು ದೇವ ಸಾಮೀಪ್ಯಕ್ಕಾಗಿ ಅಲ್ಲಾಹನ ದಾಸರ ಹಕ್ಕುಗಳನ್ನು ಸಹ ನಿಭಾಯಿಸಿದರು. ಆದ್ದರಿಂದ ಸತ್ಯ ಹೃದಯದಿಂದ ಸಂದೇಶವಾಹಕರನ್ನು(ಸ) ಅನುಸರಿಸುವುದು ಒಬ್ಬ ವ್ಯಕ್ತಿಯನ್ನು ಸರ್ವಶಕ್ತನಾದ ಅಲ್ಲಾಹನ ನಿಜವಾದ ಪ್ರೇಮಿಯನ್ನಾಗಿ ಮಾಡುವ ಹಂತಕ್ಕೆ ಕೊಂಡೊಯ್ಯುತ್ತದೆ. ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ: "ಪೈಗಂಬರರನ್ನು(ಸ) ಸತ್ಯ ಹೃದಯದಿಂದ ಅನುಸರಿಸುವುದು ಮತ್ತು ಅವರನ್ನು ಪ್ರೀತಿಸುವುದು ದೇವನಿಗೆ ಪ್ರಿಯನನ್ನಾಗಿ ಮಾಡುತ್ತದೆ" (ಹಖೀಖತುಲ್ ವಹ್ಯ್, ರೂಹಾನೀ ಖಝಾಇನ್ ಸಂಪುಟ 22 ಪುಟ 67).

ಇದಾಗಿದೆ ಪವಿತ್ರ ಪ್ರವಾದಿ(ಸ) ಜನರ ಹೃದಯದಲ್ಲಿ ಸೃಷ್ಟಿಸಿದ ಕ್ರಾಂತಿ; ಬಹುದೇವರಾಧಕರಾಗಿದ್ದವರು ಏಕದೇವ ವಿಶ್ವಾಸಿಗಳಾಗಿ ಮಾರ್ಪಟ್ಟರು. ಅವರು ಸರ್ವಶಕ್ತನಾದ ದೇವನಿಗೆ ಪ್ರಿಯರಾಗುವ ರೀತಿಯಲ್ಲಿ ಏಕದೇವ ವಿಶ್ವಾಸಿಗಳಾದರು. ಅವರು ಅಲ್ಲಾಹನನ್ನು ಪ್ರೀತಿಸುವವರಾದರು ಮತ್ತು ಅಲ್ಲಾಹನು ಅವರನ್ನು ಪ್ರೀತಿಸುವವನಾದನು. ಅವರು ಆರಾಧನೆಯ ಹಕ್ಕನ್ನು ಸಹ ಬಹಳ ಉತ್ತಮವಾಗಿ ನಿಭಾಯಿಸಿದರು. ಅವರು ಅಲ್ಲಾಹನು ನೀಡಿದ ಬೋಧನೆಯನ್ನು ಬಹಳ ಉತ್ತಮವಾಗಿ ಅನುಸರಿಸಲು ಪ್ರಾರಂಭಿಸಿದರು. ಹಾಗೆಯೇ ಅದರ ಉನ್ನತ ದರ್ಜೆಯನ್ನು ನೆಲೆನಿಲ್ಲಿಸಿದರು. ಒಬ್ಬ ವ್ಯಕ್ತಿ ಯಾರನ್ನಾದರೂ ಪ್ರೀತಿಸಿದಾಗ, ಆ ವ್ಯಕ್ತಿಯು ಅವನ ಪ್ರತಿಯೊಂದು ಮಾತು ಮತ್ತು ಕ್ರಿಯೆಯನ್ನು ಅನುಸರಿಸಲು ಪ್ರಯತ್ನಿಸುತ್ತಾನೆ, ಅವನ ಪ್ರತಿಯೊಂದು ಮಾತನ್ನು ಆಲಿಸಿ ಅದನ್ನು ಅಂಗೀಕರಿಸಲು ಪ್ರಯತ್ನಿಸುತ್ತಾನೆ.

ದೇವದಾಸರು ಬರೇ ಬಾಯಿ ಮಾತಿನ ಪ್ರೀತಿಯ ಪ್ರಕಟ ಮಾಡುವುದಿಲ್ಲ. ಅವರಲ್ಲಿ ಅಲ್ಲಾಹನ ಮೇಲಿನ ಪ್ರೀತಿ ಹುಟ್ಟಿಕೊಂಡಾಗ ಅವನ ಸೃಷ್ಟಿಗಳ ಹಕ್ಕುಗಳನ್ನು ಸಲ್ಲಿಸುವ ಕಡೆಗೂ ಅವರ ಗಮನ ಹರಿಯಿತು. ಅವರು ಅಲ್ಲಾಹನ ದಾಸರ ಹಕ್ಕುಗಳನ್ನು ಪೂರೈಸುವಲ್ಲಿ ಒಬ್ಬರನ್ನೊಬ್ಬರು ಮೀರಿಸಲು ಪ್ರಯತ್ನಿಸುವವರಾದರು. ಈ ಸ್ಥಿತಿಯುಂಟಾದಾಗ, ಪರಸ್ಪರ ಪ್ರೀತಿ ಮತ್ತು ವಾತ್ಸಲ್ಯವೂ ಅಲ್ಲಾಹನಿಗಾಗಿ ಉಂಟಾಗುತ್ತದೆ. ದೇವ ಸಂಪ್ರೀತಿ ಗಳಿಸಲು ಅಂಥವರು ಇತರರ ಹಕ್ಕುಗಳನ್ನು ಸಲ್ಲಿಸುತ್ತಾರೆ. ಈ ಮಾನದಂಡವು ಯಾವಾಗ ಆಗುತ್ತದೆಯೋ, ಆಗ ಶಾಂತಿ ಮತ್ತು ಭದ್ರತೆಯ ಬುನಾದಿ ಹಾಕಲಾಗುತ್ತದೆ.

ಪೈಗಂಬರ್(ಸ) ನಮಗೆ ಅಲ್ಲಾಹನನ್ನು ಗಳಿಸಲಿಕ್ಕಿರುವ ಮಾರ್ಗದರ್ಶನ ಮಾಡಿದವರಾಗಿದ್ದಾರೆ. ಅವರಿಗೆ ಅವತೀರ್ಣಗೊಂಡ ಬೋಧನೆಗಳನ್ನು ಅನುಸರಿಸುವ ಮೂಲಕ ನಾವು ಜಗತ್ತಿನಲ್ಲಿ ಶಾಂತಿ ಮತ್ತು ಸುರಕ್ಷತೆಯನ್ನು ಸೃಷ್ಟಿಸಬಹುದು. ಶಾಂತಿಯ ಅಡಿಪಾಯ ಮನೆಯಿಂದಲೇ ಪ್ರಾರಂಭವಾಗುತ್ತದೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಡಬೇಕು. ನಂತರ ಅದು ಪ್ರಾದೇಶಿಕ, ಪಟ್ಟಣ, ನಗರ, ದೇಶ ಮತ್ತು ಅಂತರ್‍ರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸುತ್ತದೆ. ಆದ್ದರಿಂದ ಪ್ರತಿಯೊಂದು ಹಂತದಲ್ಲೂ, ಪರಸ್ಪರರ ಭಾವನೆಗಳು ಮತ್ತು ಹಕ್ಕುಗಳ ಕಾಳಜಿವಹಿಸುವಾಗ ಶಾಂತಿ ಸ್ಥಾಪನೆಯಾಗುತ್ತದೆ. ಸರ್ವಶಕ್ತನಾದ ಅಲ್ಲಾಹನು ನಮಗೆ ಸಂದೇಶವಾಹಕರ ಮೂಲಕ ಪ್ರತಿಯೊಂದು ವರ್ಗಕ್ಕಾಗಿ ಮತ್ತು ಹಂತಕ್ಕಾಗಿ ಈ ಬೋಧನೆಯನ್ನು ನೀಡಿದ್ದಾನೆ. ಹಝ್ರತ್ ಪೈಗಂಬರ್(ಸ) ಈ ಶಿಕ್ಷಣವನ್ನು ಪ್ರತಿ ವರ್ಗಕ್ಕೂ ನೀಡಿದರು.

ಅಹ್ಮದಿಯಾ ಜಮಾಅತಿನ ಎರಡನೇ ಖಲೀಫರಾದ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್(ರ) ಈ ವಿಷಯದ ಬಗ್ಗೆ ವಿವಿಧ ಸಂದರ್ಭಗಳಲ್ಲಿ ವಿವರಿಸುತ್ತಿದ್ದರು. ಆದರೆ ಒಂದು ಸಂದರ್ಭದಲ್ಲಿ ಅವರು ಈ ವಿಷಯವನ್ನು ಮತ್ತೊಂದು ರೀತಿಯಲ್ಲಿ ವಿವರಿಸಿದ್ದರು. ಅವರ ಆ ಲೇಖನದಿಂದ ಪ್ರಯೋಜನವನ್ನು ಪಡೆದುಕೊಂಡು ನಾನು ಕೆಲವು ವಿಷಯಗಳನ್ನು ವಿವರಿಸುವೆನು. ಶಾಂತಿ ಎಂಬುದು ಅತ್ಯಂತ ಮುಖ್ಯವಾದ ವಿಷಯವೆಂದು ನಮಗೆ ತಿಳಿದಿದೆ. ಶಾಂತಿಯ ಬಗ್ಗೆ ಎಲ್ಲರೂ ಮಾತನಾಡುತ್ತಾರೆ, ಶಾಂತಿ ಬಹಳ ಮುಖ್ಯವಾದ ವಿಷಯವೆಂದು ಎಲ್ಲರೂ ಹೇಳುತ್ತಾರೆ. ಶಾಂತಿಯ ಸ್ಥಿತಿಯು ಮನೆಯು ಶಾಂತಿ ಮತ್ತು ಭದ್ರತೆಯುನ್ನು ಖಾತರಿಪಡಿಸುತ್ತದೆಯೆಂದೂ ಅಂತರ್‍ರಾಷ್ಟ್ರೀಯ ಮಟ್ಟದಲ್ಲಿ ಶಾಂತಿ ಮತ್ತು ಭದ್ರತೆಯನ್ನು ಖಾತರಿಪಡಿಸುತ್ತದೆಯೆಂದೂ ಎಲ್ಲ ಹಂತಗಳಲ್ಲಿ ಶಾಂತಿ ಸ್ಥಾಪನೆಯಾಗಬೇಕೆಂದೂ ಅವರು ಬಯಸುತ್ತಾರೆ. ಆದರೆ ಬಯಕೆ ಮಾತ್ರ ಶಾಂತಿಯನ್ನು ಸೃಷ್ಟಿಸುವುದಿಲ್ಲ, ಏಕೆಂದರೆ ಇಲ್ಲಿಯೂ ಶಾಂತಿಯ ಬಯಕೆ ಸ್ವಾರ್ಥವಾಗಿರುತ್ತದೆ ಮತ್ತು ಇದನ್ನೇ ನಾವು ಜಗತ್ತಿನಲ್ಲಿ ನೋಡುತ್ತಿದ್ದೇವೆ. ಸ್ವಾರ್ಥವಿಲ್ಲದಿದ್ದರೆ ಕಲಹವುಂಟಾಗಲು ಸಾಧ್ಯವೇ ಇಲ್ಲ. ಸಾಮಾನ್ಯವಾಗಿ, ಯಾರಾದರೂ ಶಾಂತಿಯ ಬಗ್ಗೆ ಮಾತನಾಡುವಾಗ, ಶಾಂತಿಯ ಬಯಕೆಯು ತನ್ನ ಸ್ವಾರ್ಥಕ್ಕಾಗಿರುತ್ತದೆ. ಇನ್ನೂ ಹೇಳುವುದಾದರೆ, ಸಾಮಾನ್ಯವಾಗಿ ಒಬ್ಬ ವ್ಯಕ್ತಿಯು ಪ್ರಾರ್ಥನೆ

ಮಾಡುವಾಗ ಅಥವಾ ಒಂದು ವೇಳೆ ಪ್ರಾರ್ಥನೆ ಮಾಡದಿದ್ದರೂ ಅಂಥವರು ಅಲ್ಲಾಹನು ನನ್ನನ್ನು, ನನ್ನ ಹೆಂಡತಿ ಮಕ್ಕಳನ್ನು ಮತ್ತು ನನ್ನ ಪ್ರೀತಿಪಾತ್ರರನ್ನು ಶಾಂತಿಯಿಂದ ಇರಿಸಲಿ ಎಂಬ ಬಯಕೆಯ ಅಭಿವ್ಯಕ್ತಿ ಅವರ ನಾಲಿಗೆಯಲ್ಲಿ ಬರುತ್ತದೆ. ಇತರರು ಕೂಡ ಶಾಂತಿಯಿಂದ ಬದುಕಬೇಕೆಂಬ ಹಂಬಲವಿರುವುದಿಲ್ಲ. ಮನುಷ್ಯನು ತನ್ನ ಜೀವನವನ್ನು ಶಾಂತಿಯಿಂದ ಸಾಗಿಸಲು ಸಂಪತ್ತನ್ನು ಬಯಸುತ್ತಾನೆ. ಅವನು ಸಂಪತ್ತನ್ನು ಒಳ್ಳೆಯದು ಎಂದು ಪರಿಗಣಿಸಿದರೆ, ಅವನು ಅದನ್ನು ಶತ್ರುಗಳಿಗೂ ಒಳ್ಳೆಯದು ಎಂದು ಪರಿಗಣಿಸುತ್ತಾನೆಂದು ಅರ್ಥವಲ್ಲ. ಹಾಗೆಯೇ ಅವನು ಆರೋಗ್ಯವನ್ನು ಉತ್ತಮವೆಂದು ಪರಿಗಣಿಸಿದರೆ, ಅವನು ಶತ್ರುಗಳಿಗೂ ಉತ್ತಮ ಆರೋಗ್ಯವನ್ನು ಬಯಸುತ್ತಾನೆಂದು ಅರ್ಥವಲ್ಲ. ಶತ್ರುವಿನ ಬಗ್ಗೆ, ಅವನು ಬಡವನಾಗಿರಬೇಕು ಮತ್ತು ದುರ್ಬಲನಾಗಿರಬೇಕು ಎಂದೂ, ಹೀಗೆ ಅವನು ಶತ್ರುಗಳ ಮೇಲೆ ಮೇಲುಗೈ ಸಾಧಿಸುವಂತಾಗಬೇಕೆಂದೂ ಅವನು ಬಯಸುತ್ತಾನೆ. ಅಂತೆಯೇ, ಜನರು ಗೌರವ ಮತ್ತು ಸ್ಥಾನವನ್ನು ತಮಗಾಗಿ ಮಾತ್ರ ಬಯಸುತ್ತಾರೆ. ಎಲ್ಲರಿಗೂ ಅಲ್ಲ. ತನಗೆ ಸಿಗುತ್ತಿರುವ ಗೌರವ ಮತ್ತು ಆದರ ಇತರರು ಪಡೆಯಬೇಕೆಂದು ಅವನು ಎಂದಿಗೂ ಇಚ್ಛಿಸುವುದಿಲ್ಲ. ಜಗತ್ತಿನಲ್ಲಿ ಸಾಮಾನ್ಯ ಜನರಲ್ಲೂ ನಾಯಕರಲ್ಲೂ ಇದೇ ದೃಶ್ಯ ಕಂಡುಬರುತ್ತದೆ. ನಮ್ಮದೇ ದೇಶಗಳಲ್ಲಿ ಕೂಡ ರಾಜಕಾರಣಿಗಳು ಅಧಿಕಾರಕ್ಕೆ ಬಂದ ನಂತರ ಪರಸ್ಪರ ಹೊಡೆದಾಡಿಕೊಂಡು ದಬ್ಬಾಳಿಕೆ ನಡೆಸುತ್ತಿರುವುದಾಗಿ ಕಾಣುತ್ತಿರುವುದು ಈ ಚಿಂತನೆಯ ಫಲಿತಾಂಶವಾಗಿದೆ. ಆದ್ದರಿಂದ ಕೇವಲ ಶಾಂತಿಯ ಬಯಕೆ ಇದ್ದರೆ, ಅದು ಗಲಭೆಯ ಮೂಲವಾಗಬಹುದು. ಏಕೆಂದರೆ ಅದರಲ್ಲಿ ಸ್ವಾರ್ಥವು ಒಳಗೊಂಡಿರುತ್ತದೆ, ಏಕೆಂದರೆ ಶಾಂತಿಯನ್ನು ಬಯಸುವವರು ಅವರು ಮತ್ತು ಅವರ ಸಂಬಂಧಿಕರು ಅಥವಾ ಅವರ ಸಮುದಾಯಕ್ಕೆ ಮಾತ್ರ ಶಾಂತಿ ಸಿಗಲಿ ಎಂದು ಇಚ್ಛಿಸುತ್ತಾರೆ. ಇಲ್ಲದಿದ್ದರೆ, ಅವರು ಇತರರ ಮತ್ತು ಶತ್ರುಗಳ ಕುರಿತು ಅವರ ಶಾಂತಿಯನ್ನು ಅಳಿಸಿ ಬಿಡಲು ಬಯಸುತ್ತಾರೆ. ಆದ್ದರಿಂದ ತನಗೆ ಒಂದು ರೀತಿಯದ್ದು ಮತ್ತು ಇತರರಿಗೆ ಇನ್ನೊಂದು ರೀತಿಯದ್ದು ಎಂಬ ಈ ತತ್ವವನ್ನು ಅನ್ವಯಿಸುವುದಾದರೆ, ಅದರ ಮೂಲಕ ಜಗತ್ತಿನಲ್ಲಿ ಯಾವ ರೀತಿಯ ಶಾಂತಿ ನೆಲೆಸುತ್ತದೆಯೋ ಅದು ಕೆಲವೇ ಜನರ ಶಾಂತಿಯೇ ಹೊರತು ಇಡೀ ಪ್ರಪಂಚದ ಶಾಂತಿಯಾಗುವುದಿಲ್ಲ. ಒಂದು ವೇಳೆ ಇಡೀ ಪ್ರಪಂಚದಲ್ಲಿ ಶಾಂತಿ ಇಲ್ಲದಿದ್ದರೆ, ಅದನ್ನು ನಿಜವಾದ ಶಾಂತಿ ಎಂದು ಕರೆಯಲಾಗುವುದಿಲ್ಲ. ನಿಜವಾದ ಶಾಂತಿ ಗಳಿಸಲು ವೈಯಕ್ತಿಕ, ಕೌಟುಂಬಿಕ, ಜನಾಂಗೀಯ, ಸಾಮುದಾಯಿಕ, ದೇಶೀಯ ಆದ್ಯತೆಗಳಿಗಿಂತ ಮೇಲುಗೈ ಸಾಧಿಸಲು ಪ್ರಯತ್ನಿಸಿದರೆ ಮಾತ್ರ ನಿಜವಾದ ಶಾಂತಿ ಸ್ಥಾಪಿತವಾಗುತ್ತದೆ. ತನ್ನ ಮನೆಗೆ ಮತ್ತು ತನ್ನ ದೇಶಕ್ಕೆ ಶಾಂತಿಯನ್ನು ಮಾತ್ರವಲ್ಲದೆ ಇಡೀ ಜಗತ್ತಿಗೇ ಶಾಂತಿಯನ್ನು ಬಯಸುವ ದೇವನು ತನ್ನ ಮೇಲಿದ್ದಾನೆಂದು ಒಬ್ಬ ವ್ಯಕ್ತಿಯು ಅರ್ಥಮಾಡಿಕೊಂಡರೆ ಮತ್ತು ಈ ತಿಳುವಳಿಕೆಯನ್ನು ಬೆಳೆಸಿಕೊಂಡರೆ ಮಾತ್ರ ಇದು ಸಂಭವಿಸಬಹುದು. ಆದ್ದರಿಂದ, ಪೈಗಂಬರರ(ಸ) ಶಾಂತಿದಾಯಕ ಬೋಧನೆಯ ಪ್ರಮುಖ ಅಂಶವೆಂದರೆ ಸರ್ವಲೋಕವನ್ನು ಪರಿಪಾಲಿಸುವ ಒಡೆಯನು ತನ್ನನ್ನು ನೋಡುತ್ತಿರುವನೆಂದೂ ಅದಕ್ಕಾಗಿ ತಾನು ತನ್ನ ಮಾತು ಮತ್ತು ಕೃತ್ಯಗಳನ್ನು ಒಂದಾಗಿಸಬೇಕು ಎಂಬ ಅರಿವಾಗಿದೆ. ಈ ತತ್ವವನ್ನು ಸದಾ ಅನುಸರಿಸಲಿಕ್ಕಾಗಿ, ನೀವು ನಿಮಗಾಗಿ ಇಷ್ಟಪಡುವುದನ್ನು ಇತರರಿಗೆ ಇಷ್ಟಪಡಬೇಕು ಎಂಬ ಪ್ರವಾದಿ(ಸ) ಹೇಳಿದ ಸುವರ್ಣ ತತ್ವವನ್ನು ಮುಂದೆ ಇರಿಸಬೇಕಾಗಿದೆ. ಆದ್ದರಿಂದ, ಈ ತತ್ವವನ್ನು ಮುಂದಿಟ್ಟುಕೊಂಡು, ನನಗೆ ಅಥವಾ ನನ್ನ ಸಮುದಾಯಕ್ಕೆ ಅಥವಾ ನನ್ನ ದೇಶಕ್ಕೆ ಮಾತ್ರ ಶಾಂತಿಯನ್ನು ಬಯಸುವುದಾದರೆ, ನನಗೆ ಎಂದಿಗೂ ಅಲ್ಲಾಹನ ಸಹಾಯ, ಅವನ ಬೆಂಬಲ ಮತ್ತು ಅವನ ಸಂಪ್ರೀತಿ ಪಡೆಯಲು ಸಾಧ್ಯವಿಲ್ಲವೆಂದು ನೆನಪಿನಲ್ಲಿಟ್ಟುಕೊಳ್ಳಬೇಕು. ಒಬ್ಬ ವ್ಯಕ್ತಿಯು ಎಲ್ಲವನ್ನೂ ಅಲ್ಲಾಹನ ಸಲುವಾಗಿ ಮಾಡಬೇಕು ಎಂಬ ನಂಬಿಕೆಯಿಂದ ನೆಲೆನಿಲ್ಲುವಾಗ ನಿಜವಾದ ಶಾಂತಿಯು ಸ್ಥಾಪಿತವಾಗುವುದು, ಅಲ್ಲದಿದ್ದರೆ ಶಾಂತಿ ಸ್ಥಾಪಿಸಲು ಸಾಧ್ಯವಿಲ್ಲ. ಅಲ್ಲಾಹನು ಪೈಗಂಬರರ(ಸ) ಮೂಲಕ ನಮ್ಮೊಡನೆ **ಅಲ್‌ಮಲಿಕುಲ್ ಖುದ್ದೂಸುಸ್ಸಲಾಮುಲ್ ಮುಅ್‌ಮಿನ್** (ಖುರ್‌ಆನ್ 59:24) ಎಂದು ಹೇಳಿ ಮಾನವ ಉದ್ದೇಶಗಳನ್ನು ಶುದ್ಧೀಕರಿಸಿದ್ದಾನೆ. ಆ ವಚನದ ಅರ್ಥ ಹೀಗಿದೆ: ಅವನೇ ಅಧಿಪತಿ, ಅವನು ಪರಿಶುದ್ಧನಾಗಿದ್ದಾನೆ ಮತ್ತು ಇತರರನ್ನು ಪರಿಶುದ್ಧಗೊಳಿಸುತ್ತಾನೆ. ಅವನೇ ಎಲ್ಲ ವಿಧದ ದೋಷದಿಂದ ಸುರಕ್ಷಿತನಾಗಿದ್ದಾನೆ ಮತ್ತು ಇತರರನ್ನು ಸುರಕ್ಷಿತನಾಗಿರಿಸುತ್ತಾನೆ. ಅವನು ಎಲ್ಲರಿಗೂ ಶಾಂತಿಯನ್ನು ಕೊಡುವವನಾಗಿದ್ದಾನೆ.

ಎಷ್ಟರವರೆಗೆ ಉದ್ದೇಶಗಳು ಸರಿಯಾಗುವುದಿಲ್ಲವೋ ಅಷ್ಟರವರೆಗೆ, ಕ್ರಿಯೆಯು ಸರಿಯಾಗಿರುವುದಿಲ್ಲವೆಂಬುದು ಖಚಿತವಾದ ಮಾತಾಗಿದೆ. ಉದ್ದೇಶವು ಶುದ್ಧವಾಗಿಲ್ಲದಿದ್ದರೆ, ಕೆಲಸದಲ್ಲಿ ಹೇಗೆ ಅನುಗ್ರಹ ಉಂಟಾಗಲು ಸಾಧ್ಯ? ಉದ್ದೇಶಗಳು ಸರಿಯಾಗಿರದಿದ್ದರೆ, ಕ್ರಿಯೆಯು ಎಂದಿಗೂ ಸರಿಯಾಗಿರುವುದಿಲ್ಲ ಎಂಬುದನ್ನು ನೆನಪಿನಲ್ಲಿಡಬೇಕು.

ಮನುಷ್ಯನ ಉದ್ದೇಶಗಳು ಪರಿಶುದ್ಧವಾಗಿಲ್ಲ ಎಂಬುದೇ ಇಂದು ಜಗತ್ತಿನಲ್ಲಿ ನಡೆಯುತ್ತಿರುವ ಎಲ್ಲ ಯುದ್ಧಗಳಿಗೆ ಮತ್ತು ಗಲಭೆಗಳಿಗೆ ಕಾರಣ. ಜನರ ಇಚ್ಛೆಗಳು ಅವರು ಬಾಯಿಯಿಂದ ಹೇಳುವ ಮಾತಿನಂತೆ ಅಲ್ಲ ಹಾಗೂ ಅವರ ಮಾತು ಮತ್ತು ಕ್ರಿಯೆ ಅವರ ಇಚ್ಛೆಗೆ ಅನುಗುಣವಾಗಿಲ್ಲ. ಪ್ರಪಂಚದ ಈ ಗಲಭೆಗಳಲ್ಲಿ ದೊಡ್ಡ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಹೆಚ್ಚಿನ ಪಾತ್ರವಿದೆ. ನಿಸ್ಸಂಶಯವಾಗಿಯೂ ಇಂದು ಜಗತ್ತು ಯುದ್ಧವನ್ನು ಕೆಟ್ಟದು ಎಂದು ಕರೆಯುತ್ತದೆ. ಯುದ್ಧ ಮಾಡುವುದು ಕೆಟ್ಟದ್ದು ಎಂಬ ಹೇಳಿಕೆ ಪ್ರತಿಯೊಬ್ಬ ನಾಯಕರಿಗೂ ಇದೆ. ಆದರೆ ಅವರ ಮಾತು, ಯಾರಾದರೂ ತಮ್ಮ ವಿರುದ್ಧ ಹೋರಾಡಿದರೆ ಅದು ಕೆಟ್ಟದು, ಆದರೆ ಅವರಿಂದ ಯುದ್ಧ ಪ್ರಾರಂಭವಾದರೆ ಅದು ಕೆಟ್ಟದ್ದಲ್ಲ ಎಂಬ ಅರ್ಥದಲ್ಲಿ ಆಗಿರುತ್ತದೆ. ಈ ದೋಷಕ್ಕೆ ಕಾರಣವೇನಂದರೆ ತಮಗೆ **"ಸಲಾಮ್"** (ಭದ್ರತೆ)ಯನ್ನು ನೀಡುವವನಾದ ಆ ಉನ್ನತ ಅಸ್ತಿತ್ವದ ಕಡೆಗೆ ಈ ಜನರ ದೃಷ್ಟಿ ಇಲ್ಲದಿರುವುದರಿಂದಾಗಿದೆ. ನಮ್ಮ ಹಿತಾಸಕ್ತಿ ಇರುವವರೆಗೆ ನಾವು ಶಾಂತಿಯು ಘೋಷಣೆಯೊಂದಿಗೆ ಕಾರ್ಯನಿರ್ವಹಿಸುತ್ತೇವೆ, ಆದರೆ ಅದು ನಮ್ಮ ಹಿತಾಸಕ್ತಿಗೆ ವಿರುದ್ಧವಾಗಿದ್ದರೆ ನಾವು ಅದನ್ನು ತಿರಸ್ಕರಿಸಬಹುದು ಎಂದು ಅವರು ಭಾವಿಸುತ್ತಾರೆ. ಯಾರಾದರೂ ನಮ್ಮ ಶತ್ರುಗಳಿಗೆ ಸಹಾಯ ಮಾಡಿ ಶಸ್ತ್ರಾಸ್ತ್ರಗಳನ್ನು ನೀಡಿದರೆ, ಅದು ಯಾವುದೇ ಸಂದರ್ಭದಲ್ಲಿ ಸ್ವೀಕಾರಾರ್ಹವಲ್ಲವೆಂದೂ ಆದರೆ ನಾವು ಯಾರಿಗಾದರೂ ಶಸ್ತ್ರಾಸ್ತ್ರಗಳನ್ನು ನೀಡಿದರೆ, ಅವರು ದಬ್ಬಾಳಿಕೆಗೆ ಅವುಗಳನ್ನು ಬಳಸುತ್ತಿದ್ದರೂ ಕೂಡ, ಅದು ಮಾನ್ಯವಾಗಿದೆ ಎಂಬುದಾಗಿ ಅವರು

ಯೋಚಿಸುತ್ತಾರೆ. ಈ ಚಿಂತೆಯಿದ್ದರೆ ನಿಜವಾದ ಶಾಂತಿಯನ್ನು ಹೇಗೆ ಸ್ಥಾಪಿಸಲು ಸಾಧ್ಯ? ಆದ್ದರಿಂದ, ಜಗತ್ತಿನಲ್ಲಿ ನಿಜವಾದ ಶಾಂತಿಯನ್ನು ಸ್ಥಾಪಿಸಲು ಮತ್ತು ಪ್ರತಿಯೊಬ್ಬರೂ ಶಾಂತಿಯಿಂದ ಬದುಕಬೇಕೆಂದು ಬಯಸುವ ದೇವನು ಜಗತ್ತಿನಲ್ಲಿದ್ದಾನೆಂಬ ನಂಬಿಕೆ ಮತ್ತು ಆಚರಣೆಯು ಪರಿಣಾಮಕಾರಿಯಾಗಿರುತ್ತದೆ. ಈ ನಂಬಿಕೆ ಇದ್ದರೆ ಮತ್ತು ಅದನ್ನು ಪಾಲಿಸುವುದಾದರೆ ಆಗ ಮನುಷ್ಯನ ಆಸೆಗಳು ಸ್ವಾರ್ಥವಾಗಿರುವುದಿಲ್ಲ. ಬದಲಿಗೆ, ಅದು ಜಗತ್ತಿಗೆ ಸಮಾನ ಪ್ರಯೋಜನವನ್ನು ನೀಡುತ್ತದೆ. ಹೀಗೆ ಸಂಭವಿಸಿದಾಗ, ಶಾಂತಿ ಮತ್ತು ಭದ್ರತೆಯನ್ನು ಸ್ಥಾಪಿಸುವ ನಮ್ಮ ಆಲೋಚನೆಗಳ ವಿಧಾನಗಳು ಬೇರೆಯೇ ರೀತಿಯಲ್ಲಾಗಿರುತ್ತದೆ. ಆಗ ಅದರಿಂದ ನಮಗೆ ಲಾಭವಾಗಿದೆಯೋ ಇಲ್ಲವೋ ಎಂದು ಯಾರೂ ನೋಡುವುದಿಲ್ಲ. ಬದಲಾಗಿ, ಅದು ಇಡೀ ಪ್ರಪಂಚದ ಮೇಲೆ ಯಾವ ಪರಿಣಾಮವನ್ನು ಬೀರುತ್ತದೆ ಎಂಬುದನ್ನು ನಾವು ನೋಡುತ್ತೇವೆ. ಪ್ರಪಂಚದ ಜನರು ಯಾವಾಗಲೂ ತಮ್ಮ ಲಾಭಕ್ಕಾಗಿ ಇತರರ ಶಾಂತಿಯನ್ನು ಹಾಳುಮಾಡುತ್ತಾರೆ, ಆದರೆ ಪರಮಾತ್ಮನಿದ್ದಾನೆ ಎಂದು ನಂಬುವವರು ಎಂದಿಗೂ ಹಾಗೆ ಮಾಡಲು ಧೈರ್ಯ ಪಡಲಿಕ್ಕಿಲ್ಲ. ಏಕೆಂದರೆ ನಾವು ಹಾಗೆ ಮಾಡಿದರೆ, ಪರಮಾತ್ಮನು ನಮ್ಮನ್ನು ತುಳಿದು ಬಿಡುವನೆಂದು ಅವರಿಗೆ ತಿಳಿದಿದೆ. ಆದ್ದರಿಂದ, ಒಬ್ಬ ಪರಮಾತ್ಮನನ್ನು ಅಂಗೀಕರಿಸದ ವರೆಗೆ, ಅವನ ಪ್ರೀತಿ ಹೃದಯದಲ್ಲಿ ಹುಟ್ಟದ ವರೆಗೆ ನಿಜವಾದ ಶಾಂತಿಯನ್ನು ಸ್ಥಾಪಿಸಲಾಗುವುದಿಲ್ಲ.

ಅಲ್ಲಾಹನು ಶಾಂತಿಯನ್ನು ನೀಡುವವನು ಎಂಬ ನಂಬಿಕೆಯನ್ನು ಇಸ್ಲಾಂ ಮಾತ್ರ ಅದರ ಸಂದೇಶವಾಹಕರ ಮೂಲಕ ಪ್ರಸ್ತುತಪಡಿಸುತ್ತದೆ. ಅಲ್ಲಾಹನು ಪೈಗಂಬರರಿಗೆ(ಸ) ಅವತೀರ್ಣಗೊಳಿಸಿದ ಬೋಧನೆಯಲ್ಲಿ ಹೀಗೆ ಹೇಳಿದ್ದಾನೆ:

"ನಿಶ್ಚಯವಾಗಿಯೂ ಅಲ್ಲಾಹನಿಂದ ನಿಮಗೆ ಬೆಳಕು ಮತ್ತು ಪ್ರಕಾಶಮಾನವಾದ ಗ್ರಂಥ ಅವತರಿಸಲ್ಪಟ್ಟಿದೆ. ಅಲ್ಲಾಹನು ಆ ಮೂಲಕ ಅವನ ಇಚ್ಛೆಯನ್ನು ಅನುಸರಿಸುವವರಿಗೆ ಸುರಕ್ಷಿತ ಮಾರ್ಗಗಳಿಗೆ ಸ್ಪಷ್ಟವಾದ ಮಾರ್ಗದರ್ಶನವನ್ನು ನೀಡುತ್ತಾನೆ." (ಖುರ್‌ಆನ್ 5:16,17). ಒಟ್ಟಿನಲ್ಲಿ, ಅಲ್ಲಾಹನು ಮಾರ್ಗದರ್ಶನದ ಒಂದು ಪ್ರಕಾಶವನ್ನು ಕಳುಹಿಸಿದನು, ಎಲ್ಲ ಆಜ್ಞೆಗಳೊಂದಿಗೆ ಒಂದು ಗ್ರಂಥವನ್ನೂ ಅದರಲ್ಲಿ ಸುರಕ್ಷಿತ ಮಾರ್ಗಗಳಿಗೆ ಸ್ಪಷ್ಟವಾದ ಮಾರ್ಗದರ್ಶನವನ್ನು ನೀಡಿದನು. ಅದನ್ನು ಪರಿಪೂರ್ಣವಾಗಿ ಅನುಸರಿಸುವವರು ಸುರಕ್ಷತೆಯ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ.

ಇಂದು ಮುಸ್ಲಿಮರಲ್ಲಿ ಅಶಾಂತಿ ಮತ್ತು ಅಧರ್ಮವಿದ್ದರೆ, ಅವರ ನಡುವೆ ಯುದ್ಧಗಳ ಅವಸ್ಥೆಯಿದ್ದರೆ, ಅದರರ್ಥ ಅವರು ನಿಜವಾಗಿಯೂ ಅಲ್ಲಾಹನು ಅವತೀರ್ಣಗೊಳಿಸಿದ ಗ್ರಂಥ ಮತ್ತು ಬೆಳಕನ್ನು ಅನುಸರಿಸುತ್ತಿಲ್ಲವೆಂಬುದು ಸ್ಪಷ್ಟ. ಅವರು ಪೈಗಂಬರರನ್ನು(ಸ) ಪ್ರೀತಿಸುತ್ತಾರೆಂದು ಹೇಳುತ್ತಾರೆಯಾದರೂ ಅವರ ಕರ್ಮವು ಅದರ ವಿರುದ್ಧವಾಗಿದೆ. ಅಲ್ಲಾಹನ ಮಾತು ಎಂದಿಗೂ ತಪ್ಪಾಗಲಾರದು. ಹಾಗೆಯೇ ಪವಿತ್ರ ಪೈಗಂಬರರ(ಸ) ಮಾತುಗಳು ಎಂದಿಗೂ ತಪ್ಪಾಗಲಾರವು. ಮುಸ್ಲಿಮರಲ್ಲಿ ಕೆಡುಕು ಮತ್ತು ಅಧರ್ಮವಿದ್ದರೆ, ಅವರು ಈ ಸ್ಪಷ್ಟವಾದ ಗ್ರಂಥವನ್ನು ನಂಬುವುದಾಗಿ ಹೇಳಿಕೊಂಡರೂ, ಅವರು ಅದರಲ್ಲಿ ಅಲ್ಲಾಹನು ಅವತೀರ್ಣಗೊಳಿಸಿದ ಶಿಕ್ಷಣಗಳನ್ನು ಅನುಸರಿಸುತ್ತಿಲ್ಲವೆಂಬುದು ಸ್ಪಷ್ಟ. ಪೈಗಂಬರರ(ಸ) ಮೇಲೆ ಪ್ರೀತಿಯಿದೆಯೆಂದು ಅವರು ವಾದಿಸುತ್ತಾರೆ. ಆದರೆ ರಸೂಲ್‌ರ(ಸ) ಚರ್ಯೆ ಮತ್ತು ಬೋಧನೆಗಳನ್ನು ಅನುಸರಿಸುವುದರ ಬಗ್ಗೆ ಅವರಿಗೆ ಯಾವುದೇ ಬದ್ಧತೆ ಇಲ್ಲದಾಗಿದೆ, ಹಾಗಾಗಿ ಇಂದು ಈ ಬೋಧನೆಯನ್ನು ತಮ್ಮ ಜೀವನದ ಭಾಗವನ್ನಾಗಿ ಮಾಡಿಕೊಳ್ಳುವುದು ರಸೂಲ್‌ರ(ಸ) ಸತ್ಯಸಂಧ ಸೇವಕರಾದ ಮಸೀಹ್ ಮೌಊದ್‌ರ(ಅ) ಅನುಯಾಯಿಗಳ ಕರ್ತವ್ಯವಾಗಿದೆ. ನೀವು ಪವಿತ್ರ ಖುರ್‌ಆನಿನ ಆದೇಶಗಳನ್ನು ಅನುಸರಿಸಿದರೆ ಮಾತ್ರ ನಿಮ್ಮ ಸುತ್ತಮುತ್ತ ನೀವು ಶಾಂತಿ ಮತ್ತು ಭದ್ರತೆಯನ್ನು ಉಂಟುಮಾಡಬಹುದು ಮತ್ತು ಜಗತ್ತಿಗೆ ಶಾಂತಿಯ ಸಂದೇಶವನ್ನು ತಲುಪಿಸಬಹುದು. ಇಲ್ಲದಿದ್ದರೆ ನಿಮ್ಮ ಮಾತು ಮತ್ತು ಕೃತ್ಯಗಳನ್ನು ಮೊದಲು ಹೊಂದಾಣಿಕೆಗೊಳಿಸಿದ ನಂತರ ನಮಗೆ ಉಪದೇಶ ನೀಡಿರಿ ಎಂದು ಲೋಕವು ನಿಮ್ಮೊಡನೆ ಹೇಳಬಹುದು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಈಗ ಆಕಾಶದ ಕೆಳಗೆ ಒಬ್ಬನೇ ಪ್ರವಾದಿ ಮತ್ತು ಒಂದೇ ಒಂದು ಗ್ರಂಥವಿದೆ. ಆ ಪ್ರವಾದಿ ಅಲ್ಲಾಹನ ಸಂದೇಶವಾಹಕ ಮುಹಮ್ಮದ್(ಸ) ಆಗಿದ್ದಾರೆ. ಅವರು ಎಲ್ಲ ಪ್ರವಾದಿಗಳಲ್ಲಿ ಅತ್ಯುನ್ನತ ಮತ್ತು ಅತ್ಯುತ್ತಮರಾಗಿದ್ದಾರೆ. ಅವರು ಎಲ್ಲ ಸಂದೇಶವಾಹಕರಲ್ಲಿ ಅತ್ಯಂತ ಪರಿಪೂರ್ಣರು ಮತ್ತು ಪ್ರವಾದಿಗಳಲ್ಲಿ ಖಾತಮುಲ್ ಅಂಬಿಯಾ (ಪ್ರವಾದಿಗಳಲ್ಲಿ ಶ್ರೇಷ್ಠ, ಪ್ರವಾದಿಗಳ ಮುದ್ರೆ) ಆಗಿದ್ದಾರೆ. ಅವರು ಸೃಷ್ಟಿ ಕುಲೋತ್ತಮರಾಗಿದ್ದಾರೆ. ಅವರನ್ನು ಅನುಸರಿಸುವುದರಿಂದ ಸರ್ವಶಕ್ತನಾದ ದೇವನನ್ನು ಗಳಿಸಬಹುದು. ಅವರ ಮೂಲಕ ಕತ್ತಲೆಯ ಪರದೆಯು ನೀಗಿಸಲ್ಪಡುತ್ತದೆ. ಈ ಜಗತ್ತಿನಲ್ಲೇ ನಿಜವಾದ ಮೋಕ್ಷದ ಚಿಹ್ನೆಗಳು ಕಾಣಲಾರಂಭಿಸುತ್ತವೆ. ಅದೇ ರೀತಿಯಲ್ಲಿ ಒಂದೇ ಒಂದು ಗ್ರಂಥವಿದೆ. ಅದು ಪವಿತ್ರ ಖುರ್‌ಆನ್ ಆಗಿದೆ. ಅದರ ಸತ್ಯತೆ, ಅದರ ಪರಿಪೂರ್ಣತೆಯನ್ನು ಒಳಗೊಂಡಿರುವ ಸೂಚನೆಗಳ ಮತ್ತು ಪರಿಣಾಮಗಳ ಮೂಲಕ ನಿಜವಾದ ಜ್ಞಾನ ವಿಜ್ಞಾನಗಳು ಮತ್ತು ದಿವ್ಯ ಜ್ಞಾನವನ್ನು ಪಡೆಯಲಾಗುತ್ತದೆ ಮತ್ತು ಹೃದಯವನ್ನು ಮನುಷ್ಯ ಸಹಜವಾದ ಮಾಲಿನ್ಯದಿಂದ ಶುದ್ಧೀಕರಿಸಲಾಗುತ್ತದೆ. ಅಜ್ಞಾನ, ತಪ್ಪು ತಿಳುವಳಿಕೆ ಮತ್ತು ಅನುಮಾನಗಳ ಮುಸುಕುಗಳನ್ನು ತೊಡೆದುಹಾಕಿದ ನಂತರ ಮನುಷ್ಯನು ಯಥಾರ್ಥ ಸತ್ಯದ ಸ್ಥಾನವನ್ನು ತಲುಪುತ್ತಾನೆ. (ಬರಾಹೀನೆ ಅಹ್ಮದಿಯಾ ರೂಹಾನೀ ಖಝಾಇನ್ ಸಂಪುಟ 1, ಪುಟ 557–558)

ಆದ್ದರಿಂದ, ಅಲ್ಲಾಹನು ತನ್ನ ಪ್ರಕಾಶವಾದ ಹಝ್ರತ್ ಮುಹಮ್ಮದ್‌ರನ್ನು(ಸ) ಹಾಗೆಯೇ ತನ್ನ ಪ್ರಕಾಶಮಾನವಾದ ಗ್ರಂಥವಾದ ಮತ್ತು ಎಲ್ಲ ಜ್ಞಾನದ ಮೂಲ, ಮಾರ್ಗದರ್ಶನದ ಬೆಳಕು ಮತ್ತು ಶಾಂತಿಯ ಸಂದೇಶವಾದ ಪವಿತ್ರ ಖುರ್‌ಆನನ್ನು ಅವತೀರ್ಣಗೊಳಿಸುವ ಮೂಲಕ ಮಾನವೀಯತೆಗೆ ಅತ್ಯಂತ ದೊಡ್ಡ ಉಪಕಾರವನ್ನು ಮಾಡಿದ್ದಾನೆ. ಮನುಷ್ಯನು ಅದರ ಲಾಭವನ್ನು ಪಡೆಯದಿದ್ದರೆ ಮತ್ತು ತನ್ನ ವಿನಾಶಕಾರಿ ಸ್ವಾರ್ಥ ಹಿತಾಸಕ್ತಿಗಳಿಗೆ ಬಂಧಿಯಾಗಿ ಉಳಿದರೆ ಅದಕ್ಕಿಂತ ದುರದೃಷ್ಟಕರ ಏನಾಗಲಿಕ್ಕಿದೆ? ಆದ್ದರಿಂದ ನಾವು ನಮ್ಮ ಇಹಪರವನ್ನು ಸುಂದರಗೊಳಿಸಲು, ಶಾಂತಿ ಮತ್ತು ಸಮಾಧಾನದಿಂದ ಬದುಕಲು ಬಯಸುವುದಾದರೆ ನಾವು ಪೈಗಂಬರರಿಗೆ(ಸ) ಅವತೀರ್ಣವಾದ ಈ ಅಲ್ಲಾಹನ ಗ್ರಂಥವನ್ನು

ಸದಾ ನಮ್ಮ ಮುಂದೆ ಇಡಬೇಕಾಗಿದೆ.

ಮಾರ್ಗದರ್ಶನದ ಈ ಪ್ರಕಾಶಮಾನವಾದ ಗ್ರಂಥವನ್ನು ಸದಾ ನೀವು ನಿಮ್ಮ ಮುಂದೆ ಇರಿಸಿರಿ. ಈ ಪ್ರಕಾಶಮಾನವಾದ ಗ್ರಂಥದ ಬೋಧನೆಯನ್ನು ನೀವು ಓದಬೇಕು ಮತ್ತು ಅದನ್ನು ತಮ್ಮ ಮುಂದೆ ಇಡಬೇಕಾಗಿದೆ. ಆಗ ಮಾತ್ರ **'ಸುಬುಲಸ್ಸಲಾಂ'** (ಭದ್ರತೆಯ ಹಾದಿಯಲ್ಲಿ) ನಡೆಯುವವರಾಗುವೆವು. ಈ ಗ್ರಂಥದಲ್ಲಿ ಮಾನವ ಕುಲದ ಶಾಂತಿಯನ್ನು ಹಾಳು ಮಾಡುವ ಯಾವುದೇ ಆದೇಶವಿಲ್ಲ. ಆದ್ದರಿಂದ ಇಂದು ಈ ಸಂದೇಶವನ್ನು ಸ್ವಂತ ಜನರಿಗೆ ಮತ್ತು ಪರರಿಗೆ ನೀಡುವುದು ನಮ್ಮ ಕೆಲಸವಾಗಿದೆ ಮತ್ತು ಇದು ವಿಶ್ವ ಶಾಂತಿಯ ಭರವಸೆಯಾಗಿದೆ. ಇದೇ ಪೈಗಂಬರ್[ಸ] ತನ್ನ ಸಹಚರರಲ್ಲಿ ಸೃಷ್ಟಿಸಿದ ಕ್ರಾಂತಿಯಾಗಿದೆ. ಅವರು ಪ್ರಾಯೋಗಿಕವಾಗಿ ಎಂತಹ ಒಂದು ಜಮಾಅತನ್ನು ಉಂಟುಮಾಡಿದರು ಎಂದರೆ, ಅಜ್ಞಾನಿಗಳು ಅವರ ಮುಂದೆ ಬಂದರೆ ಅವರು **"ಸಲಾಮ್"** ಎಂದು ಹೇಳುತ್ತಾರೆ. (25:64). (ಎಂದರೆ, ಅವರೊಡನೆ ಜಗಳಕ್ಕೆ ಹೋಗದೇ, ಅವರಿಗೂ ಶಾಂತಿಯನ್ನು ಬಯಸಿ ಅಲ್ಲಿಂದ ದಾಟಿ ಹೋಗುತ್ತಾರೆ – ಅನುವಾದಕ). ಈ ಒಂದು ಸ್ಥಿತಿ ನಮ್ಮಲ್ಲಿ ಉಂಟಾದರೆ ಮತ್ತು ನಾವು ಲೋಕದಲ್ಲಿ ಉಂಟುಮಾಡಿದರೆ, ನಮ್ಮ ಈಗಿನ ಮತ್ತು ಮುಂದಿನ ಅವಸ್ಥೆ ಸಹ ಸುರಕ್ಷಿತವಾಗಿರುವುದು. ಆದ್ದರಿಂದ, ಹಝ್ರತ್ ಮಸೀಹ್ ಮೌಊದ್‌ರನ್ನು[ಅ] ಅಂಗೀಕರಿಸಿದ ನಾವು ಮಾಡಬೇಕಾದ ಮಹತ್ತರವಾದ ಕಾರ್ಯವು ನಾವು ನಮ್ಮ ಮನೆಗಳಲ್ಲಿ ಮತ್ತು ನಮ್ಮ ಪರಿಸರದಲ್ಲಿ ಶಾಂತಿ ಸಮಾಧಾನವನ್ನು ಸೃಷ್ಟಿಸಬೇಕು ಹಾಗೂ ಜಗತ್ತಿನಲ್ಲೂ ಶಾಂತಿ ಸಮಾಧಾನವನ್ನು ಸೃಷ್ಟಿಸಬೇಕಾಗಿದೆ. ನಮ್ಮ ಹೃದಯಗಳು ಅಪ್ಪಟ **'ತೌಹೀದ್'** (ಏಕ ದೇವಾರಾಧನೆ)ನಿಂದ ತುಂಬಿ ಜಗತ್ತನ್ನು ನಿಜವಾದ ಏಕದೇವಾರಾಧನೆಗೆ ಕೊಂಡೊಯ್ಯುವಾಗ ಮಾತ್ರ ಇದು ಸಂಭವಿಸುವುದು. ನಿಜವಾದ **'ತೌಹೀದ್'** ಸ್ಥಾಪನೆಯಾಗದೆ ಶಾಂತಿ ನೆಲೆಸಲು ಸಾಧ್ಯವಿಲ್ಲವೆಂಬುದು ಖಚಿತ. ಏಕನಾದ ಸೃಷ್ಟಿಕರ್ತನನ್ನು ಅಂಗೀಕರಿಸಬೇಕೆಂಬುದನ್ನು ಈ ಮೊದಲೇ ನಾನು ಹೇಳಿದ್ದೆ. ಏಕದೇವಾರಾಧನೆಯ (ತೌಹೀದ್)ನ್ನು ಹೃದಯದಲ್ಲಿ ಸ್ಥಾಪಿಸದೆ ಈ ಕಲ್ಪನೆಯು ಬರಲು ಸಾಧ್ಯವಿಲ್ಲ. ತೌಹೀದ್ ಸ್ಥಾಪಿಸದಿದ್ದರೆ ಹೊಡೆದಾಟಗಳು ಕೂಡ ನಡೆಯುತ್ತಲೇ ಇರುವುವು. ನಿಜವಾದ ಸಹೋದರತೆ ಮತ್ತು ಪರಸ್ಪರ ಪ್ರೀತಿ ಉಂಟಾದರೆ ಮಾತ್ರ ಜಗಳಗಳು ಕೊನೆಗೊಳ್ಳುವುವು. ಜನರೊಳಗೆ ನಿಜವಾದ ಸಾಹೋದರ್ಯ ಉಂಟಾಗುವವರೆಗೆ ಶಾಂತಿ ಸ್ಥಾಪನೆಯಾಗದು. ಒಬ್ಬ ದೇವನನ್ನು ನಂಬದೆ ಮತ್ತು ಏಕದೇವನೊಂದಿಗೆ ಸಂಬಂಧವನ್ನು ಸ್ಥಾಪಿಸದೆ ನಿಜವಾದ ಸಹೋದರತೆ ಉಂಟಾಗಲಾರದು. ಬರೇ ನಂಬುವುದು ಮಾತ್ರವಲ್ಲ, ಸೃಷ್ಟಿಕರ್ತನೊಂದಿಗೆ ಒಂದು ಆತ್ಮೀಯ ಸಂಬಂಧವನ್ನು ಸ್ಥಾಪಿಸಬೇಕಾಗಿದೆ. ನಮಗೆ ಈ ಬೋಧನೆ ಕೂಡ ರಸೂಲ್‌ರಿಂದಲೇ[ಸ] ಲಭಿಸಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ **ಅಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್**. (1:2). ಎಂದು ಓದುವ ಮೂಲಕ, ಸರ್ವಶಕ್ತನಾದ ದೇವನ ಪ್ರಭುತ್ವವು ಇಡೀ ಪ್ರಪಂಚದಾದ್ಯಂತ ವ್ಯಾಪಿಸಿದೆ ಎಂಬ ತಿಳುವಳಿಕೆ ನೀಡಲ್ಪಡುತ್ತದೆ. ಈ ವಚನಗಳನ್ನು ಓದುವುದರಿಂದ, ಒಬ್ಬ ವ್ಯಕ್ತಿಯ ಆಲೋಚನೆಯು ವಿಸ್ತಾರಗೊಳ್ಳುತ್ತದೆ. ಅವನು ಸರ್ವ ಲೋಕಗಳ ಪ್ರಭುವಾದ, ಕ್ರೈಸ್ತರ, ಹಿಂದೂಗಳ, ಯಹೂದಿಯರ ಮತ್ತು ಪ್ರತಿಯೊಬ್ಬರ ಪ್ರಭುವಾದ ದೇವನನ್ನು ಸ್ತುತಿಸುತ್ತಾನೆ. ಒಬ್ಬ ವ್ಯಕ್ತಿಯು ಈ ವಚನಗಳನ್ನು ಓದುವಾಗ, ಆ ವ್ಯಕ್ತಿ ಹೇಗೆ ತಾನೆ ಇತರರನ್ನು ದ್ವೇಷಿಸಲು ಸಾಧ್ಯ? ಇದನ್ನೇ ನಾನು ಒಮ್ಮೆ ಅಮೇರಿಕದಲ್ಲಿ ವಿದೇಶಿಯರ ಕೂಟದಲ್ಲಿ ವಿವರಿಸಿದಾಗ ಅವರು ಹೀಗೆ ಹೇಳಿದರು: ಇದು ಎಂತಹ ಸುಂದರವಾದ ಶಿಕ್ಷಣ! ವಾಸ್ತವವಾಗಿ, ಇಸ್ಲಾಂ ಧರ್ಮದ ಬೋಧನೆಯಿಂದ ನಿಜವಾದ ಮುಸಲ್ಮಾನನ ಹೃದಯದಲ್ಲಿ ಇನ್ನೊಬ್ಬರ ಬಗ್ಗೆ ಎಂದಿಗೂ ದ್ವೇಷ ಉಂಟಾಗಲು ಸಾಧ್ಯವಿಲ್ಲ. **ರಬ್ಬುಲ್ ಆಲಮೀನ್** (ಸರ್ವಲೋಕಗಳ ಪರಿಪಾಲಕ) ಎಂಬ ವಚನವು ಎಲ್ಲವನ್ನೂ ಆವರಿಸಿದೆ. ಇದು ಭದ್ರತೆಯನ್ನು ಹರಡಲು ದೊಡ್ಡ ಮತ್ತು ವಿಶಾಲವಾದ ಮಾರ್ಗಗಳನ್ನು ತೆರೆಯುತ್ತದೆ. ನಿಜವಾದ ಏಕದೇವೋಪಾಸನೆ ಸ್ಥಾಪಿತವಾದರೆ ಮತ್ತು ಲೋಕಾಧಿಪತಿಯ ಸ್ತುತಿಯಿಂದ ಮನುಷ್ಯನ ನಾಲಗೆಯು ತೇವಗೊಳ್ಳುವುದಾದರೆ ಒಬ್ಬ ವ್ಯಕ್ತಿಯ ಹೃದಯದಲ್ಲಿ ಯಾವುದೇ ಸಮುದಾಯದ ವಿರುದ್ಧ ದ್ವೇಷ ಉಂಟಾಗಲು ಸಾಧ್ಯವೇ ಇಲ್ಲವೆಂದು **'ಅಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್'** ಎಂಬ ವಚನದಲ್ಲಿ ತಿಳಿಸಲಾಗಿದೆ. ಕ್ರೈಸ್ತರ ವಿರುದ್ಧವಾಗಲೀ ಹಿಂದುಗಳ ವಿರುದ್ಧವಾಗಲೀ ಯಹೂದಿಗಳ ವಿರುದ್ಧವಾಗಲೀ ದ್ವೇಷ ಉಂಟಾಗಲು ಒಮ್ಮೆಯೂ ಸಾಧ್ಯವಿಲ್ಲ. ಒಂದು ಕಡೆ ಅವರು ನಾಶವಾಗಲಿ ಎಂದು ಆಶೆ ಇಟ್ಟು ಇನ್ನೊಂದು ಕಡೆ ಅವರನ್ನು ನೋಡಿ ಅಲ್ಲಾಹನನ್ನು ಸ್ತುತಿಸಲು ಹೇಗೆ ಸಾಧ್ಯ? ಹಾಗೆ ಆಗಲು ಸಾಧ್ಯವೇ ಇಲ್ಲ. ಆದ್ದರಿಂದ, ನಿಜವಾದ ಏಕದೇವರಾಧಕ ಮಾತ್ರ ಶಾಂತಿ ಮತ್ತು ಸಮಾಧಾನದ ವಾಹಕನಾಗಿರುತ್ತಾನೆ. ಮುಸ್ಲಿಮರು ಈ ಅಂಶವನ್ನು ನಿಜವಾಗಿಯೂ ಅರ್ಥಮಾಡಿಕೊಂಡರೆ ಮತ್ತು ಅದಕ್ಕೆ ಅನುಗುಣವಾಗಿ ತಮ್ಮ ಜೀವನವನ್ನು ಅಳವಡಿಸಿಕೊಂಡರೆ, ಅವರು ವಿಶ್ವದ ನಿಜವಾದ ಶಾಂತಿ ಪ್ರಿಯರಾಗುವರು. ಆದರೆ ಅದಕ್ಕಾಗಿ ಪ್ರವಾದಿಯ[ಸ] ನಿಜವಾದ ಸೇವಕರಾದಂತಹ ಮಸೀಹ್ ಮೌಊದ್‌ರೊಂದಿಗೆ[ಅ] ಸಂಪರ್ಕ ಇರಿಸಬೇಕಾಗುವುದು. ಆಗ ಮಾತ್ರ ನಿಜವಾದ ತಿಳುವಳಿಕೆ ಮತ್ತು ಉದ್ದೇಶದ ಬಗ್ಗೆ ಜ್ಞಾನ ಲಭಿಸಲು ಸಾಧ್ಯ. ಆದರೆ ಅದೇ ಸಮಯದಲ್ಲಿ, ನಾವು ನಮ್ಮ ಸ್ಥಿತಿಗಳ ಬಗ್ಗೆ ಮೌಲ್ಯಮಾಪನ ಮಾಡಬೇಕು ಎಂಬ ಜವಾಬ್ದಾರಿಯನ್ನು ಇದು ನೀಡುತ್ತದೆ ಎಂದು ನಾನು ಮತ್ತೊಮ್ಮೆ ಹೇಳಬಯಸುತ್ತೇನೆ. ನಮ್ಮ ನಮಾಝಿನಲ್ಲಿ **'ಅಲ್ ಹಮ್ದುಲಿಲ್ಲಾಹಿ ರಬ್ಬಿಲ್ ಆಲಮೀನ್'** (ಸರ್ವ ಲೋಕಗಳ ಒಡೆಯನಿಗೆ ಸರ್ವ ಸ್ತುತಿಯು) ಎಂದು ಪಠಿಸುವುದು ಕೇವಲ ನಮ್ಮ ಬಾಯಿಯ ಮಾತುಗಳಾಗಿ ಹೃದಯ ಮತ್ತು ಮನಸ್ಸು ಅದರ ಆಳದಿಂದ ಖಾಲಿಯಾಗಿದ್ದರೆ, ನಾವು ಕೂಡ ಪಿತೂರಿಗಳನ್ನು ಸೃಷ್ಟಿಸುವವರಲ್ಲಿ ಸೇರುವೆವು ಮತ್ತು ಶಾಂತಿ ಸಮಾಧಾನವನ್ನು ಹರಡುವ ಮತ್ತು ರಸೂಲ್[ಸ] ತಂದಂತಹ ಬೋಧನೆಗಳನ್ನು ಅನುಸರಿಸುವವರಾಗಿ ನಾವು ಉಳಿಯಲಿಕ್ಕಿಲ್ಲ. ಆದ್ದರಿಂದ ಸಾಕಷ್ಟು ಯೋಚಿಸಬೇಕಾದ, ಸಾಕಷ್ಟು ಗಾಢವಾದ ಚಿಂತನೆ ಅಗತ್ಯವಿರುವ, ಸಾಕಷ್ಟು ಆತಂಕ ಪಡಬೇಕಾದ ಸ್ಥಿತಿಯಾಗಿದೆ. ಇಂದು ಜಗತ್ತಿನಲ್ಲಿ ನಿಜವಾದ ಶಾಂತಿ ಮತ್ತು ಸಮಾಧಾನ ಸೃಷ್ಟಿಸಲು ಏಕದೇವನಲ್ಲಿ ಮಾತ್ರ ತನ್ನ ದೃಢನಂಬಿಕೆಯನ್ನು ಇಟ್ಟುಕೊಳ್ಳುವುದು ಪ್ರತಿಯೊಬ್ಬ ಅಹ್ಮದಿಯ ಕರ್ತವ್ಯವಾಗಿದೆ. ಬೇರೆ ಯಾವ ಪ್ರೀತಿಯೂ ಅದರ ಸ್ಥಾನವನ್ನು ಪಡೆಯಲು ಸಾಧ್ಯವಾಗದಂತಹ ರೀತಿಯಲ್ಲಿ ಸರ್ವಶಕ್ತನ ಪ್ರೀತಿಯನ್ನು ಹೃದಯದಲ್ಲಿ ಸ್ಥಾಪಿತಗೊಳಿಸಿರಿ. ಅಲ್ಲಾಹನ ಆಜ್ಞೆಗಳನ್ನು ಅನುಸರಿಸಲು, ಪೈಗಂಬರರಿಗೆ[ಸ] ಅವತೀರ್ಣಗೊಳಿಸಿದ ಬೋಧನೆಗಳನ್ನು ಅಂದರೆ ಪವಿತ್ರ ಖುರ್‌ಆನನ್ನು ಜೀವನದ ಭಾಗವನ್ನಾಗಿ ಮಾಡಿರಿ. ಪವಿತ್ರ

ಖುರ್‌ಆನಿನ ಆದೇಶ ಮತ್ತು ಅಲ್ಲಾಹನ ಸಂದೇಶವಾಹಕರ(ಸ) ಪ್ರತಿಯೊಂದು ಉಪದೇಶ ನಮ್ಮ ಮಾತುಗಳ ಮತ್ತು ಕಾರ್ಯಗಳ ಭಾಗವಾಗುವಂತಹ ಮಟ್ಟಕ್ಕೆ ನಮ್ಮ ಸ್ಥಿತಿಯು ತಲುಪುವಾಗ ಮಾತ್ರ ನಾವು ಇಸ್ಲಾಮಿನ ನಿಜವಾದ ಸಂದೇಶವನ್ನು ಜಗತ್ತಿಗೆ ತಲುಪಿಸಲು ಸಾಧ್ಯವಾಗುವುದು. ನಾವು ಅವರಿಗೆ ನಿಜವಾದ ಶಾಂತಿಯ ಮಾರ್ಗದ ಬೋಧನೆಗಳನ್ನು ಮುಂದಿರಿಸಿಕೊಂಡು ಮಾತ್ರವಲ್ಲ, ಅದರೊಂದಿಗೆ ನಾವು ನಮ್ಮ ಕೃತ್ಯಗಳ ಮೂಲಕವೂ ಕಲಿಸುವವರಾಗುವೆವು. ಇದೇ ಜಗತ್ತಿನಲ್ಲಿ ನಿಜವಾದ ಶಾಂತಿಯನ್ನು ಸ್ಥಾಪಿಸುವ ವಿಧಾನವಾಗಿದೆ ಮತ್ತು ಇದೇ ಪೈಗಂಬರರ(ಸ) ಶ್ರೇಷ್ಠ ಅಸ್ತಿತ್ವವನ್ನು ಸಾಬೀತುಪಡಿಸುವ ಸಾಧನವಾಗಿದೆ ಹಾಗೂ ಇದೇ ಇಸ್ಲಾಂ ಧರ್ಮವನ್ನು ವಿರೋಧಿಸುವವರ ಬಾಯಿ ಮುಚ್ಚಿಸುವ ವಿಧಾನವಾಗಿದೆ.

ಇಂದು ಈ ಕೆಲಸವನ್ನು ವಾಗ್ದತ್ತ ಮಸೀಹ್‌ರ(ಅ) ಜಮಾಅತಿಗೆ ಒಪ್ಪಿಸಲಾಗಿದೆ. ಮನೆಯಿಂದ ಹಿಡಿದು ಅಂತರರಾಷ್ಟ್ರೀಯ ಮಟ್ಟದವರೆಗೆ ನಾವು ಕೂಡ ನಮ್ಮ ಕರ್ತವ್ಯವನ್ನು ನಿರ್ವಹಿಸದಿದ್ದರೆ, ನಾವು ಶಾಂತಿ ಮತ್ತು ಸಮಾಧಾನದಿಂದ ಬದುಕಬಹುದೆಂಬ ಯಾವುದೇ ಭರವಸೆಯಾಗಲೀ ನಮ್ಮ ತಲೆಮಾರುಗಳು ಶಾಂತಿ ಮತ್ತು ಸಮಾಧಾನದಿಂದ ಬದುಕಬಹುದೆಂಬ ಯಾವುದೇ ಖಾತರಿಯಾಗಲೀ ಹಾಗೆಯೇ ಈ ಜಗತ್ತು ಶಾಂತಿ ಮತ್ತು ಭದ್ರತೆಯಿಂದ ಇರಬಹುದೆಂಬ ಯಾವುದೇ ನಿರೀಕ್ಷೆ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಅಲ್ಲಾಹನು ನಮ್ಮಿಂದ ಈ ಲೋಕವನ್ನು ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವವರನ್ನಾಗಿ ಮಾಡಲಿ. ನಮ್ಮ ಕರ್ತವ್ಯಗಳನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲು ಅಲ್ಲಾಹನು ನಮಗೆ ಸೌಭಾಗ್ಯ ನೀಡಲಿ.

ಈಗ ನಾವು ದುಆ ಮಾಡುವೆವು. ಜಲ್ಸದಲ್ಲಿ ಭಾಗವಹಿಸಿದ ಎಲ್ಲರನ್ನೂ ಅಲ್ಲಾಹನು ಅನುಗ್ರಹಿಸಲಿ ಮತ್ತು ಪ್ರತಿಯೊಬ್ಬರನ್ನೂ ವಾಗ್ದತ್ತ ಮಸೀಹ್‌ರ(ಅ) ಪ್ರಾರ್ಥನೆಯ ವಾರಸುದಾರರನ್ನಾಗಿ ಮಾಡಲೆಂದು ಪ್ರಾರ್ಥಿಸೋಣ. ಪ್ರಪಂಚದ ಈಗಿನ ಪರಿಸ್ಥಿತಿಗಳಲ್ಲಿ ಶಾಂತಿ ಮತ್ತು ಸಮಾಧಾನವು ತ್ವರಿತವಾಗಿ ಉಂಟಾಗಲಿ. ಹಾಗೆ ನಾವು ನಮ್ಮ ಜಲ್ಸಗಳನ್ನು ಮತ್ತೆ ದೊಡ್ಡ ಪ್ರಮಾಣದಲ್ಲಿ ಮತ್ತು ಅದೇ ವೈಭವದಿಂದ ಎಲ್ಲ ರೀತಿಯ ಚಿಂತೆಗಳಿಂದ ಮುಕ್ತಗೊಂಡು ನಡೆಸುವವರಾಗಲಿ. ನಮ್ಮ ಜಲ್ಸಗಳು ಆಧ್ಯಾತ್ಮಿಕ ಮತ್ತು ಜ್ಞಾನದ ಬಾಯಾರಿಕೆಯನ್ನು ನೀಗಿಸುವ ಸಾಧನವಾಗಲಿ. ನಾವು ನಮ್ಮ ಜೀವನವನ್ನು ಇಸ್ಲಾಮಿನ ಶಿಕ್ಷಣದ ಪ್ರಕಾರ ಜೀವಿಸುವರಾಗಿಸಲಿ. ಅಲ್ಲಾಹನು ನಮ್ಮನ್ನು ಅವನ ಪ್ರೀತಿ ಮತ್ತು ಕೃಪೆಗೆ ಪಾತ್ರರಾಗಿಸಲಿ. ಸರ್ವಶಕ್ತನಾದ ಅಲ್ಲಾಹನು ಅದರ ಸೌಭಾಗ್ಯ ನೀಡಲಿ. ದುಆ ಮಾಡೋಣ. ♦

**(ಭಾಷಾಂತರ : ಮುಹಮ್ಮದ್ ರಫೀಕ್ ಮಂಜೇಶ್ವರ)**

**6ನೇ ಪುಟದಿಂದ**

ಬೋಧ ಹೊಂದಿದ್ದು ಶುಷ್ಕವಾಗಿರುವುದೇಕೆಂದು ಮನವರಿಕೆ ಮಾಡಿಕೊಳ್ಳುವುದು ಕಷ್ಟಕರವಾಗಿದೆ. ಇಸ್ಲಾಮ್ ಶುಷ್ಕವೂ ಬೇಸರ ಬರಿಸುವಂತಹದೂ ಆಗಿರುವ ಧರ್ಮವಲ್ಲ. ಅದನ್ನು ದೂರದಿಂದ ನೋಡುವಾಗ ಹಾಗೆ ಕಾಣಿಸಬಹುದು. ಒಂದನೆಯದಾಗಿ, ಸತ್ಕರ್ಮ ಮಾಡುವ ಅಭಿರುಚಿ ಹೊಂದಿದವರು ತಮ್ಮ ಕೆಲಸದಿಂದ ಶ್ರೇಷ್ಠ ಮಟ್ಟದ ಸುಖವನ್ನು ಪಡೆಯುತ್ತಾರೆ. ಹೊರಗಿನವರಿಗೆ ಅದು ನೀರಸವಾಗಿ ಕಾಣಿಸಬಹುದು. ಎರಡನೆಯದಾಗಿ, ದೇವನ ನಿಜವಾದ ಪ್ರೀತಿಯನ್ನು ಅನುಭವಿಸುವ ಭಾಗ್ಯವನ್ನು ಪಡೆದವರಲ್ಲಿ ಹೆಚ್ಚು ಭಾಗ್ಯವಂತರಾದವರು ಎಂತಹ ಉನ್ನತ ಆನಂದವನ್ನು ಅನುಭವಿಸುತ್ತಾರೆಂದರೆ ಅವರಿಗೆ ಲೌಕಿಕ ಸುಖಗಳು ಬಹಳ ಕೆಳಮಟ್ಟದ್ದು, ಹೀನವಾದುದು, ಅರ್ಥಶೂನ್ಯವಾದುದು ಮತ್ತು ತಾತ್ಕಾಲಿಕವೆಂದು ಭಾಸವಾಗುತ್ತದೆ. ಮೂರನೆಯದಾಗಿ, ಸುಖಲೋಲುಪತೆಗೊಳಗಾಗದ ಸಮಾಜ ಹಗಲಿನ ಅಂತ್ಯದಲ್ಲಿ ಬರಿಗೈಯಲ್ಲಿರುವುದಿಲ್ಲ. ವಿಶ್ಲೇಷಿಸುವಾಗ ಮೌಲ್ಯಗಳ ಬದಲಾವಣೆಯನ್ನು ಎಂದರೆ ಆತಂಕ, ಆವೇಶ, ಇಂದ್ರಿಯ ಸುಖ ಮತ್ತು ಸ್ಫೋಟಕ ಪ್ರಕ್ರಿಯೆಗಳನ್ನು ಶಾಂತಿ, ಸಮಾಧಾನ, ಸಮತೋಲನ, ಭದ್ರತೆ, ಘನತೆ ಮತ್ತು ತೃಪ್ತಿಗೆ ಬದಲಾಯಿಸಿಕೊಳ್ಳಲಾಗಿದೆ. ಇದು ಒಂದು ಬಹುಮಾನವಾಗಿದೆ. ಅತ್ಯಂತ ಶ್ರೇಷ್ಠ ಬಹುಮಾನ.

ಎರಡು ವಿಭಿನ್ನ ಸಾಮಾಜಿಕ ಕಾಲಾವಸ್ಥೆಗಳನ್ನು ಮತ್ತು ವಾತಾವರಣಗಳನ್ನು ಹೋಲಿಸಿ ನೋಡುವಾಗ ದೇವನಿಗೆ ಪ್ರೀತಿ ಮತ್ತು ವಿಧೇಯತೆಯನ್ನು ಪ್ರಕಟಿಸುವ ಮರವು ಸುಖಪ್ರಿಯ ಭೌತಿಕ ಸಮಾಜದಲ್ಲಿ ಬೇರೂರಲಾರದೆಂದು ಮನವರಿಕೆ ಮಾಡಿಕೊಳ್ಳಲು ಕಷ್ಟವಾಗಲಾರದು. ಹೌದು, ಕೆಲವು ಅಪವಾದಗಳು ಸಹ ಇವೆ. ಆದರೆ ಅಪವಾದಗಳಿಂದ ನಿಯಮ ರೂಪಿತವಾಗಲಾರದು. ಎರಡು ಕಾಲಾವಸ್ಥೆಗಳು ಬೇರೆ ಬೇರೆಯೇ ಆಗಿವೆ. ♦

**(ಭಾಷಾಂತರ : ಎಮ್. ಉಬೈದುಲ್ಲಾ)**

# LOVE FOR ALL
# HATRED FOR NONE
# LET'S MAKE IT HEAVEN

# ನೀನು ಮಾಡು – ಮಾಡಬೇಡ

♦ಹಝ್ರತ್ ಡಾ॥ ಮೀರ್ ಮುಹಮ್ಮದ್ ಇಸ್ಮಾಈಲ್ ಸಾಹಿಬ್(ರ)

## 8 – ಧರ್ಮಕ್ಕೆ ಸಂಬಂಧಿಸಿದ ವಿಷಯಗಳು

318. ನೀನು ದಜ್ಜಾಲನ ಮತ್ತು ಪಾಶ್ಚಿಮಾತ್ಯದ ಆಚಾರ ವಿಚಾರಗಳನ್ನು ನಿನ್ನ ಮನೆಯೊಳಗೆ ಪ್ರವೇಶಿಸದ ಹಾಗೆ ಜಾಗರೂಕನಾಗಿರು.

319. ಸತ್ಯ ಹೇಳುವವರಿಗೆ ಸತ್ಯವಾದ ಕನಸು ಮತ್ತು ದರ್ಶನದ ಭಾಗ್ಯ ಸಿಗುತ್ತದೆ ಎಂದು ನೆನಪಿಡು.

320. ಲೋಕದಲ್ಲಿಯೇ ನಿನ್ನದೇ ಆದ ಒಂದು ಆಶೆ ಈಡೇರಿದರೆ ನೀನು ಪ್ರಾಯಶಃ ಅಲ್ಲಾಹನಿಗೆ ವಿದ್ರೋಹಿಯಾಗಲೂಬಹುದು.

321. ನೀನು ಸ್ವತಃ ಪವಿತ್ರ ಖುರ್‌ಆನ್ ವ್ಯಾಖ್ಯಾನ ಮಾಡಬೇಡ.

322. ನೀನು ಅಲ್ಲಾಹನ ಸಾಮೀಪ್ಯ ಬಯಸುವಿಯಾದರೆ ನಫಲ್ ನಮಾಝ್ ಹೆಚ್ಚು ಅನುಷ್ಠಿಸು.

323. ನೀನು ಯಾವಾಗಲೂ ವುಝು ಮಾಡಿದ ಸ್ಥಿತಿಯಲ್ಲಿರು.

324. ತಹಜ್ಜುದ್ ನಂತರ ಇರುವ ಶ್ರೇಷ್ಠ ನಫ್ಲ್ ಸೂರ್ಯೋದಯದ ನಂತರದ ನಾಲ್ಕು ನಫಲ್ ಆಗಿದೆ.

325. ನೀನು ನೆನಪಿಡು – ಅಲ್ಲಾಹನ ಮಾರ್ಗದಲ್ಲಿ ಸಂಪತ್ತು ಖರ್ಚು ಮಾಡುವ ಬಗ್ಗೆ ಜಿಪುಣತನ ಮತ್ತು ಜೀವದ ಬಗ್ಗೆ ಭಯ ಬಹುದೇವಾರಾಧನೆ (ಶಿರ್ಕ್)ಯ ಬೇರಾಗಿದೆ.

326. ನೀನು ಅಲ್ಲಾಹನನ್ನು ನೋಡುತ್ತಿರುವ ಹಾಗೆ ನಮಾಝ್ ಮಾಡು. ಇದು ಸಾಧ್ಯವಿಲ್ಲವಾದರೆ ಅಲ್ಲಾಹನು ನಿನ್ನನ್ನು ನೋಡುತ್ತಾನೆ ಎಂದು ಭಾವಿಸಿ ನಮಾಝ್ ಅನುಷ್ಠಿಸು.

327. ನಿನಗೆ ಎಷ್ಟು ಉಪಕಾರ ಮಾಡಿದವನಾದರೂ ನೀನು ಅವನ ದಾಕ್ಷಿಣ್ಯಕ್ಕೆ ಒಳಪಟ್ಟು ಅಲ್ಲಾಹನ ಆಜ್ಞೆಗೆ ವಿರುದ್ಧವಾಗಿ ವರ್ತಿಸಬೇಡ.

328. ಸಾಧ್ಯವಿದ್ದರೆ ನೀನು ಖಾದಿಯಾನಿನಲ್ಲಿ ಮನೆ ನಿರ್ಮಿಸು. ಏಕೆಂದರೆ, ವಸ್ಸಿಅ್ ಮಕಾನಕ (ನಿನ್ನ ಮನೆ ವಿಸ್ತಾರಗೊಳಿಸು) ಎಂಬ ಅಲ್ಲಾಹನ ಆಜ್ಞೆ ಈಡೇರಿಸಿದಂತಾಗುವುದು ಮತ್ತು ನಿನ್ನ ಮಕ್ಕಳಿಗೆ ಅಹ್ಮದಿಯಾ ಕೇಂದ್ರದೊಂದಿಗೆ ಸಂಬಂಧ ಬಲಗೊಳ್ಳುವುದು.

329. ಧರ್ಮದ ಕಾರ್ಯದಲ್ಲಿ ಬಲಾತ್ಕಾರವಿಲ್ಲ; ಅದು ನಿಷಿದ್ಧ ಎಂದು ತಿಳಿದುಕೊಳ್ಳು.

330. ನಿನಗೆ ಅಲ್ಲಾಹನಿಂದ ಸಂದೇಶವಾಣಿ ಲಭಿಸಿದರೆ ಅಥವಾ ಯಾವುದಾದರೂ ಸೂಕ್ಷ್ಮ ಅಂಶ ತಿಳಿದರೆ ಅದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅನುಯಾಯಿ ನೀನು ಆಗಿರುವ ಅನುಗ್ರಹದಿಂದ ಎಂದು ತಿಳಿದುಕೊಳ್ಳು.

331. ನೀನು ಪವಿತ್ರ ಖುರ್‌ಆನಿನ ವಚನಗಳನ್ನು ಮಂತ್ರದ ಹಾಗೆ ಬಳಸಬೇಡ.

332. ನೀನು ಧರ್ಮಬದ್ಧವಾದ ಯಾವುದೇ ಕೆಲಸ ಮಾಡುವುದಿಲ್ಲ ಎಂದು ಪ್ರಮಾಣ ಮಾಡಬೇಡ. ಹಾಗೆ ಪ್ರಮಾಣ ಮಾಡಿದ್ದರೆ ಅದನ್ನು ಮುರಿದು ಪ್ರಾಯಶ್ಚಿತ್ತ ಕೊಡು.

333. ನೀನು ನಮಾಝನ್ನು ನಮಾಝ್ ಮಾಡುವ ಪ್ರಥಮ ಸಮಯದಲ್ಲಿ ಅನುಷ್ಠಿಸು. ಹಾಗೆ ಮಾಡದಿದ್ದರೆ ಹೃತ್ಪೂರ್ವಕ ವಾಗಿ ನಮಾಝ್ ಮಾಡಲು ಸಾಧ್ಯವಾಗದು.

334. ನೀನು ಖಾದಿಯಾನಿನ ವಾರ್ಷಿಕ ಸಮ್ಮೇಳನದಲ್ಲಿ ಹಾಜರಾಗಲು ಪ್ರಯತ್ನಿಸು.

335. ನೀನು ಸಭೆಯಲ್ಲಿ ಪ್ರಾರ್ಥಿಸುವಾಗ ಎರಡು ಕೈಗಳೆತ್ತಿ ಪ್ರಾರ್ಥಿಸು. ಅದು ವಿನಮ್ರತೆಯ ರೀತಿಯಾಗಿದೆ.

336. ಖಿಬ್ಲದ ದಿಕ್ಕಿಗೆ ಕಾಲು ಹಾಕಿ ಮಲಗಬೇಡ.

337. ಹಿರಿಯರ ಪ್ರೀತಿ ನಿನಗೆ ಶುಭ ಪ್ರಾರ್ಥನೆ ಆಗಿದೆ. ಹಿರಿಯರ ಸಿಟ್ಟು ನಿನಗೆ ಅಶುಭ ಪ್ರಾರ್ಥನೆಯಾಗಿದೆ.

338. ನೀನು ಎಲ್ಲಿದ್ದರೂ ಅಲ್ಲಿಯ ಸ್ಥಳೀಯ ಅಹ್ಮದಿಯಾ ಜಮಾಅತಿನೊಂದಿಗೆ ಸಂಬಂಧ ಸ್ಥಾಪಿಸು. ಅಲ್ಲಿನ ಅಮೀರ ರನ್ನು ಅನುಸರಿಸು.

339. ನಿನಗೆ ಯಾವುದೇ ಅಹ್ಮದಿ ಬಗ್ಗೆ ಸಿಟ್ಟಿದ್ದರೆ ನೀನು ಆ ಅಹ್ಮದಿಗೋಸ್ಕರ ಸಿಟ್ಟು ದೂರ ಸರಿಯುವ ತನಕ ಪ್ರಾರ್ಥಿಸು.

340. ನೀನು ನಿನ್ನ ಸೃಷ್ಟಿಕರ್ತನಾದ ಅಲ್ಲಾಹನನ್ನು ನಿನ್ನ ಸಂಪೂರ್ಣ ಹೃದಯ, ಸಂಪೂರ್ಣ ಜೀವ ಮತ್ತು ಸಂಪೂರ್ಣ ಬುದ್ಧಿ ಯೊಂದಿಗೆ ಪ್ರೀತಿಸು.

341. ನಿನ್ನ ಹೃದಯದಲ್ಲಿ ಒಳ್ಳೆಯ ಕೆಲಸ ಮಾಡುವ ಯೋಚನೆ ಉಂಟಾದರೆ ಕೂಡಲೆ ಹಾಗೆ ಮಾಡು. ಇದು ದೇವದೂತರ ಪ್ರೇರಣೆಯಾಗಿದೆ.

342. ನೀನು ನಿನ್ನ ಹೃದಯ ಮತ್ತು ನಾಲಗೆಯನ್ನು ಅಲ್ಲಾಹನ ಸ್ಮರಣೆಯಿಂದ ಒದ್ದೆಯಾಗಿರಿಸು. ಬಹಳ ಹೆಚ್ಚು ಹೆಚ್ಚಾಗಿ ಒದ್ದೆಯಾಗಿರಿಸು.

343. ನೀನು ವಿವಾಹವಾಗಲು ಎಲ್ಲ ಸದ್ಗುಣಗಳುಳ್ಳವಳನ್ನು ಹುಡುಕು; ಆದರೆ ಧಾರ್ಮಿಕತೆಗೆ ಆದ್ಯತೆ ನೀಡು.

344. ನಿನ್ನನ್ನು ಸ್ವತಂತ್ರನಾಗಿ ಸೃಷ್ಟಿಸಲಾಗಿದೆ. ನೀನು ಅಲ್ಲಾಹನ

ಹೊರತು ಬೇರೆ ಯಾರ ಗುಲಾಮನೂ ಆಗಬೇಡ.

345. ನಿನ್ನ ಸುಖದ ಕಾರಣ ಏಕದೇವನ ಬಗ್ಗೆ ಸತ್ಯವಿಶ್ವಾಸ ಮತ್ತು ಅವನೊಂದಿಗೆ ಪ್ರೀತಿ ಸಂಬಂಧವಾಗಿದೆ.

346. ನೀನು ಒಂದು ಕುರಿ ಹಿಂಡಿನ ಕುರುಬನಾಗಿರುವೆ. ನಿನ್ನನ್ನು ನಿನ್ನ ಬಗ್ಗೆ ಮತ್ತು ನೀನು ಮೇಲ್ವಿಚಾರಕನಾದ ಕುರಿ ಹಿಂಡಿನ ಬಗ್ಗೆ ಪ್ರಶ್ನಿಸಲಾಗುವುದು.

347. ನೀನು ಪ್ರತಿಯೊಂದು ಮುಖ್ಯ ಕೆಲಸದ ಮೊದಲು ಇಸ್ತಿಖಾರ ಪ್ರಾರ್ಥನೆ ಮಾಡು.

348. ನೀನು ಇಸ್ತಿಖಾರ ಪ್ರಾರ್ಥನೆ ಮಾಡಿದಾಗ ನಿನಗೆ ಯಾವುದಾದರೂ ಸೂಚನೆ ಅಲ್ಲಾಹನಿಂದ ಲಭಿಸಿದರೆ ನೀನು ಆ ಸೂಚನೆ ಪ್ರಕಾರ ವರ್ತಿಸುವುದು ಕಡ್ಡಾಯವಾಗಿದೆ. ಹೀಗೆ ಮಾಡದಿದ್ದರೆ ಮುಂದೆ ನಿನ್ನ ಇಸ್ತಿಖಾರ ಪ್ರಾರ್ಥನೆ ಸ್ವೀಕರಿಸಲ್ಪಡಲಾರದು.

349. ನೀನು ಹಿರಿಯರೊಂದಿಗೆ ಮತ್ತು ಸಂಬಂಧಿಕರೊಂದಿಗೆ ನಿನಗೋಸ್ಕರ ಪ್ರಾರ್ಥಿಸಲು ಹೇಳು.

350. ನೀನು ತಾರುಣ್ಯ ಕಾಲದಲ್ಲೇ ವಸಿಯ್ಯತ್ ಪದ್ಧತಿಯಲ್ಲಿ ಪ್ರವೇಶಿಸು. ನೀನು ಒಳಿತಿನಲ್ಲಿ ಚೆನ್ನಾಗಿ ಬಂಧಿಸಲ್ಪಡಲು ಇದು ಸಹಕಾರಿಯಾಗುತ್ತದೆ.

351. ಅಲ್ಲಾಹನ ಸ್ಮರಣೆಗಿಂತ ಮಹತ್ವಪೂರ್ಣವಾದುದು ಬೇರೆ ಯಾವುದೂ ಇಲ್ಲವೆಂದು ನೀನು ತಿಳಿದುಕೋ.

352. ತಖ್ವಾ (ಭಯಭಕ್ತಿ) ಎಲ್ಲ ಒಳಿತುಗಳ ಬೇರಾಗಿದೆ. ತಖ್ವಾ ಎಂದರೆ ಅಲ್ಲಾಹನಿಗೆ ಭಯಪಡುವುದು ಮತ್ತು ಅವನ ಕೋಪದ ಬಗ್ಗೆ ಹೆದರುತ್ತಾ ಇರುವುದಾಗಿದೆ.

353. ನೀನು ಇಮಾಮ್ ಬಗ್ಗೆ ವೈಯಕ್ತಿಕವಾಗಿ ಸಿಟ್ಟಾದ ಕಾರಣ ಸಾಮೂಹಿಕ ನಮಾಝ್ ಬಿಟ್ಟುಬಿಡಬೇಡ.

354. ನೀನು ಬಡವರ ಮತ್ತು ನಿರ್ಗತಿಕರ ಪ್ರಾರ್ಥನೆ ಗಳಿಸಲು ಪ್ರಯತ್ನಿಸು.

355. ನೀನು ನಿನ್ನನ್ನು ಪರಿಶುದ್ಧನೆಂದು ಗಣಿಸದಿರು. ಏಕೆಂದರೆ, ನಿನ್ನ ಬಗ್ಗೆ ವಾಸ್ತವಿಕ ಅರಿವು ಅಲ್ಲಾಹನಿಗೆ ಮಾತ್ರವಿದೆ.

356. ನೀನು ನಮಾಝ್‌ಗೆ ಇಮಾಮನಾದರೆ ನಿನ್ನ ಹಿಂದೆ ಪ್ರಾರ್ಥಿಸುವವರ ಬಗ್ಗೆ ಗಮನವಿರಿಸು. ಮಧ್ಯಮ ರೀತಿಯಲ್ಲಿ ನಮಾಝ್ ಅನುಷ್ಠಿಸು.

357. ನೀನು ಏಳು ವರ್ಷ ಪ್ರಾಯದ ಮಕ್ಕಳಿಗೆ ನಮಾಝ್ ಕಲಿಸಲು ಪ್ರಾರಂಭಿಸು. ಅವರು ಹತ್ತು ವರ್ಷದವರಾಗುವಾಗ ಅವರನ್ನು ವಿಚಾರಿಸುತ್ತಾ ಇರು.

358. ನೆನಪಿಡು – ಮನುಷ್ಯನ ಸೃಷ್ಟಿಯ ಯಥಾರ್ಥ ಉದ್ದೇಶ ಅಲ್ಲಾಹನ ಅರಾಧನೆ ಮತ್ತು ಅನುಸರಣೆಯಾಗಿದೆ. ನೀನು ಸಹ ಅವನ ದಾಸನಾಗಿ ಇಹಲೋಕದಲ್ಲಿ ಜೀವಿಸು.

359. ಅಲ್ಲಾಹನ ಮತ್ತು ಅವನ ದಾಸನ ಮಧ್ಯೆ ಸಂಬಂಧ ಪ್ರಾರ್ಥನೆ ಮೂಲಕ ಸ್ಥಾಪಿಸಲ್ಪಡುತ್ತದೆ ಎಂದು ನೆನಪಿಡು.

360. ನೀನು ಖಾದಿಯಾನಿಗೆ ಆಗಮಿಸಿದರೆ ನಿನಗೆ ಸಾಧ್ಯವಿರುವಷ್ಟು ನಮಾಝ್ ಮಸ್‌ಜಿದ್ ಮುಬಾರಕ್‌ನಲ್ಲಿ ಅನುಷ್ಠಿಸು.

361. ನೀನು ಎಂದಿಗೂ ಅಲ್ಲಾಹನನ್ನು ಪರೀಕ್ಷಿಸಬೇಡ.

362. ಅಲ್ಲಾಹನು ಪ್ರಾರ್ಥನೆಗಳನ್ನು ಸ್ವೀಕರಿಸುವ ವಿಶಿಷ್ಟ ಸಮಯಗಳ ಬಗ್ಗೆ ಪವಿತ್ರ ಖುರ್‌ಆನ್ ಮತ್ತು ಹದೀಸುಗಳಲ್ಲಿ ಪ್ರಸ್ತಾಪಿಸಲಾಗಿದೆ. ನೀನು ಆ ಸಮಯಗಳ ಉಪಯೋಗ ಪಡೆದುಕೊಳ್ಳು.

363. ನೀನು ಸದಾ ಅಲ್ಲಾಹನಿಗೆ ನಿಜವಾಗಿ ಪ್ರಿಯರಾದ ಸ್ನೇಹಿತರನ್ನು ಹುಡುಕು.

364. ಸುಬ್‌ಹ್ ನಮಾಝ್ ನಂತರ ಪವಿತ್ರ ಖುರ್‌ಆನಿನ ಒಂದು ನಿಶ್ಚಿತ ಭಾಗವನ್ನು ಆವಶ್ಯಕವಾಗಿ ಓದು. ನೀನು ಕ್ರಮಬದ್ಧವಾಗಿ, ಅರ್ಥ ಸಹಿತ, ವುಝುಮಾಡಿಕೊಂಡು ಪಾರಾಯಣ ರೀತಿ ಪ್ರಕಾರ ಓದು. "ಈ ಗ್ರಂಥವನ್ನು ಮಾರ್ಗದರ್ಶನ ಪಡೆಯಲು ಮತ್ತು ಆಜ್ಞೆಗಳನ್ನು ಅನುಷ್ಠಿಸಲು ಸಂಕಲ್ಪ ಮಾಡಿಕೊಂಡು ಓದುತ್ತೇನೆ" ಎಂದು ನಿರ್ಧರಿಸು.

365. ನೀನು ನಮಾಝ್‌ನಲ್ಲಿ ನಿನ್ನ ಭಾಷೆಯಲ್ಲೂ ಪ್ರಾರ್ಥಿಸು. ಇದು ಪ್ರಾರ್ಥನೆ ಸ್ವೀಕರಿಸಲ್ಪಡಲು ಸಹಾಯಕವಾಗಿದೆ.

366. ನೀನು ಹದೀಸುಗಳನ್ನು ಆವಶ್ಯಕವಾಗಿ ಓದು.

367. ನೀನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಸಾಧ್ಯವಿರುವಷ್ಟು ಓದಬೇಕು.

368. ನೀನು ನಿನ್ನ ಮಕ್ಕಳಿಗೆ ದುರ್‌ರೆಸಮೀನ್‌ನಿಂದ ಪದ್ಯಗಳನ್ನು ಬಾಯಿಪಾಠ ಮಾಡಿಸು.

369. ಧರ್ಮದ ಕೆಲವು ಭಾಗಗಳು ಬುದ್ಧಿಗೆ ಅನುಯೋಜ್ಯವಾಗಿವೆ. ಕೆಲವು ಭಾಗಗಳು ಬುದ್ಧಿಗೆ ವಿರುದ್ಧವಾಗಿಲ್ಲವಾದರೂ ಬುದ್ಧಿಗೆ ನಿಲುಕದುದು ಆಗಿವೆ. ಪ್ರತಿಯೊಂದು ವಿಷಯದಲ್ಲಿ ಹಸ್ತಕ್ಷೇಪ ಮಾಡುವುದು ಸರಿಯಲ್ಲ.

370. ಧಾರ್ಮಿಕ ವಾಗ್ವಾದಗಳನ್ನು ಜಗಳಕ್ಕೆ ದಾರಿಯನ್ನಾಗಿ ಮಾಡಬಾರದು. ಸತ್ಯವನ್ನು ತಿಳಿಯುವ ಉದ್ದೇಶದಿಂದ ಸಮಾಧಾನಚಿತ್ತರಾಗಿ ಧಾರ್ಮಿಕ ವಿಷಯಗಳ ಬಗ್ಗೆ ಚರ್ಚೆ ನಡೆಸಬೇಕು.

371. ಕಷ್ಟಕಾಲದಲ್ಲಿ ಅಲ್ಲಾಹನ ನೆನಪು ಎಲ್ಲರಿಗೂ ಆಗುತ್ತದೆ. ಆದರೆ ಸುಖದ ಕಾಲದಲ್ಲಿ ಅಲ್ಲಾಹನನ್ನು ನೆನಪಿಸುವುದು ಬಹಳ ಮಹತ್ವಪೂರ್ಣವಾಗಿದೆ.

372. ಲೌಕಿಕ ಕೆಲಸಗಳನ್ನು ಮಾಡುವುದು ಸಹ ಆರಾಧನೆಯಾಗಿದೆ – ಉದ್ದೇಶ ದೇವ ಸಂಪ್ರೀತಿಯಾಗಿರಬೇಕು.

373. ಅಲ್ಲಾಹನ ಭಯ (ತಖ್ವಾ) ಬುದ್ಧಿಯ ಆರಂಭವಾಗಿದೆ. ಅಲ್ಲಾಹನ ಸಂಪ್ರೀತಿಗೋಸ್ಕರ ಬಲಿಯಾಗುವುದು ಅದರ ಉನ್ನತಮಟ್ಟವಾಗಿದೆ.

374. ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಹೇಳಿದ್ದಾರೆ: ಧಾರ್ಮಿಕ ಸೇವೆಗೋಸ್ಕರ ಅರ್ಪಿತವಾದ ಜೀವಿತ ಮುಸ್ಲಿಮನಿಗೆ ಅತ್ಯಂತ ಉತ್ತಮವಾದ ಜೀವಿತವಾಗಿದೆ.

## 9 – ಲೈಂಗಿಕ ವಿಷಯಗಳು

1. ನೀನು ನಿನ್ನ ಕಂಕುಳು ಮತ್ತು ನಾಭಿಯ ಕೆಳಗಿನ ಭಾಗದ ಕೂದಲನ್ನು ಬೆಳೆಯದಂತೆ ತಡೆಯಬೇಕು.

2. ಲೈಂಗಿಕ ಸಂಪರ್ಕದ ನಂತರ, ಋತುಸ್ರಾವದ ಕಾಲದಲ್ಲಿ ಮತ್ತು ಬಾಣಂತಿಯಾದಾಗ ಸ್ನಾನ ಮಾಡುವುದು ಆವಶ್ಯಕವಾಗಿದೆ.

3. ಹೇ ಮಹಿಳೆ, ನೀನು ಗರ್ಭಪಾತ ಮಾಡಿಸಬೇಡ – ನಿನ್ನ ಜೀವಕ್ಕೆ ಅಪಾಯವಿದ್ದರೆ ಹೊರತು.

4. ಹೇ ಮಹಿಳೆ, ಋತುಸ್ರಾವದ ಕಾಲದಲ್ಲಿ ತಣ್ಣೀರಿಗೆ ಕೈ ಹಾಕಬೇಡ; ತೇವಭರಿತ ನೆಲದಲ್ಲಿ ಕುಳಿತುಕೊಳ್ಳಬೇಡ.

5. ಹೇ ಪುರುಷ, ನಿನ್ನ ಪತ್ನಿಯ ಋತು ಸ್ರಾವದ ಕಾಲದಲ್ಲಿ ಮತ್ತು ಆಕೆ ಹೆತ್ತು ಮಲಗಿರುವಾಗ ನಿನ್ನ ಪತ್ನಿಯನ್ನು ಸಮೀಪಿಸಬೇಡ.

6. ನೀನು ನಿನ್ನ ಲೈಂಗಿಕ ಶಕ್ತಿಯನ್ನು ಮಿತಿಮೀರಿ ಬಳಸಬೇಡ. ನಿನ್ನ ಶಕ್ತಿ ಕುಂದಿ ಹೋಗದಂತೆ ನೋಡಿಕೊಳ್ಳು.

7. ನೀನು ಕೇವಲ ಕಾಮ ತೃಪ್ತಿಗೋಸ್ಕರ ವಿವಾಹವಾಗಬೇಡ.

8. ನೀನು ನಿನ್ನ ಲೈಂಗಿಕ ಅವಯವಗಳನ್ನು ದುರುಪಯೋಗ ಪಡಿಸಬೇಡ. ನೀನು ದುರುಪಯೋಗಪಡಿಸಿದರೆ ಅವು ಶಕ್ತಿಹೀನವಾಗುವುವು.

9. ನೀನು ಪಾಶ್ಚಿಮಾತ್ಯರ ಹಾಗೆ ಅನ್ಯ ಸ್ತ್ರೀಯರನ್ನು ಚುಂಬಿಸಬೇಡ.

10. ಹೇ ಪುರುಷ, ನೀನು ನಿನ್ನ ಪತ್ನಿಯ ಸಮ್ಮತಿ ಪಡೆಯದೆ ಸಂತಾನ ನಿರೋಧ ಮಾಡಬೇಡ. ಅದು ಸಹ ನಿಜವಾಗಿ ಆವಶ್ಯಕವಾಗಿರುವಾಗ ಮಾತ್ರ.

11. ನೀನು ಯೋಚನೆಯಲ್ಲಿ ವ್ಯಭಿಚಾರ ಮೊದಲಾದ ಕೆಟ್ಟ ಕೆಲಸ ಸಹ ಮಾಡಬೇಡ. ನಿನ್ನ ಚಾರಿತ್ರ್ಯ ಹಾಳಾಗುವುದು.

12. ನೀನು ಅನುಮತಿಸಲಾದ ರೀತಿಯಲ್ಲಿ ಲೈಂಗಿಕ ತೃಪ್ತಿ ಪಡೆ.

13. ನೀನು ನಿನ್ನ ಲೈಂಗಿಕ ಅವಯವಗಳನ್ನು ರಕ್ಷಿಸು.

14. ರೋಗ ಮತ್ತು ಬಡತನದ ಸ್ಥಿತಿಯಲ್ಲಿ ಹೊರತು ಸಾಮಾನ್ಯವಾಗಿ ಅವಿವಾಹಿತ ಯುವಕರ ಬಲಹೀನತೆಯ ಕಾರಣವು ವೀರ್ಯ ನಷ್ಟಗೊಳಿಸುವ ಸ್ವಭಾವವಾಗಿದೆ.

*  *  *  *  *

# LOVE FOR HONESTY AND HATRED FOR DISHONESTY

# ಪ್ರಾಮಾಣಿಕತೆಯೊಂದಿಗೆ ಪ್ರೀತಿ ಮತ್ತು ಅಪ್ರಾಮಾಣಿಕತೆಯೊಂದಿಗೆ ದ್ವೇಷ

# ನೋಬೆಲ್ ಪ್ರಶಸ್ತಿ ವಿಜೇತರಾದ ಪಾಕಿಸ್ಥಾನಿ ವಿಜ್ಞಾನಿ ತನ್ನ ಗುರುವಾಗಿದ್ದ ಭಾರತೀಯ ಅಧ್ಯಾಪಕನನ್ನು ಗೌರವಿಸಲು ಆಗಮಿಸಿದಾಗ

*** ಲೇಖಕಿ: ಆಶಾ ಖೋಸಾ**



Dr. Abdus Salam, with his teacher Prof. Anilender Ganguly

ಕೊಲ್ಕತ್ತಾದ ಒಂದು ಮನೆಯಲ್ಲಿ ಕಂಡ ದೃಶ್ಯ ಹೀಗೆ: ಒಂದು ವಿಶಾಲವಾದ ಕೋಣೆಯಲ್ಲಿ ಒಬ್ಬ ಬಲಹೀನ ಮನುಷ್ಯನು ಮರದ ಮಂಚದಲ್ಲಿ ಮಲಗಿದ್ದರು. ಮಂಚದ ತಲೆಭಾಗದಲ್ಲಿ ಒಬ್ಬ ಸಂದರ್ಶಕ ಒಂದು ಕುರ್ಚಿಯಲ್ಲಿ ಕುಳಿತಿದ್ದರು. ಅವರ ವರ್ತನೆ ಆದರ ಭರಿತವಾಗಿತ್ತು. ಮನೆ ಜನನಿಬಿಡವಾಗಿತ್ತು. ಎಲ್ಲ ಕಣ್ಣುಗಳು ಮಂಚದಲ್ಲಿ ಮಲಗಿದ್ದವರನ್ನೂ ಕುರ್ಚಿಯಲ್ಲಿ ಕುಳಿತಿದ್ದವರನ್ನೂ ದಿಟ್ಟಿಸಿ ನೋಡುತ್ತಿದ್ದುವು. ಸಂದರ್ಶಕ ವ್ಯಕ್ತಿ ಹೇಳಿದರು: "ಸರ್ ಗಣಿತಶಾಸ್ತ್ರದ ಬಗ್ಗೆ ಅಧ್ಯಯನ ಮಾಡುವ ಆಸಕ್ತಿಯನ್ನು ನನ್ನಲ್ಲಿ ನೀವು ಹುಟ್ಟಿಸಿದ ಕಾರಣದಿಂದ ಈ ನೋಬೆಲ್ ಪ್ರಶಸ್ತಿ ನನಗೆ ದೊರೆತಿದೆ." ಅವರು ನೋಬೆಲ್ ಪ್ರೈಝ್ ಮೆಡಲನ್ನು ಮಂಚದ ಮೇಲೆ ಮಲಗಿದ್ದವರ ಕೊರಳಿಗೆ ತೊಡಿಸಿದರು. ಅವರು ಹೇಳಿದರು: 'ಇದು ನಿಮ್ಮ ನೋಬೆಲ್ ಪ್ರೈಝ್ ಆಗಿದೆ, ನನ್ನದಲ್ಲ.'

ಮೇಲೆ ಸೂಚಿಸಿದ ನೋಬೆಲ್ ಪ್ರೈಝ್ ವಿಜೇತ ಪಾಕಿಸ್ಥಾನಿ ವಿಜ್ಞಾನಿಯಾಗಿದ್ದ ಡಾಕ್ಟರ್ ಅಬ್ದುಸ್ಸಲಾಮ್ ಅಗಿದ್ದರು. ಅವರನ್ನು ಧಾರ್ಮಿಕ ಕಾರಣದಿಂದ ಪಾಕಿಸ್ಥಾನದಿಂದ ಹೊರಹಾಕಲಾಗಿತ್ತು. ಮಂಚದಲ್ಲಿ ಮಲಗಿದ್ದ ಪ್ರೊಫೆಸರ್ ಅನಿಲೇಂದರ್ ಗಂಗೂಲಿ ಆ ವಿಜ್ಞಾನಿಯ ಅಧ್ಯಾಪಕರಾಗಿದ್ದರು.

ನೆನಪಿಸಿಕೊಳ್ಳಬೇಕಾದುದೇನೆಂದರೆ, 1979ರಲ್ಲಿ ನೋಬೆಲ್ ಪ್ರೈಝ್ ವಿಜೇತರಾದ ನಂತರ ಡಾಕ್ಟರ್ ಅಬ್ದುಸ್ಸಲಾಮ್ ಭಾರತದ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರೊಂದಿಗೆ, ತನಗೆ ವಿಭಜನೆಗೆ ಮೊದಲು ಲಾಹೋರಿನ ಸನಾತನ ಧರ್ಮ ಕಾಲೇಜಿನಲ್ಲಿ ಗಣಿತಶಾಸ್ತ್ರ ಕಲಿಸಿದ ಪ್ರೊಫೆಸರ್ ಅನಿಲೇಂದರ್ ಗಂಗೂಲಿಯವರು ಎಲ್ಲಿದ್ದಾರೆಂದು ಅನ್ವೇಷಿಸಲು ಅಪೇಕ್ಷಿಸಿದ್ದರು.

ತನ್ನ ಅಧ್ಯಾಪಕರನ್ನು ಭೇಟಿಯಾಗಲು ಡಾಕ್ಟರ್ ಅಬ್ದುಸ್ಸಲಾಮರಿಗೆ ಎರಡು ವರ್ಷಗಳ ಕಾಲ ಕಾಯಬೇಕಾಯಿತು. 1981 ಜನವರಿ 19ರಂದು ಅವರು ಭಾರತಕ್ಕೆ ಆಗಮಿಸಿ, ಆಗ ಕೊಲ್ಕತ್ತಾದಲ್ಲಿ ವಾಸಿಸುತ್ತಿದ್ದ ಪ್ರೊಫೆಸರ್ ಗಂಗೂಲಿಯವರಿಗೆ ತನ್ನ ಗೌರವಗಳನ್ನು ಅರ್ಪಿಸಿದರು. ಡಾಕ್ಟರ್ ಸಲಾಮ್ ಆಗಮಿಸಿದಾಗ ಪ್ರೊಫೆಸರ್ ಗಂಗೂಲಿ ಬಲಗುಂದಿದವರಾಗಿದ್ದು ಅವರಿಗೆ ಮಲಗಿದ್ದಲ್ಲಿಂದ ಎದ್ದು ಕುಳಿತು ತನ್ನ ವಿದ್ಯಾರ್ಥಿಯನ್ನು ಅಭಿನಂದಿಸಲು ಕೂಡ ಸಾಧ್ಯವಿರಲಿಲ್ಲ.

ಡಾಕ್ಟರ್ ಅಬ್ದುಸ್ಸಲಾಮ್ ಮೇಲೆ ವಿವರಿಸಿದಂತೆ ಮಾಡಿ ತನ್ನ ಅಧ್ಯಾಪಕರಿಗೆ ಗೌರವ ಸಲ್ಲಿಸಿದರು.

1974ರಲ್ಲಿ ಪಾಕಿಸ್ಥಾನದ ಪಾರ್ಲಿಮೆಂಟ್ ಅಹ್ಮದಿ ಮುಸ್ಲಿಮರನ್ನು ಅಮುಸ್ಲಿಮರೆಂದು ಘೋಷಿಸಿ ನಿಯಮವನ್ನು ಜಾರಿಗೆ ತಂದಾಗ ಡಾಕ್ಟರ್ ಸಲಾಮ್ ಪಾಕಿಸ್ಥಾನವನ್ನು ಬಿಟ್ಟು ಹೋಗಿದ್ದರು. 1979ರಲ್ಲಿ ಅವರಿಗೆ ಫಿಝಿಕ್ಸ್‌ನಲ್ಲಿ ನೋಬೆಲ್ ಪ್ರೈಝ್ ಲಭಿಸಿತು. ನೋಬೆಲ್ ಪ್ರೈಝ್ ಗಳಿಸಿದ ಪ್ರಪ್ರಥಮ ಪಾಕಿಸ್ಥಾನಿ ಅವರಾಗಿದ್ದರು. ಡಾಕ್ಟರ್ ಅಬ್ದುಸ್ಸಲಾಮ್ 1996 ನವೆಂಬರ್ 21ರಂದು ಬ್ರಿಟನಿನ ಆಕ್ಸ್‌ಫರ್ಡ್ ನಗರದಲ್ಲಿ ದಿವಂಗತರಾದರು.

ಆಶ್ಚರ್ಯಕರವಾದುದೇನೆಂದರೆ, ಪಾಕಿಸ್ಥಾನದ ಪ್ರಥಮ ನೋಬೆಲ್ ಪ್ರೈಝ್ ವಿಜೇತ ಮುಸ್ಲಿಮೇತರನಾದ ತನ್ನ ಅಧ್ಯಾಪಕರಿಗೆ ಗೌರವ ಸಲ್ಲಿಸಿದರು. ಆದರೆ ಅವರಿಗೆ ಪಾಕಿಸ್ಥಾನದಲ್ಲಿ ಯಾವುದೇ ಅರ್ಹವಾದ ಗೌರವ ದೊರಕಲಿಲ್ಲ. ಅದು ಸಹ ಅವರ ಧಾರ್ಮಿಕ ವಿಶ್ವಾಸದ ಕಾರಣದಿಂದಾಗಿತ್ತು. ಅವರು ಅಹ್ಮದಿಯಾ ಜಮಾಅತಿಗೆ ಸೇರಿದವರಾಗಿದ್ದರು. ಅಹ್ಮದಿ ಮುಸ್ಲಿಮರನ್ನು ಪಾಕಿಸ್ಥಾನದಲ್ಲಿ ಅಮುಸ್ಲಿಮರೆಂದು ಆರೋಪಿಸಲಾಗುತ್ತಿದೆ.

ಡಾಕ್ಟರ್ ಅಬ್ದುಸ್ಸಲಾಮ್ 1926 ಜನವರಿ 9ರಂದು, ಈಗ ಪಾಕಿಸ್ಥಾನದ ಪಂಜಾಬ್ ಪ್ರಾಂತ್ಯದಲ್ಲಿರುವ ಜಂಗ್ ಪಟ್ಟಣದ ಸಮೀಪದ ಒಂದು ಗ್ರಾಮದಲ್ಲಿ ಜನಿಸಿದರು. ಅವರು ಮಧ್ಯಮವರ್ಗದ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರು ಪ್ರಾಥಮಿಕ ಶಿಕ್ಷಣವನ್ನು ಉರ್ದು ಮಾಧ್ಯಮದ ಶಾಲೆಯಲ್ಲಿ ಗಳಿಸಿದರು. ಮೆಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ಅವರಿಗೆ ಗಣಿತ ಶಾಸ್ತ್ರದಲ್ಲಿ ಅತ್ಯಧಿಕ ಮಾರ್ಕ್ ಲಭಿಸಿತ್ತು. ಅವರು ತನ್ನ ಪ್ರಥಮ ಸಂಶೋಧನಾತ್ಮಕ ಲೇಖನವನ್ನು ತನ್ನ 17ನೇ ವಯಸ್ಸಿನಲ್ಲಿ ಪ್ರಕಟಿಸಿದರು. ಆದರೆ ಈ ವಿದ್ಯಾರ್ಥಿ 'ಯುನಿಫಿಕೇಶನ್ ಸಿದ್ಧಾಂತ'ವನ್ನು ಭೌತಶಾಸ್ತ್ರಕ್ಕೆ ನೀಡುವರೆಂದು ಯಾರೂ ಯೋಚಿಸಿರಲಿಲ್ಲ.

ಪಾಕಿಸ್ಥಾನದ ಬಾಹ್ಯಾಕಾಶ, ಅಂತರಿಕ್ಷಯಾನ ಸಂಶೋಧನೆ ಸಂಸ್ಥೆಗಳ ಮತ್ತು ಆಣವಿಕ ಸಂಶೋಧನೆ ಸಂಸ್ಥೆಗಳ ಸ್ಥಾಪಕರಲ್ಲಿ ಅವರು ಒಬ್ಬರಾಗಿದ್ದರು. 1960 ರಿಂದ 1974ರ ತನಕ ಅವರು ಪಾಕಿಸ್ಥಾನ ಸರಕಾರದ ವೈಜ್ಞಾನಿಕ ಸಲಹೆಗಾರರಾಗಿದ್ದರು. 1962ರಲ್ಲಿ ಅವರು ಪಾಕಿಸ್ಥಾನದ ಅಟೋಮಿಕ್ ಎನರ್ಜಿ ಕಮಿಶನ್‌ನ ಸಹಭಾಗಿಯಾಗಿದ್ದರು. ಅವರು ಪಾಕಿಸ್ಥಾನ್ ಇನ್ಸಿಟ್ಯೂಟ್ ಆಫ್ ನ್ಯೂಕ್ಲಿಯರ್ ಸಯನ್ಸ್ ಆ್ಯಂಡ್ ಟೆಕ್ನೋಲಜಿ ಎಂಬ ಸಂಸ್ಥೆಯನ್ನು ಸಹ ಸ್ಥಾಪಿಸಿದರು.

ಆ ಕಾಲದ ಇನ್ನೊಬ್ಬ ಪ್ರಸಿದ್ಧ ವಿಜ್ಞಾನಿಯಾಗಿದ್ದ ಡಾಕ್ಟರ್ ಐ. ಎಚ್. ಉಸ್ಮಾನಿ ಜೊತೆ ಸೇರಿ ಅವರು ಪಾಕಿಸ್ಥಾನದ ನ್ಯೂಕ್ಲಿಯರ್ ಟೆಕ್ನೋಲಜಿಯ ಪ್ರಗತಿಗೆ ಆವಶ್ಯಕವಾದ ವ್ಯವಸ್ಥೆಯನ್ನು ರೂಪಿಸಿದರು.

1998ರಲ್ಲಿ ಪಾಕಿಸ್ಥಾನ ಸರಕಾರ ಡಾಕ್ಟರ್ ಅಬ್ದುಸ್ಸಲಾಮರನ್ನು ಗೌರವಿಸುತ್ತಾ ಅಂಚೆ ಚೀಟಿಯನ್ನು ಜಾರಿಗೊಳಿಸಿತ್ತು. 1960 ರಿಂದ 1974ರ ತನಕ ಸರಕಾರದ ವೈಜ್ಞಾನಿಕ ಸಲಹೆಗಾರರಾಗಿ ಅವರು ಅನೇಕ ವೈಜ್ಞಾನಿಕ ಸಂಶೋಧನೆಯ ಸಂಸ್ಥೆಗಳನ್ನು ಸ್ಥಾಪಿಸಿದ್ದರು.

ಗಮನಾರ್ಹವಾದ ವಿಷಯವೇನೆಂದರೆ ಪಾಕಿಸ್ಥಾನ ತನ್ನ ಪ್ರಥಮ ಆಣವಿಕ ಸ್ಫೋಟಗಳ ಪರೀಕ್ಷೆ ನಡೆಸಿದಾಗ ಅದಕ್ಕೆ ಸಂಬಂಧಿಸಿದ ವಿಜ್ಞಾನಿಗಳ ಸೇವೆಗಳನ್ನು ಗುರುತಿಸಿ ಅವರ ಹೆಸರಲ್ಲಿ ಅಂಚೆ ಚೀಟಿಗಳನ್ನು ಪಾಕಿಸ್ಥಾನ ಸರಕಾರ 1998ರಲ್ಲಿ ಜಾರಿಗೊಳಿಸಿತು. ಒಂದು ಅಂಚೆ ಚೀಟಿ ಡಾಕ್ಟರ್ ಅಬ್ದುಸ್ಸಲಾಮ್‌ರ ಹೆಸರಲ್ಲಿಯೂ ಜಾರಿಗೊಂಡಿತ್ತು. ಆದರೆ 1996ರಲ್ಲಿ ಅವರು ನಿಧನ ಹೊಂದಿದ ನಂತರ ಅವರ ಜನನ ಅಥವಾ ಮರಣದ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ರಾಷ್ಟ್ರೀಯ ಮಟ್ಟದಲ್ಲಿ ಆಯೋಜಿಸಲಾಗಿಲ್ಲ.

ಡಾಕ್ಟರ್ ಅಬ್ದುಸ್ಸಲಾಮರ ಜೀವನ ಮತ್ತು ವ್ಯಕ್ತಿತ್ವದ ಬಗ್ಗೆ ಒಂದು ಡೋಕ್ಯುಮೆಂಟರಿ ಚಲಚಿತ್ರ OTT ಪ್ಲಾಟ್‌ಫಾರ್ಮ್ ಆಗಿರುವ NETFLIX ಮೂಲಕ 2019 ಅಕ್ಟೋಬರ್‌ನಲ್ಲಿ ಪ್ರದರ್ಶನಕ್ಕೆ ಬಿಡುಗಡೆಗೊಳಿಸಲಾಗಿತ್ತು. ಈ ಡೋಕ್ಯುಮೆಂಟರಿ ಅನೇಕ ಪ್ರಸಿದ್ಧ ಫಿಲ್ಮ್ ಫೆಸ್ಟಿವಲ್‌ಗಳಲ್ಲಿಯೂ ಮೂವತ್ತು ನಗರಗಳ ಚಲನಚಿತ್ರ ಮಂದಿರಗಳಲ್ಲಿಯೂ ಪ್ರದರ್ಶಿಸಲಾಗಿತ್ತು. ಈ ಡೋಕ್ಯುಮೆಂಟರಿಗೆ ಆರು ಫಿಲ್ಮ್ ಫೆಸ್ಟಿವಲ್‌ಗಳಲ್ಲಿ "ಬೆಸ್ಟ್ ಡೋಕ್ಯುಮೆಂಟರಿ ಫಿಲ್ಮ್" ಎಂಬ ಪ್ರಶಸ್ತಿ ಲಭಿಸಿತ್ತು.

---

ಕವನ

## ಆಹ್ವಾನ ದೇವನ ಕಡೆಗೆ

* ಕೆ.ಎಂ. ಉಮರ್, ಮಡಿಕೇರಿ

ಆರಲು ಬಿಡದಿರಿ ಈ ದೀಪವನು
ಅರಳಿಸಿ ಬೆಳಗಿರಿ ಈ ದೀಪವನು.

ದೇವನ ಕಾರುಣ್ಯ ದೊರೆತಿದೆ ನಮಗೆ
ಧಾವಿಸಿ ನೀಡುವ ಎಲ್ಲರ ಮನೆಗೆ.

ಮುಹಮ್ಮದ್ ನಬಿಯ ಆಜ್ಞೆಯ ಪಾಲಿಸಿ
ಮಹ್‌ದಿಯ ಸಂದೇಶ ಜನರಿಗೆ ತಲುಪಿಸಿ.

ಆಹ್ವಾನ ಗೈವುದು ದೇವನ ಕಡೆಗೆ
ಅದುವೆ ಮೊದಲನೆ ಕರ್ತವ್ಯ ನಮಗೆ.

ಅಡಚಣೆ ನೂರು ಮಧ್ಯದಿ ಬಂದರೂ
ಆರಲು ಬಿಡದಿರಿ ಈ ದೀಪವನು.

ಈ ನುಡಿ ನುಡಿದರು ರಾಬಿಲ್ ಖಲೀಫ
ಇದರಲಿ ದೊರೆವುದು ವಿಜ್ಞಾನ ದೀಪ.

ಈ ಲೋಕ ನಮಗೆ ನಶ್ವರವಾಗಿದೆ
ಪರಲೋಕ ಮುಂದೆ ಶಾಶ್ವತಪಡಿಸಿದೆ.

ದೇವನ ಸನ್ನಿಧಿ ಕಾಣಿಕೆ ನೀಡಲು
ಧಾವಿಸೊ ಮಾರ್ಗವು ಒಳಿತಿನದಾಗಲಿ.

ದೊರೆತಿರೊ ಭಾಗ್ಯವ ವ್ಯರ್ಥವ ಮಾಡದೆ
ಮಹ್‌ದಿಯ ಸಂದೇಶ ಹರಡುವ ಲೋಕಕೆ.

ಕರುಣೆಯ ತೋರಿಸು ಕಾರುಣ್ಯನಾಥ
ಕಾಪಾಡು ಮಹ್‌ದಿಯ ಸಂಗದ ದೀಪ.

ಆರಲು ಬಿಡದಿರಿ ಈ ದೀಪವನು
ಅರಳಿಸಿ ಬೆಳಗಿರಿ ಈ ದೀಪವನು.

## ಅಹ್ಮದಿಯಾ ವಾರ್ತೆಗಳು

# ವಾರ್ಷಿಕ ಇಜ್ತಿಮಾ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಮತ್ತು ಅತ್‌ಫಾಲುಲ್ ಅಹ್ಮದಿಯಾ – ಬೆಂಗಳೂರು ಜಿಲ್ಲೆ

**ಮಂಗಳೂರು:** ಈ ವರ್ಷದ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಮತ್ತು ಅತ್‌ಫಾಲುಲ್ ಅಹ್ಮದಿಯಾ – ಬೆಂಗಳೂರು ಜಿಲ್ಲೆ – ವಾರ್ಷಿಕ ಸಮ್ಮೇಳನ ಮೇ 25 ಮತ್ತು 26ರಂದು ಕೋಟೆಕಾರ್‌ನ ಬೈತುಲ್ ಈಮಾನ್‌ನಲ್ಲಿ ಜರಗಿತು. ಈ ಇಜ್ತಿಮಾದಲ್ಲಿ ಐದು ಮಜ್ಲಿಸ್‌ಗಳಿಂದ 87 ಖುದ್ದಾಂ, 25 ಅತ್‌ಫಾಲ್ ಮತ್ತು 21 ಅನ್‌ಸಾರ್ ಸದಸ್ಯರು ಭಾಗವಹಿಸಿದರು.

ಮುಖ್ಯ ಅತಿಥಿಯಾಗಿ ಜನಾಬ್ ಅತಾಉಲ್ ಬಸೀರ್ ಸಾಹಿಬ್ (ನಾಇಬ್ ಸದರ್, ಖುದ್ದಾಮುಲ್ ಅಹ್ಮದಿಯಾ, ಸೌತ್ ಇಂಡಿಯಾ) ಆಗಮಿಸಿದ್ದರು. ಜಮಾಅತುಗಳ ಅಮೀರರು, ಸದರರು ಮತ್ತು ನಾಝಿಂ ಸಾಹಿಬ್ ಅನ್ಸಾರುಲ್ಲಾಹ್ (ಬೆಂಗಳೂರು ಜಿಲ್ಲೆ) ಸಯ್ಯದ್ ಶಾರೀಖ್ ಮಜೀದ್ ಸಾಹಿಬ್ ಇಜ್ತಿಮಾದಲ್ಲಿ ಪಾಲುಗೊಂಡರು.

ಮೇ ದಿನಾಂಕ 25ರಂದು ತಹಜ್ಜುದ್ ನಮಾಝ್‌ನೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಫಜ್‌ರ್ ನಮಾಝ್ ಬಳಿಕ ಮೌಲವಿ ಕೆ.ವಿ. ತಾಹಿರ್ ಸಾಹಿಬ್ ದರ್ಸ್ ನೀಡಿದರು. ಆ ನಂತರ ಖುದ್ದಾಂ ಮತ್ತು ಅತ್‌ಫಾಲ್ ಸದಸ್ಯರು ಖುರ್‌ಆನ್ ತಿಲಾವತ್ ಮಾಡಿದರು.

ಮುಖ್ಯ ಅತಿಥಿ ಜನಾಬ್ ಅತಾಉಲ್ ಬಸೀರ್ ಸಾಹಿಬ್ ಧ್ವಜಾರೋಹಣ ಮಾಡಿದರು. ಆ ಬಳಿಕ ನಡೆದ ಉದ್ಘಾಟನಾ ಸಮಾರಂಭದಲ್ಲಿ ಅಶ್ರಫ್ ಖಾನ್ ಸಾಹಿಬ್ ಖುರ್‌ಆನ್ ಪಠಿಸಿದರು. ಇಸ್ಲಾಮ್ ಸಾಹಿಬ್ ಕನ್ನಡ ಅರ್ಥ ಓದಿದರು. ಜನಾಬ್ ನಾಇಬ್ ಸದರ್ ಸಾಹಿಬ್ ಖುದ್ದಾಂ, ಅತ್‌ಫಾಲ್ ಪ್ರತಿಜ್ಞೆ ಬೋಧಿಸಿದರು. ತಹ್‌ಸೀನ್ ಅಹ್ಮದ್ ಸಾಹಿಬ್ ನಝ್ಮ್ ಹಾಡಿದರು. ಜನಾಬ್ ಮುಹಮ್ಮದ್ ಲುಕ್ಮಾನ್ ಸಾಹಿಬ್ (ಖಾಇದ್ ಮಂಗಳೂರು) ಸ್ವಾಗತಿಸಿದರು. ಮುಖ್ಯ ಅತಿಥಿ ಸಮ್ಮೇಳನವನ್ನು ಉದ್ಘಾಟಿಸಿದರು. ಜಿಲ್ಲಾ ಖಾಇದ್ ಜನಾಬ್ ಇರ್ಫಾನ್ ಖಾನ್ ಸಾಹಿಬ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಎರಡೂ ದಿನಗಳಲ್ಲಿ ವಿವಿಧ ಶೈಕ್ಷಣಿಕ ಮತ್ತು ದೈಹಿಕ ಸ್ಪರ್ಧೆಗಳು ಜರಗಿದವು. ಶೈಕ್ಷಣಿಕ ಸ್ಪರ್ಧೆಗಳಲ್ಲಿ ಮಜ್ಲಿಸ್ ಜಕ್ಕೂರ್ ಪ್ರಥಮ ಸ್ಥಾನ ಪಡೆಯಿತು. ಮಜ್ಲಿಸ್ ಬೆಂಗಳೂರು ದ್ವಿತೀಯ ಸ್ಥಾನ ಗಳಿಸಿತು. ದೈಹಿಕ ಸ್ಪರ್ಧೆಗಳಲ್ಲಿ ಮಜ್ಲಿಸ್ ಮಂಗಳೂರು ಪ್ರಥಮ ಸ್ಥಾನ ಪಡೆದರೆ, ಮಜ್ಲಿಸ್ ಬೆಂಗಳೂರು ದ್ವಿತೀಯ ಸ್ಥಾನ ಗಳಿಸಿತು.

ಖುದ್ದಾಂ ಮತ್ತು ಅತ್‌ಫಾಲ್‌ಗಳಿಗೆ ತಅ್‌ಲೀಂ, ತರ್ಬಿಯತ್ ಬಗ್ಗೆ ವಿವಿಧ ವಿಷಯಗಳ ಕುರಿತು ಎರಡು ಸೆಮಿನಾರ್‌ಗಳನ್ನು ಏರ್ಪಡಿಸಲಾಯಿತು. ಅತ್‌ಫಾಲ್‌ಗಳಿಗೆ ಏರ್ಪಡಿಸಲಾದ ಸೆಮಿನಾರ್‌ನಲ್ಲಿ ಅಲ್ಲಾಹನ ಮೇಲೆ ವಿಶ್ವಾಸ, ಅಲ್ಲಾಹನ ಆರಾಧನೆ, ಖಿಲಾಫತ್, ವ್ಯಾಯಾಮ ಮುಂತಾದ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಖುದ್ದಾಮ್‌ಗಳಿಗೆ ಏರ್ಪಡಿಸಲಾದ ಸೆಮಿನಾರ್‌ನಲ್ಲಿ ಇಸ್ಲಾಮಿನಲ್ಲಿ ವೈವಾಹಿಕ ಜೀವನದ ಕುರಿತು ಚರ್ಚಿಸಲಾಯಿತು. ಈ ಚರ್ಚೆಯಲ್ಲಿ ಕೇಂದ್ರ ಪ್ರತಿನಿಧಿ ಜನಾಬ್ ಫಾತಿಹುದ್ದೀನ್ ಸಾಹಿಬ್ ಭಾಗವಹಿಸಿದರು.

ಹುಝೂರರಿಗೆ ಪತ್ರ ಬರೆಯುವುದರ ಆವಶ್ಯಕತೆ ಮತ್ತು ಪತ್ರ ಬರೆಯುವ ರೀತಿಯನ್ನು ಅತ್‌ಫಾಲ್‌ಗಳಿಗೆ ಕಲಿಸಿಕೊಡಲಾಯಿತು.

ಮೇ 26ರಂದು ತಹಜ್ಜುದ್, ಫಜ್‌ರ್ ನಮಾಝ್, ದರ್ಸ್ ಮತ್ತು ಖುರ್‌ಆನ್ ತಿಲಾವತ್ ಕಾರ್ಯಕ್ರಮ ನಡೆಯಿತು. ಮೌಲವಿ ಇಸ್ಮಾಈಲ್ ಶಾ ಸಾಹಿಬ್ ದರ್ಸ್ ನೀಡಿದರು. ಅನಂತರ ಉಳ್ಳಾಲದ ಭಾರತಿ ಸ್ಕೂಲ್ ಗ್ರೌಂಡ್‌ನಲ್ಲಿ ಮತ್ತು ಗ್ರೀನ್ಸ್ ಫೀಲ್ಡ್‌ನಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳು ಜರಗಿದವು.

ಮೇ 26ರಂದು ಸಂಜೆ 5:30 ಕ್ಕೆ ಸಮಾಪನ ಸಭೆ ಜರಗಿತು. ಮೌಲವಿ ಇಸ್ಮಾಈಲ್ ಶಾ ಸಾಹಿಬ್ ಹುಝೂರರ ಸಂದೇಶವನ್ನು ವಾಚಿಸಿದರು. ಆ ಬಳಿಕ ಮಂಗಳೂರು ಜಮಾಅತಿನ ಸದರ್ ಜನಾಬ್ ಬಿ.ಎಸ್. ಅಬ್ದುರ್ರಹೀಂ ಸಾಹಿಬ್ ತನ್ನ ಭಾಷಣದಲ್ಲಿ ಹಝ್‌ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರ ಉಪದೇಶ, ನಿರ್ದೇಶನಗಳನ್ನು ಓದಿ ಹೇಳಿದರು.

ಮುಖ್ಯ ಅತಿಥಿ ತನ್ನ ಭಾಷಣದಲ್ಲಿ ಖಿಲಾಫತಿನೊಂದಿಗೆ ಸಂಬಂಧ, ಅಲ್ಲಾಹನ ಮೇಲೆ ಪ್ರೀತಿ, ನಮಾಝ್ ಬಗ್ಗೆ ಶ್ರದ್ಧೆ, ಸತ್ಯ ಹೇಳುವುದರ ಮಹತ್ವ ಇತ್ಯಾದಿ ವಿಷಯಗಳ ಬಗ್ಗೆ ಉಪದೇಶ ನೀಡಿದರು.

ಅನಂತರ ಜಿಲ್ಲಾ ನಾಇಬ್ ಖಾಇದ್ ಜನಾಬ್ ಮುದಬ್ಬಿರ್ ಅಹ್ಮದ್ ಸಾಹಿಬ್ ಕೃತಜ್ಞತೆ ಸಲ್ಲಿಸಿದರು.

ಆ ಬಳಿಕ ಸ್ಪರ್ಧೆಗಳಲ್ಲಿ ವಿಜೇತರಾದ ಖುದ್ದಾಂ, ಅತ್‌ಫಾಲ್ ಸದಸ್ಯರಿಗೆ ಬಹುಮಾನ ವಿತರಣೆ ಮಾಡಲಾಯಿತು. ದುಆದೊಂದಿಗೆ ಕಾರ್ಯಕ್ರಮ ಸಮಾಪ್ತವಾಯಿತು.

ಇಲ್ಲಿ ಗಮನಾರ್ಹ ವಿಷಯವೇನೆಂದರೆ, ಮಂಗಳೂರು ಜಮಾಅತಿನ ಪ್ರಥಮ ಅಹ್ಮದಿ ಜನಾಬ್ ಎಂ.ಕೆ ಯೂಸುಫ್ ಹುಸೈನ್ ಸಾಹಿಬರನ್ನು ಸುಮಾರು 50 ವರ್ಷಗಳಿಗೆ ಮುಂಚೆ ದಫನ ಮಾಡಿದ್ದು ನಮ್ಮ ಈ ಇಜ್ತಿಮಾ ಜರಗಿದ ಬೈತುಲ್ ಈಮಾನಿನ ಎದುರುಗಡೆ ಹೆದ್ದಾರಿಯ ಆಚೆ ಬದಿಯ ಜಾಗದಲ್ಲಾಗಿದೆ. ಇದೊಂದು ಕಾಕತಾಳೀಯ ಘಟನೆಯೆಂದು ಹೇಳಬಹುದು.

## ಅಹ್ಮದಿಯಾ ಸಂಘಟನೆಯ ಜಿಲ್ಲಾ ಮಹಿಳಾ ಘಟಕದಿಂದ ಸರ್ವಧರ್ಮ ಸಮ್ಮೇಳನ

**ಯಾದಗಿರಿ:** ಅಹ್ಮದಿಯಾ ಸಂಘಟನೆಯ ಜಿಲ್ಲಾ ಮಹಿಳಾ ಘಟಕದ ವತಿಯಿಂದ ನಗರದ ರಾಯಲ್ ಫಂಕ್ಷನ್ ಹಾಲ್‌ನಲ್ಲಿ ಸರ್ವಧರ್ಮ ಸಮ್ಮೇಳನ ಏರ್ಪಡಿಸಲಾಗಿತ್ತು. ಅಹ್ಮದಿಯ ಮಹಿಳಾ ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ಬದರ್ ಫರೀದ್ ಅಧ್ಯಕ್ಷತೆ ವಹಿಸಿ ಮಾತನಾಡಿ ಪ್ರತಿವರ್ಷ ಸಮ್ಮೇಳನ ಮಹಿಳಾ ಘಟಕದಿಂದ ನಡೆಯುತ್ತದೆ. ಆ ಮೂಲಕ ಮಹಿಳಾ ಜಾಗೃತಿ ಹಾಗೂ ವಿಶ್ವಶಾಂತಿಯ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಅಹ್ಮದಿಯಾ ಸಂಘಟನೆಯ ಮಹಿಳಾ ವಿಭಾಗವು ಕಾರ್ಯನಿರ್ವಹಿಸುತ್ತಿದೆ ಎಂದರು.

ಮೂಕಾಂಬಿಕಾ ಶಾಲೆಯ ಕಾರ್ಯದರ್ಶಿ ಶ್ರೀಮತಿ ಪೂರ್ಣಿಮ, ಡಾ॥ ವೆಂಕಟೇಶ್ ಗಡ್ಡಿಮನಿ ಅವರು ಮಾತನಾಡಿ ಅಹ್ಮದಿಯಾ ಸಂಘಟನೆಯವರು ವಿಭಿನ್ನವಾಗಿ ಆಲೋಚನೆ ಮಾಡುವ ವಿಶ್ವದ ಏಕೈಕ ಸಮುದಾಯವಾಗಿದ್ದು ಇವರ ಶಾಂತಿ ಪ್ರಯತ್ನ ಹಾಗೂ ಸಹಬಾಳ್ವೆಯ ವಿಚಾರಗಳು ಮಾದರಿಯಾಗಿವೆ. ಅಹ್ಮದಿಯಾ ಮುಸ್ಲಿಂ ಸಂಸ್ಥೆ ಮತ್ತು ಅದರ ಅಂಗ ಸಂಸ್ಥೆಗಳು ಜನರ ಕಲ್ಯಾಣಕ್ಕಾಗಿ, ಜನರಿಗೆ ಸಹಬಾಳ್ವೆ, ಸಹನೆ ಮತ್ತು ಶಾಂತಿಯ ಬಗ್ಗೆ ಹೇಳುತ್ತವೆ. ಇದು ಬಹಳ ಪ್ರಶಂಸನೀಯ ಕಾರ್ಯವಾಗಿದೆ ಎಂದು ನುಡಿದರು.

ಉಪನ್ಯಾಸಕಿಯಾಗಿ ಆಗಮಿಸಿದ್ದ ಯಾದಗಿರಿಯ ಶ್ರೀಮತಿ ಶಾಹೀನ್ ಮುನವ್ವರ್ ಮಾತನಾಡಿ ಪ್ರಸಕ್ತ ದಿನಗಳಲ್ಲಿ ಪ್ರಪಂಚವು ವಿನಾಶದ ಕಡೆ ಅತೀ ವೇಗವಾಗಿ ಸಾಗುತ್ತಿದೆ. ಅದರಿಂದ ಪ್ರಪಂಚವನ್ನು ರಕ್ಷಿಸುವುದಕ್ಕೆ ಜಾಗತಿಕ ಅಹ್ಮದಿಯಾ ಮುಸ್ಲಿಂ ಸಂಸ್ಥೆಯ ಐದನೆಯ ಖಲೀಫ ಹಝ್ರತ್ ಮಿರ್ಝಾ ಮಸ್ರೂರ್ ಅಹ್ಮದ್ ಸಾಹೇಬರು ಶಾಂತಿ, ಸಹಬಾಳ್ವೆ, ಸಹನೆ, ಮನುಷ್ಯರ ಸುಖ ಮತ್ತು ದುಃಖಗಳಲ್ಲಿ ಭಾಗಿಯಾಗುವ ಮೂಲಕ ಎಲ್ಲರೂ ಒಂದಾಗಿ ಒಂದೇ ಪರಿವಾರದ ಅಣ್ಣತಮ್ಮಂದಿರಾಗಿ ಬಾಳಬೇಕೆಂದು ತಿಳಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ವಿವರಿಸಿದರು.

ಈ ಸಮ್ಮೇಳನದ ಮೂಲ ಉದ್ದೇಶ ಇಸ್ಲಾಂ ಧರ್ಮದ ಅರ್ಥ ವಿವರಿಸುವ ಪ್ರಯತ್ನವಾಗಿದೆ. ಅಹ್ಮದಿಯಾ ಸಂಘಟನೆಯ ಖಲೀಫ ಅವರು ಸಹ ಎಲ್ಲಾ ಜನಾಂಗದಲ್ಲಿ ಋಷಿಮುನಿ ಅವತಾರಗಳು ಆಗಮಿಸಿದ್ದಾರೆ. ಅವರು ಎಲ್ಲರಿಗೆ ಸಹಬಾಳ್ವೆ, ಸಹನೆ, ಶಾಂತಿಯ ಕುರಿತು ಹೇಳಿದ್ದಾರೆ. ಅದೇ ರೀತಿ ಮೂರನೆಯ ಪ್ರಾಪಂಚಿಕ ಯುದ್ಧವನ್ನು ತಡೆಯಬೇಕೆಂದರೆ ನಾವು ಸಹಬಾಳ್ವೆ ಮತ್ತು ಮನುಷ್ಯರ ಸುಖ ಮತ್ತು ದುಃಖಗಳಲ್ಲಿ ಭಾಗವಹಿಸುವುದು ಅತೀ ಮುಖ್ಯವಾಗಿದೆ. ಅದಕ್ಕಾಗಿ ಭೇದಭಾವ ಮಾಡದೆ ಹೆಣ್ಣು ಮಗು ಮತ್ತು ಗಂಡು ಮಗುವಿನ ಶಿಕ್ಷಣದ ಕುರಿತು ಗಮನ ಹರಿಸುವುದು ಅತೀ ಮುಖ್ಯ ಕರ್ತವ್ಯವಾಗಿದೆ. ಸಂಘಟನೆಯ ಘೋಷ ವಾಕ್ಯ **"ಪ್ರೀತಿ ಎಲ್ಲರಲ್ಲೂ ದ್ವೇಷ ಯಾರಲ್ಲೂ ಇಲ್ಲ"** ಎಂಬುದರ ಕುರಿತು ನಾವು ಎಲ್ಲರು ಕಟ್ಟುನಿಟ್ಟಾಗಿ ನಡೆಯಬೇಕು ಎಂದು ತಿಳಿಸಿದರು.

ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಶ್ರೀಮತಿ ಫ್ಲೋಶಿಯ ಮಾತನಾಡಿ ಮಹಿಳೆಯರ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಲ್ಲಿ ಹೆಚ್ಚು ಉನ್ನತಿ ಸಾಧ್ಯ ಎಂದು ನುಡಿದರು. ಉಪಾಧ್ಯಕ್ಷರಾದ ಹಾಜಿರಾ ಅಸದ್, ಸರ್ಕಾರಿ ಆಯುಷ್ ಇಲಾಖೆಯ ವೈದ್ಯರು ಶ್ರೀಮತಿ ವಿಜಯ ಲಕ್ಷ್ಮಿ, ಲಿಟ್ಲ್ ಏಂಜೆಲ್ ಶಾಲೆಯ ಅಧ್ಯಾಪಕಿ ಶ್ರೀಮತಿ ಕೃಷ್ಣ ಭಾಸ್ಕರ್ ವೇದಿಕೆಯಲ್ಲಿ ಅತಿಥಿಗಳಾಗಿ ಆಸೀನರಾಗಿದ್ದರು.

ಖುರಾನ್ ಪಠನ, ಉರ್ದು ಮತ್ತು ಕನ್ನಡ ಪದ್ಯದ ನಂತರ ಇಸ್ಲಾಂ ಶಾಂತಿಯ ಧರ್ಮ ಮತ್ತು ಮಹಿಳೆಯ ಶ್ರೇಣಿ ಮತ್ತು ಅಂತಸ್ತಿನ ವಿಷಯಗಳ ಬಗ್ಗೆ ಭಾಷಣಕಾರರು ವಿಷಯ ಮಂಡಿಸಿದರು. ವೇದಿಕೆಯ ಕಾರ್ಯದರ್ಶಿ ಆರೀಫ ಜಫರ್ ಎಲ್ಲ ಅತಿಥಿಗಳಿಗೆ ಮತ್ತು ಮಹಿಳೆಯರಿಗೆ ಸ್ವಾಗತಿಸಿ ಕೊನೆಗೆ ಕೃತಜ್ಞತೆಗಳನ್ನು ಅರ್ಪಿಸಿದರು. **(ಯಾದಗಿರಿ ಟೈಮ್ಸ್ ವಾರ್ತೆ 01–07–2024)**

## ಯುಗರಶ್ಮಿಗೆ ಧನಸಹಾಯ ನೀಡಿದ ಉದಾರಮತಿಗಳು

1. ಜ॥ ಮುಹಮ್ಮದ್ ಇಸ್ಮಾಈಲ್ ಸಾಹಿಬ್, ಬೆಂಗಳೂರು – ರೂ. 1000/–
2. ಜ॥ ಮುಹಮ್ಮದ್ ಇರ್ಫಾನ್ ಸಾಹಿಬ್, ಜಕ್ಕೂರ್ – ರೂ. 1000/–
3. ಝುಹೀರ ಬೇಗಂ ಸಾಹಿಬ, ಬೆಂಗಳೂರು – ರೂ. 500/–

ಓದಿದ್ದು

# ಡೆಂಗ್ಯೂ ಜ್ವರ

* ಡಾ॥ ಅನುರಾಧಾ ಕಾಮತ್

**ರಾಜ್ಯದಲ್ಲಿ ಮಳೆಯ ಪ್ರಮಾಣ ಹೆಚ್ಚುತ್ತಿದ್ದಂತೆ ಡೆಂಗ್ಯೂ ಜ್ವರ ಅಬ್ಬರಿಸುತ್ತಿದೆ. ಈ ಜ್ವರಕ್ಕೆ ನಿರ್ದಿಷ್ಟ ಚಿಕಿತ್ಸೆ ಇಲ್ಲದಿದ್ದರೂ ಮಳೆ ನೀರು ನಿಲ್ಲದಂತೆ ಸುತ್ತಲಿನ ಪರಿಸರವನ್ನು ಚೊಕ್ಕವಾಗಿಟ್ಟು ಡೆಂಗ್ಯೂ ವೈರಸ್‌ಗಳನ್ನು ಹರಡುವ ಸೊಳ್ಳೆಗಳನ್ನು ನಿಯಂತ್ರಿಸಬೇಕಿರುವುದು ಸದ್ಯದ ತುರ್ತು. ಸಾಂಕ್ರಾಮಿಕವಾಗಿ ಕಾಡುವ ಡೆಂಗ್ಯೂ ಜ್ವರದ ಲಕ್ಷಣಗಳೇನು? ಮುನ್ನೆಚ್ಚರಿಕೆಯಾಗಿ ಮನೆಯಲ್ಲೇ ಮಾಡುವಂಥ ಪ್ರತಿಬಂಧಕ ಔಷಧಗಳೇನು? ಇಲ್ಲಿವೆ ಕೆಲವು ಸರಳ ನಿವಾರಣೋಪಾಯಗಳು.**

### ಹೀಗಿರಲಿ ಆರೈಕೆ, ರಕ್ಷಣೆ, ಆಹಾರ

### ಮಳೆಗಾಲದಲ್ಲಿ ಸರ್ವೇ ಸಾಮಾನ್ಯ ಕಾಡುವ ಜ್ವರ – ಡೆಂಗ್ಯೂ.

ಇದು ವೈರಸ್‌ನ ಸೋಂಕಿನಿಂದ ಉಂಟಾಗುವ ಜ್ವರವಾಗಿದ್ದರೂ 'ಈಡಿಸ್ ಈಜಿಪ್ಟಿ' ಎಂಬ ಸೊಳ್ಳೆಯಿಂದ ಶೀಘ್ರ ಹರಡಿ ಸಾಂಕ್ರಾಮಿಕ ರೋಗವಾಗಿ ಸಮುದಾಯವನ್ನು ಕಾಡುತ್ತದೆ.

ಆಯುರ್ವೇದದ 'ಮಾಧವ ನಿದಾನ' ಗ್ರಂಥದ ಪರಿಶಿಷ್ಟ ಅಧ್ಯಾಯದಲ್ಲಿ 'ದಂಡಕಜ್ವರ' ಎಂಬುದರ ಕುರಿತಾಗಿ ಉಲ್ಲೇಖವಿದೆ. ಇದು ಸೊಳ್ಳೆಯಿಂದ ಹರಡುವ ಜ್ವರವಾಗಿದ್ದು, ಒಂದು ವಾರದಲ್ಲಿ ಕಡಿಮೆಯಾಗುತ್ತದೆ. ಆದರೂ ಮಕ್ಕಳಿಗೆ ಹಾಗೂ ವೃದ್ಧರಿಗೆ ಅಧಿಕ ಮುನ್ನೆಚ್ಚರಿಕೆ ಅಗತ್ಯ ಎಂದು ತಿಳಿಸುತ್ತಾ ದಂಡಕಜ್ವರದ ಕುರಿತು ಮಾಹಿತಿ ನೀಡಲಾಗಿದೆ. ಇದು ಇಂದು ಕಾಡುತ್ತಿರುವ ಡೆಂಗ್ಯೂಜ್ವರದ ಲಕ್ಷಣಗಳಿಗೆ ಹೊಂದುತ್ತದೆ ಎಂಬುದೂ ದಿಟ.

### ಡೆಂಗ್ಯೂ ಜ್ವರದ ಲಕ್ಷಣಗಳು

ಶೀಘ್ರವಾಗಿ ಹೆಚ್ಚುವ ಅಧಿಕ ಜ್ವರ, ವಾಕರಿಕೆ, ವಾಂತಿ, ಹಸಿವಿಲ್ಲದಿರುವುದು, ಹೊಟ್ಟೆನೋವು, ತಲೆನೋವು, ಕಣ್ಣಿನ ಹಿಂಭಾಗದಲ್ಲಿ ನೋವು, ಸಂಧಿಶೂಲ ಇತ್ಯಾದಿ. ಕೆಲವರಲ್ಲಿ ಮೈಮೇಲೆ ಗಂಧೆ (ರದ್ದುಗಳು), ರಕ್ತಸ್ರಾವ ಇತ್ಯಾದಿ. ಪ್ಲೇಟ್ ಲೆಟ್ ಕಣಗಳು ಶೀಘ್ರ ಕಡಿಮೆಯಾಗುವುದು ಕಂಡುಬರುತ್ತದೆ. ಅಂಥ ಸಮಯದಲ್ಲಿ ಅಪಾಯ ತಪ್ಪಿಸಲು ತುರ್ತು ಚಿಕಿತ್ಸೆ ಅಗತ್ಯ.

ಡೆಂಗ್ಯೂ ಜ್ವರ ಕಂಡು ಹಿಡಿಯಲು, ರಕ್ತಪರೀಕ್ಷೆ ಮಾಡಿಸಿ ದೃಢೀಕರಿಸಿ ತನ್ಮೂಲಕ ವೈದ್ಯಕೀಯ ಸಮಾಲೋಚನೆಯೊಂದಿಗೆ ಔಷಧ, ಮನೆಮದ್ದು ಆಹಾರಕ್ರಮಗಳನ್ನು ಅನುಸರಿಸಬೇಕು.

### ಡೆಂಗ್ಯೂ ಜ್ವರ–ಮನೆಮದ್ದುಗಳು

ಡೆಂಗ್ಯೂ ಜ್ವರಕ್ಕೆ ಮೂಲಿಕೆಗಳ ಮದ್ದು ಪರಿಣಾಮಕಾರಿ. ಡೆಂಗ್ಯೂ ಜ್ವರದ ಸಾಮಾನ್ಯ ಲಕ್ಷಣ ಉಳ್ಳವರು ಈ ಕೆಳಗಿನ ಮನೆಮದ್ದುಗಳನ್ನು ಬಳಸಬಹುದು. ಪ್ರತಿಬಂಧಕವಾಗಿಯೂ ಕೆಲವು ಮನೆಮದ್ದುಗಳು ಉಪಯುಕ್ತ.

### ಬೇವಿನ ಎಲೆಯ ಕಷಾಯ ಅಥವಾ ಬೇವಿನ ಎಲೆಯ ಜ್ಯೂಸ್

ಬೇವಿನಲ್ಲಿ ನಿಂಬಿನ್ ಮತ್ತು ನಿಂಬಿಡಿನ್ ಎಂಬ ರಾಸಾಯನಿಕ ದ್ರವ್ಯಗಳಿದ್ದು ಇವು ವೈರಾಣು ನಿರೋಧಕ ಹಾಗೂ ಜ್ವರ ಹರವಾಗಿ ಕಾರ್ಯವೆಸಗುತ್ತವೆ.

### ಬೇವಿನ ಎಲೆಯ ಕಷಾಯ

8–10 ತಾಜಾ ಬೇವಿನ ಎಲೆಗಳನ್ನು ದೊಡ್ಡಗೆ ಕತ್ತರಿಸಿ ಹಾಕಿ 1.5 ಕಪ್ ನೀರಿನಲ್ಲಿ ಕುದಿಸಬೇಕು. 1 ಕಪ್ ಕಷಾಯವನ್ನು ಅರ್ಧಕ್ಕೆ ಇಂಗಿಸಿ, ದಿನಕ್ಕೆ 2–3 ಬಾರಿ ಸೇವಿಸಿದರೆ ಡೆಂಗ್ಯೂ ಜ್ವರ ನಿಯಂತ್ರಣದಲ್ಲಿ ಪರಿಣಾಮಕಾರಿ. 1/4 ಕಪ್ ಕಷಾಯವನ್ನು ದೇಹ ಪ್ರಕೃತಿಗೆ ತಕ್ಕಂತ ನಿತ್ಯ ಅಥವಾ ವಾರದಲ್ಲಿ ಎರಡು ಬಾರಿ ಸೇವಿಸಬಹುದು. ಇದು ಮಳೆಗಾಲದ ಇತರ ಕಾಯಿಲೆಗಳು ಬಾರದಂತೆಯೂ ತಡೆಗಟ್ಟುತ್ತವೆ.

### ಬೇವಿನ ಎಲೆಯ ಜ್ಯೂಸ್

4 ಬೇವಿನ ಎಲೆಯನ್ನು ಜಜ್ಜಿ ನೀರು ಬೆರೆಸಿ ರಸ ತೆಗೆದು, ಅದಕ್ಕೆ ಸ್ವಲ್ಪ ನಿಂಬೇರಸ ಹಾಗೂ ಜೇನು ಬೆರೆಸಿ ದಿನಕ್ಕೆ 1–3 ಬಾರಿ ಸೇವಿಸಿದರೆ ಡೆಂಗ್ಯೂ ಜ್ವರ ಚಳಿ, ಸಂಧಿಶೂಲ ಶೀಘ್ರ ಕಡಿಮೆಯಾಗುತ್ತದೆ.

### ಪಪ್ಪಾಯಿ ಎಲೆಯ ಜ್ಯೂಸ್ / ಕಷಾಯ

ಪಪ್ಪಾಯಿ ಎಲೆಯು ಪ್ಲೇಟ್‌ಲೆಟ್‌ಗಳ ಸಂಖ್ಯೆ ಹೆಚ್ಚಿಸುತ್ತದೆ. ಬಿಳಿರಕ್ತಕಣ ಹಾಗೂ ಅದರ ಒಂದು ಘಟಕವಾಗಿರುವ ನ್ಯೂಟ್ರೋಫಿಲ್‌ಗಳನ್ನು

ಸಂತುಲಿತಗೊಳಿಸಲು ಸಹಕರಿಸುತ್ತದೆ.

ಎಳೆಯ, ತಾಜಾ ಪಪ್ಪಾಯಿ ಎಲೆಯ ಜ್ಯೂಸ್, ಕಷಾಯ ಇವೆರಡೂ ದಿನಕ್ಕೆ 1–3 ಬಾರಿ ರೋಗದ ತೀವ್ರತೆ, ರೋಗಿಯ ಬಲ, ಪ್ರಕೃತಿಗೆ ತಕ್ಕಂತೆ ನೀಡಿದರೆ ಪರಿಣಾಮಕಾರಿ. ಊಟದ ಬಳಿಕ ಅರ್ಧ ಚಮಚ ಪಪ್ಪಾಯಿ ಬೀಜದ ಪುಡಿಯನ್ನು ಸೇವಿಸಿದರೂ ಹಿತಕರ. ಪೆಪ್ಪೈನ್ ಎಂಬ ಕಿಣ್ವವನ್ನು ಹೊಂದಿರುವುದರಿಂದ ಜೀರ್ಣಾಂಗವ್ಯೂಹ ಹಾಗೂ ಯಕೃತ್‌ನ ಕಾರ್ಯಕ್ಷಮತೆ ವರ್ಧಿಸಿ, ಇದು ಡೆಂಗ್ಯೂ ಜ್ವರದ ನಿಯಂತ್ರಣಕ್ಕೆ ಸಹಕರಿಸುತ್ತದೆ.

## ಅಮೃತಬಳ್ಳಿಯ ಜ್ಯೂಸ್

ಆಯುರ್ವೇದದಲ್ಲಿ ಮುಖ್ಯವಾಗಿ ಜ್ವರಹರವಾಗಿ ಅಮೃತಬಳ್ಳಿಯು ಶ್ರೇಷ್ಠ ಔಷಧಿ. ಇದು ಡೆಂಗ್ಯೂ ರೋಗಿಗಳಲ್ಲಿ ಜ್ವರಹರವಾಗಿ ಮಾತ್ರವಲ್ಲ ಸಂಧಿಶೂಲ, ಮಾಂಸಪೇಶಿ ನೋವು ನಿವಾರಕವಾಗಿಯೂ ಪರಿಣಾಮಕಾರಿ.

ನಾಲ್ಕು ಇಂಚು ಅಮೃತಬಳ್ಳಿಯ ಕಾಂಡದ ತುಂಡುಗಳನ್ನು ಜಜ್ಜಿ ನೀರಲ್ಲಿ ಹಾಕಿ ಚೆನ್ನಾಗಿ ಕುದಿಸಬೇಕು. ಬಳಿಕ ಸೋಸಿ, ಆರಿಸಿ ಸ್ವಲ್ಪ ಜೇನು ಬೆರೆಸಿ ದಿನಕ್ಕೆ 1–2 ಬಾರಿ ಸೇವಿಸಬೇಕು. ಅಥವಾ ನಾಲ್ಕು ಅಮೃತಬಳ್ಳಿಯ ಎಲೆಯನ್ನು ಜಜ್ಜಿ ರಸವನ್ನು ನೀರಲ್ಲಿ ಬೆರೆಸಿ, ಜೇನು ಸೇರಿಸಿ ದಿನಕ್ಕೆ 2–3 ಬಾರಿ ಸೇವಿಸಿದರೂ ಪರಿಣಾಮಕಾರಿ.

## ತುಳಸೀ ಕಷಾಯ

1 ಕಪ್ ನೀರಿನಲ್ಲಿ ನಾಲ್ಕು ತುಳಸೀ ದಳಗಳನ್ನು ಹಾಕಿ ಕುದಿಸಿ, ಕೊನೆಗೆ 2–3 ಚೂರು ಜಜ್ಜಿದ ಕರಿಮೆಣಸಿನ ಕಾಳುಗಳನ್ನು ಹಾಕಬೇಕು. ಬಳಿಕ ಸೋಸಿ ಬೆಲ್ಲ ಅಥವಾ ಜೇನು ಸೇರಿಸಿ ಕುಡಿಯಬೇಕು. 1 ರಿಂದ 3 ಬಾರಿ ದಿನದಲ್ಲಿ ರೋಗದ ತೀವ್ರತೆಗೆ ತಕ್ಕಂತೆ ಬಳಸಬೇಕು. ಅಥವಾ ನಿತ್ಯ ನಾಲ್ಕು ಚಮಚ ಸೇವಿಸುವುದು ಡೆಂಗ್ಯೂ ಪ್ರತಿಬಂಧಕವಾಗಿಯೂ ಉಪಯುಕ್ತ. ತುಳಸಿ ಹಾಗೂ ಕರಿಮೆಣಸಿನಕಾಳು ದೇಹದ ಪ್ರತಿಬಂಧಕ ಶಕ್ತಿಯನ್ನು ವರ್ಧಿಸುತ್ತವೆ. ಜೊತೆಗೆ ವೈರಾಣು, ವಿವಿಧ ರೋಗಾಣುನಾಶಕವಾಗಿಯೂ ಉಪಯುಕ್ತ. ಈ ಔಷಧಿಗಳನ್ನು ಬಳಸುವಾಗ, ಡೆಂಗ್ಯೂ ರೋಗದ ಲಕ್ಷಣವಾಗಿ ಕಾಡುವ ಹೊಟ್ಟೆನೋವು, ಅಜೀರ್ಣ, ಅಪಚನ ನಿವಾರಣೆ ಮಾಡಲು ರಾತ್ರಿ 1 ಕಪ್ ನೀರಿಗೆ 1–2 ಚಮಚ ತ್ರಿಫಲಾ ಪುಡಿ ಬೆರೆಸಿ ಕುದಿಸಿ ಕಷಾಯ ಮಾಡಿ ಊಟದ ಬಳಿಕ ಸೇವಿಸಬೇಕು. ಇದು ಆ್ಯಂಟಿ ಆಕ್ಸಿಡೆಂಟ್‌ಗಳನ್ನೂ ದೇಹಕ್ಕೆ ಒದಗಿಸುತ್ತದೆ ಹಾಗೂ ವಿಷಘ್ನ ಅಥವಾ ದೇಹ ಮತ್ತು ಲಿವರ್‌ಗಳಿಗೆ 'ಡಿಟಾಕ್ಸ್' ಆಗಿಯೂ ಪರಿಣಾಮಕಾರಿ.

## ಬಾರ್ಲಿ ಹುಲ್ಲಿನ ರಸ ಅಥವಾ ಬಾರ್ಲಿ ಚಹಾ

ಬಾರ್ಲಿ ಹುಲ್ಲಿನಲ್ಲಿ ಪ್ಲೇಟ್‌ಲೆಟ್ ಹಾಗೂ ಕೆಂಪು ರಕ್ತಕಣಗಳನ್ನು ವರ್ಧಿಸುವ ಗುಣವಿದೆ. ಜೊತೆಗೆ ಇದು ಪೋಷಕಾಂಶಗಳ ಆಗರ. ವಿಟಮಿನ್ ಬಿ1, ಬಿ2, ಬಿ6, ಬಿ12, ಕಬ್ಬಿಣ, ಕ್ಯಾಲ್ಸಿಯಂ, ಪೊಟ್ಯಾಶಿಯಂ, ಮೆಗ್ನೇಶಿಯಂಗಳನ್ನು ಹೊಂದಿದ್ದು, ರೋಗನಿಯಂತ್ರಣದ ಜೊತೆಗೆ ದೇಹಕ್ಕೆ ಪೋಷಕಾಂಶಗಳನ್ನು ಒದಗಿಸುತ್ತದೆ.

ಹುರಿದ ಬಾರ್ಲಿಯ ಚಹಾ ಕೂಡ ಉಪಯುಕ್ತ. ಇದು ಡೆಂಗ್ಯೂ ಹಾಗೂ ಮಳೆಗಾಲದ ಕಾಯಿಲೆಗಳಿಗೆ ಪ್ರತಿಬಂಧಕವಾಗಿ ಉಪಯುಕ್ತ.

## ಮೆಂತೆ ನೀರು

ಒಂದು ಚಮಚ ಮೆಂತೆಕಾಳುಗಳನ್ನು ತೊಳೆದು ಒಂದು ಕಪ್ ನೀರಲ್ಲಿ ರಾತ್ರಿ ನೆನೆಸಬೇಕು. ಮರುದಿನ ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಮೆಂತೆಕಾಳು ಸೋಸಿ ಈ ನೀರು ಸೇವಿಸಿದರೆ ಡೆಂಗ್ಯೂ ಜ್ವರದಲ್ಲಿ ಕಾಡುವ ಸಂಧಿಶೂಲ, ಮಾಂಸಖಂಡಗಳ ಸೆಳೆತ ಕಡಿಮೆ ಮಾಡಲು ಉಪಯುಕ್ತ. ಹಲವರಲ್ಲಿ ಡೆಂಗ್ಯೂಜ್ವರ ಗುಣವಾದ ಬಳಿಕವೂ ಸಂಧಿಶೂಲ, ಗಂಟುನೋವು ಇರುತ್ತದೆ. ಈ ನೀರನ್ನು ಅನಂತರವೂ ನಿತ್ಯ ಒಂದು ಬಾರಿ ಉಪಯೋಗಿಸಿದರೆ ಪರಿಣಾಮಕಾರಿ.

## ಅರಸಿನ ಹಾಲು

1 ಕಪ್ ಹಾಲಿಗೆ, ಶುದ್ಧ ಅರಸಿನದ ಪುಡಿ ಅರ್ಧ – ಒಂದು ಚಮಚ ಬೆರೆಸಿ, ಹಾಲಿಗೆ ಹಾಕಿ ಕುದಿಸಿ ಆರಿದ ಬಳಿಕ 1 ಚಮಚ ಜೇನು ಬೆರೆಸಿ ಸೇವಿಸಿದರೂ ಡೆಂಗ್ಯೂ ರೋಗದಲ್ಲಿ ಹಿತಕರ.

## ಹಸಿಶುಂಠಿಯ ಕಷಾಯ/ಚಹಾ

2 ಇಂಚು ಉದ್ದದ ಶುಂಠಿಯನ್ನು ತುರಿದು 1 ಕಪ್ ನೀರಿಗೆ ಬೆರೆಸಿ ಕುದಿಸಿ, ಸೋಸಿ ಆರಿದ ಬಳಿಕ ಜೇನು ಅಥವಾ ಬೆಲ್ಲ ಬೆರೆಸಿ ಸೇವಿಸಿದರೆ ಇದೂ ಡೆಂಗ್ಯೂಜ್ವರದಲ್ಲಿ ಪ್ರಭಾವಿ.

## ಡೆಂಗ್ಯೂ ಜ್ವರದಲ್ಲಿ ಆಹಾರ ಪಥ್ಯ ಮತ್ತು ಅಪಥ್ಯ

ನಿರ್ಜಲೀಕರಣವು ಡೆಂಗ್ಯೂ ಜ್ವರದ ಅತೀ ಸಾಮಾನ್ಯ ಲಕ್ಷಣವಾಗಿದ್ದು, ಶುದ್ಧ ಮೂಲದ ನೀರನ್ನು ಆಗಾಗ್ಗೆ ಕುಡಿಯುವುದರಿಂದ ಜಲೀಯ ಅಂಶದ ಕೊರತೆ (ಡಿಹೈಡ್ರೇಶನ್) ಉಂಟಾಗುವುದಿಲ್ಲ. ಅಪಚನ ಅಥವಾ ಅಗ್ನಿಮಾಂದ್ಯ ಉಳ್ಳವರು ಬಿಸಿ ನೀರು ಆಗಾಗ್ಗೆ ಸೇವಿಸಿದರೆ ಪರಿಣಾಮಕಾರಿ. ಕತ್ತರಿಸಿದ ತರಕಾರಿಗಳಿಂದ ಸೂಪ್ ತಯಾರಿಸಿ ಸೇವಿಸಿದರೂ ಹಿತಕರ. ಸಿಹಿ ಕಿತ್ತಳೆಯ ಜ್ಯೂಸ್ ಉತ್ತಮ ಪೇಯ. ಇದು ಶಕ್ತಿದಾಯಕ ಹಾಗೂ ಆ್ಯಂಟಿ ಆಕ್ಸಿಡೆಂಟ್‌ಗಳಿಂದ ಸಮೃದ್ಧವಾಗಿದ್ದು ಶೀಘ್ರ ಸುಸ್ತು ನಿವಾರಣೆ ಮಾಡಿ, ಶಕ್ತಿ, ಪುಷ್ಟಿ ನೀಡುತ್ತದೆ. ಅಂತೆಯೇ ದಾಳಿಂಬೆಯ ಜ್ಯೂಸ್ ಕೂಡ ವಿಪುಲ ಜೀವಸತ್ವ ಖನಿಜಾಂಶಗಳನ್ನು ಹೊಂದಿದ್ದು ಪ್ಲೇಟ್‌ಲೆಟ್ ಸಂಖ್ಯೆ ಹೆಚ್ಚಿಸಲು ಮತ್ತು ಶಕ್ತಿದಾಯಕವಾಗಿಯೂ ಉಪಯುಕ್ತ, ದಿನಕ್ಕೆ 2 ಬಾರಿ 1 ಕಪ್ ದಾಳಿಂಬೆ ಜ್ಯೂಸ್ ಸೇವಿಸುವುದು ಪರಿಣಾಮಕಾರಿ. ಇದಕ್ಕೆ 1 ಚಮಚ ನಿಂಬೇರಸ ಬೆರೆಸಿಯೂ ಸೇವಿಸಬಹುದು. ತಾಜಾ ಎಳನೀರನ್ನು ದಿನಕ್ಕೆ 2–3 ಕಪ್ ಸೇವಿಸಿದರೆ ಬಲು ಉಪಯುಕ್ತ.

ಹುರಿದ ಅಕ್ಕಿಯ ಗಂಜಿ, ಅರಳನ್ನು ಹಾಲಲ್ಲಿ ಕುದಿಸಿ ಸೇವನೆ (ಅಕ್ಕಿಯ ಭತ್ತದ ಅರಳಿನ ಪೇಯ), ಅಕ್ಕಿ ಮತ್ತು ಹೆಸರು ಅಥವಾ ಹೆಸರು ಬೇಳೆ ಬೆರೆಸಿ ತಯಾರಿಸಿದ ಖಾದ್ಯ ಅಥವಾ ಕಿಚಡಿ, ಹಾಲು, ಹಾಲಿನ ಉತ್ಪನ್ನ, ಪಪ್ಪಾಯ, ದಾಳಿಂಬೆ, ಕಿತ್ತಳೆ, ನೆಲ್ಲಿಕಾಯಿ, ಮೃದುವಾಗಿ ಬೇಯಿಸಿದ ಸುಲಭವಾಗಿ ಜೀರ್ಣವಾಗುವ ತರಕಾರಿಯ ಖಾದ್ಯ – ಇತ್ಯಾದಿ ಉತ್ತಮ.

ವಿಶ್ರಾಂತಿ ಕೂಡ ಚೇತರಿಕೆಗೆ ಸಹಕಾರಿ, ಅಧಿಕ ದೈಹಿಕ ಶ್ರಮದ ಕೆಲಸ, ವ್ಯಾಯಾಮ, ಕ್ರೀಡೆ ಇತ್ಯಾದಿಗಳು ವರ್ಜ್ಯ.

### ಅಪಥ್ಯ ಆಹಾರ

ಹಣ್ಣುಗಳಲ್ಲಿ ಮಾವು, ಪೇರಳೆ, ಸ್ಟ್ರಾಬೆರಿ ಅಷ್ಟೊಂದು ಹಿತಕರವಲ್ಲ. ಡೆಂಗ್ಯೂ ರೋಗಿಗಳಿಗೆ ಉಷ್ಣ ಹಾಗೂ ತೀಕ್ಷ್ಣ ಗಂಧ ಹಾಗೂ ಗುಣಗಳನ್ನು ಹೊಂದಿರುವ ಹಸುರುಮೆಣಸು, ದೊಣ್ಣೆ ಮೆಣಸಿನ ಕಾಯಿ, ಈರುಳ್ಳಿ, ಬೆಳ್ಳುಳ್ಳಿ, ಮೂಲಂಗಿ, ಬದನೆ, ಎಲೆಕೋಸು, ಆಲೂಗಡ್ಡೆ ಹಾಗೂ ಜೀರ್ಣಕ್ಕೆ ಸುಲಭವಲ್ಲದ ತರಕಾರಿಗಳನ್ನು ಜ್ವರವಿರುವ ಸಮಯದಲ್ಲಿ ನೀಡಬಾರದು. ಮುಖ್ಯವಾಗಿ ಕೆಂಪು ಹಾಗೂ ಕಂದು ಬಣ್ಣದ ತರಕಾರಿ, ಹಣ್ಣು, ಅಧಿಕ ಕೊಬ್ಬಿನ ಅಂಶವುಳ್ಳ ಆಹಾರ, ಮಸಾಲೆಯುಕ್ತ ಆಹಾರ, ಅಧಿಕ ಚಹಾ, ಕಾಫಿ ಹಾಗೂ ಕೆಫೀನ್‌ಯುಕ್ತ ಪೇಯಗಳು, ಧೂಮಪಾನ, ಮದ್ಯಪಾನ ಹಿತಕರವಲ್ಲ.

ಆರೋಗ್ಯವಂತ ವ್ಯಕ್ತಿಯಲ್ಲಿ ಪ್ಲೇಟ್‌ಲೆಟ್‌ಗಳು ಒಂದು ಮೈಕ್ರೋಲೀಟನರ್‌ಲ್ಲಿ 1,50,000 ದಿಂದ 2,50,000 ವರೆಗೆ ಇರುತ್ತವೆ. ಪ್ಲೇಟ್‌ಲೆಟ್‌ಗಳ ಸಂಖ್ಯೆ ಕಡಿಮೆಯಾಗಿರುವುದನ್ನು ನಿರ್ಲಕ್ಷಿಸಕೂಡದು. ವೈದ್ಯಕೀಯ ಸಮಾಲೋಚನೆ ಹಾಗೂ ತುರ್ತು ಚಿಕಿತ್ಸೆ ಅವಶ್ಯ.

ಅಂತೆಯೇ ರಕ್ತಸ್ರಾವ ಉಂಟಾದಾಗಲೂ ನಿರ್ಲಕ್ಷ್ಯ ಸಲ್ಲದು. ಸೊಳ್ಳೆ ಕಡಿತದಿಂದ ರಕ್ಷಿಸಿಕೊಳ್ಳಲು ಕರ್ಪೂರ ಮಿಶ್ರಿತ ಕೊಬ್ಬರಿ ಎಣ್ಣೆಯನ್ನು ಕೈ–ಕಾಲುಗಳಿಗೆ ಲೇಪಿಸುವುದು, ಸೊಳ್ಳೆ ಪರದೆ, ಸೊಳ್ಳೆ ನಿವಾರಕ ದ್ರವ್ಯಗಳ ಉಪಯೋಗ ಹಿತಕರ.

ಮನೆಯ ಮೂಲೆಗಳಲ್ಲಿ ಶುದ್ಧ ಕರ್ಪೂರ ಹಾಗೂ ಬೇವಿನ ಎಲೆಗಳನ್ನು ಇರಿಸುವುದರಿಂದ ಅದು ಗಾಳಿಯನ್ನು ಶುದ್ಧಗೊಳಿಸುತ್ತದೆ. ಸಂಜೆಯ ವೇಳೆಗೆ ಧೂಪದ ದ್ರವ್ಯಗಳಿಂದ ಧೂಪ (ಫ್ಯೂಮಿಗೇಶನ್) ಅಥವಾ ಹೊಗೆ ಹಾಕುವುದು ಉಪಯುಕ್ತ. ಅಗರು, ಲೋಭಾನದ ಧೂಪ, ಬೇವಿನ ಎಲೆ, ಮಾವಿನ ಎಲೆಯನ್ನು ಒಣಗಿಸಿ ಹಾಕುವ ಧೂಪ, ಹಳದಿ, ಸಾಸಿವೆ, ಗುಗ್ಗುಲು, ಲೋಭಾನ, ಹಸುವಿನ ತುಪ್ಪದಿಂದ ಹಾಕುವ ಧೂಪ ಗಾಳಿಯನ್ನು ಶುದ್ಧೀಕರಿಸುತ್ತದೆ. ಆಮ್ಲಜನಕದ ಹರಿವನ್ನು ಹೆಚ್ಚಿಸುತ್ತದೆ; ಇಂಗಾಲದ ಡೈಆಕ್ಸೈಡ್ ಹಾಗೂ ಇತರ ದೂಷಿತ ಗಾಳಿಯಲ್ಲಿರುವ ದ್ರವ್ಯಗಳ ಮಟ್ಟವನ್ನು ಕಡಿಮೆ ಮಾಡುತ್ತದೆ ಮಾತ್ರವಲ್ಲ ಮುಖ್ಯವಾಗಿ ಒಣಗಿಸಿದ ಬೇವಿನ ಎಲೆಯ ಧೂಪ ರೋಗಕಾರಕ ಸೊಳ್ಳೆ, ನೊಣ, ರೋಗಾಣು, ವೈರಾಣು, ಬ್ಯಾಕ್ಟೀರಿಯಾದಂಥ ಸೂಕ್ಷ್ಮ ಜೀವಾಣುಗಳನ್ನು ಪ್ರತಿಬಂಧಿಸುತ್ತದೆ.

ಮನೆಯ ಸುತ್ತ ತುಳಸೀ ಗಿಡ, ಬೇವಿನ ಮರ, ಮಾವಿನ ಮರ, ಅಶ್ವತ್ಥ ವೃಕ್ಷ, ಎಲೊವೆರಾ ಗಿಡಗಳಿದ್ದರೂ ಗಾಳಿಯನ್ನು ಶುದ್ಧೀಕರಿಸುವುದರ ಜೊತೆಗೆ ಆಮ್ಲಜನಕ ಹೆಚ್ಚಿಸುತ್ತದೆ. ಸೊಳ್ಳೆ, ನೊಣಗಳನ್ನು ದೂರ ಓಡಿಸುತ್ತವೆ.

ಕೊಳಚೆ ನೀರು ಹಾಗೂ ನೀರು ನಿಂತಲ್ಲಿಯೇ ನಿಲ್ಲದಂತೆ ಮಾಡಬೇಕು. ನಿಂತ ನೀರಿನ ಮೂಲಗಳಿಂದ ಉತ್ಪತ್ತಿಯಾಗುವ ಸೊಳ್ಳೆಗಳನ್ನು ನಾಶಮಾಡಲು ಫಾಗಿಂಗ್ ಉಪಯುಕ್ತ. ಮುಖ್ಯವಾಗಿ ಡೆಂಗ್ಯೂ ಹರಡುವ ಈಡಿಸ್ ಈಜಿಪ್ಟಿ ಸೊಳ್ಳೆಗಳು ನಿಂತ ನೀರಲ್ಲಿ ಮಾತ್ರವಲ್ಲದೆ, ಶುದ್ಧ ನೀರಿನಲ್ಲಿಯೂ ಮೊಟ್ಟೆ ಇಟ್ಟು ಸಂತಾನಾಭಿವೃದ್ಧಿ ಮಾಡುತ್ತವೆ. ಇದರ ನಿವಾರಣೆಗೆ 'ಗಪ್ಪಿ ಮೀನು' ತುಂಬಾ ಉಪಯುಕ್ತ. ಎಲ್ಲಾ ಬಗೆಯ ನೀರಿನ ಮೂಲಗಳಲ್ಲಿ ಗಪ್ಪಿ ಮೀನನ್ನು ಹಾಕಿ ಬೆಳೆಸುವುದರಿಂದ ಈ ಮೀನುಗಳು ಮುಖ್ಯವಾಗಿ ಡೆಂಗ್ಯೂಕಾರಕ ಸೊಳ್ಳೆಯ ಮೊಟ್ಟೆಗಳನ್ನು ನಾಶಮಾಡುತ್ತವೆ.

ನಿಸರ್ಗವು ಪ್ರತಿಯೊಂದು ರೋಗಕ್ಕೂ ತನ್ನದೇ ಆದ ವಿಶಿಷ್ಟ ಪರಿಹಾರವನ್ನು ನೀಡುತ್ತದೆ, ಹತ್ತು ಹಲವು ವಿಧಗಳಲ್ಲಿ.

**(ತರಂಗ: 18 ಜುಲೈ 2024)**

## ಓದಿದ್ದು ಮಾಡದ ತಪ್ಪಿಗೆ 37 ವರ್ಷ ಜೈಲಿನಲ್ಲಿದ್ದ ವ್ಯಕ್ತಿಗೆ 14 ದಶಲಕ್ಷ ಡಾಲರ್ ಪರಿಹಾರ

**ವಾಶಿಂಗ್ಟನ್, ಫೆ.18:** ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ 37 ವರ್ಷಗಳಿಂದ ಜೈಲಿನಲ್ಲಿದ್ದ ವ್ಯಕ್ತಿ ನಿರ್ದೋಷಿ ಎಂದು ಸಾಬೀತಾದ ಹಿನ್ನೆಲೆಯಲ್ಲಿ ಆತನನ್ನು ತಕ್ಷಣ ಬಿಡುಗಡೆಗೊಳಿಸಿ 14 ದಶಲಕ್ಷ ಡಾಲರ್ ಪರಿಹಾರ ನೀಡುವಂತೆ ಅಮೆರಿಕದ ಫ್ಲೋರಿಡಾ ರಾಜ್ಯದ ನ್ಯಾಯಾಲಯ ಆದೇಶಿಸಿದೆ.

ಫ್ಲೋರಿಡಾ ತಾಂಪಾ ನಗರದಲ್ಲಿ 1983ರಲ್ಲಿ 19 ವರ್ಷದ ಬಾರ್ಬರಾ ಗ್ರಾಮ್ಸ್ ಎಂಬ ಯುವತಿಯ ಅತ್ಯಾಚಾರ ಮತ್ತು ಕೊಲೆ ಪ್ರಕರಣದಲ್ಲಿ 18 ವರ್ಷದ ರಾಬರ್ಟ್ ಡ್ಯುಬೋಯ್ಸ್ ಎಂಬ ವ್ಯಕ್ತಿಯನ್ನು ಬಂಧಿಸಿದ್ದು ನ್ಯಾಯಾಲಯ ಮರಣದಂಡನೆ ಶಿಕ್ಷೆ ವಿಧಿಸಿತ್ತು. ಆ ಬಳಿಕ ಅದನ್ನು ಜೀವಾವಧಿ ಶಿಕ್ಷೆಗೆ ಇಳಿಸಲಾಗಿತ್ತು ಎಂದು ಅಸೋಸಿಯೇಟೆಡ್ ಪ್ರೆಸ್ ವರದಿ ಮಾಡಿದೆ.

2018ರಲ್ಲಿ 'ಇನೋಸೆನ್ಸ್ ಪ್ರೊಜೆಕ್ಸ್ ಆರ್ಗನೈಸೇಷನ್' ಎಂಬ ಎನ್‌ಜಿಒ ಸಂಸ್ಥೆಯೊಂದು ಈ ಪ್ರಕರಣದ ಮರು ತನಿಖೆಗೆ ನಡೆಸಿದ ಪ್ರಯತ್ನದ ಫಲವಾಗಿ ನ್ಯಾಯಾಧಿಕಾರಿಗಳು ಡಿಎನ್‌ಎ ಪರೀಕ್ಷೆಗೆ ಆದೇಶಿಸಿದರು. 1983ರಲ್ಲಿ ಡಿಎನ್‌ಎ ಪರೀಕ್ಷೆಯ ಕ್ರಮ ಆರಂಭವಾಗಿರಲಿಲ್ಲ ಮತ್ತು ಸಂತ್ರಸ್ತೆಯ ದೇಹದ ಮೇಲಿನ ಗಾಯದ ಗುರುತು ಹಾಗೂ ಆರೋಪಿಯ ಹಲ್ಲಿನ ಗುರುತು ಒಂದಕ್ಕೊಂದು ಹೋಲುತ್ತದೆ ಎಂಬ ಆಧಾರದಲ್ಲಿ ಶಿಕ್ಷೆ ಘೋಷಿಸಿರುವುದು ಸರಿಯಲ್ಲ ಎಂದು ಎನ್‌ಜಿಒ ಸಂಸ್ಥೆ ವಾದಿಸಿತ್ತು. ಈ ಪ್ರಕಾರ 2020ರಲ್ಲಿ ಡ್ಯುಬೋಯ್ಸ್ ನಿರಪರಾಧಿ ಎಂದು ಸಾಬೀತಾಗಿ ಜೈಲಿನಿಂದ ಬಿಡುಗಡೆಗೊಂಡಿದ್ದ.

ಅನ್ಯಾಯವಾಗಿ 37 ವರ್ಷ ಜೈಲಿನಲ್ಲಿ ಕಳೆದಿದ್ದ ಡ್ಯುಬೋಯ್ಸ್, ಪರಿಹಾರ ಕೋರಿ ಪ್ರಕರಣದ ತನಿಖೆ ನಡೆಸಿದ್ದ ಪೊಲೀಸ್ ಇಲಾಖೆ, ವಿಧಿವಿಜ್ಞಾನ ಇಲಾಖೆಯ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಿದ್ದ. 2014ರ ಜನವರಿ 11ರಂದು ಈ ಪ್ರಕರಣವನ್ನು ರಾಜಿಯಲ್ಲಿ ಮುಗಿಸಲು ಎರಡೂ ಕಡೆಯವರು ಸಮ್ಮತಿಸಿದ್ದರು. ಇದೀಗ 59 ವರ್ಷವಾಗಿರುವ ಡ್ಯುಬೋಯ್ಸ್‌ಗೆ 14 ದಶಲಕ್ಷ ಡಾಲರ್ ಪರಿಹಾರ ನೀಡಲು ತಾಂಪಾ ನಗರಾಡಳಿತ ಒಪ್ಪಿಕೊಂಡಿದೆ ಎಂದು ವರದಿಯಾಗಿದೆ. **(ವಾರ್ತಾಭಾರತಿ: 19-02-2024)**

==========================================================================

## ಗಾಜಿನ ಬಾಟಲಲ್ಲಿ ಮುಚ್ಚಿಟ್ಟು ಪೋಷಕರಿಂದಲೇ ಮಕ್ಕಳ ಹತ್ಯೆ?

**ಹಾಂಕಾಂಗ್:** ಹಾಂಕಾಂಗ್‌ನಲ್ಲಿ ಸ್ವತಃ ಪೋಷಕರೇ ತಮ್ಮ ಇಬ್ಬರು ಮಕ್ಕಳನ್ನು ಗಾಜಿನ ಬಾಟಲಿಗಳಲ್ಲಿ ಮುಚ್ಚಿಟ್ಟು ಹತ್ಯೆ ಮಾಡಿರುವ ಆರೋಪ ಕೇಳಿಬಂದಿದೆ. ಇಲ್ಲಿನ ಅಪಾರ್ಟ್‌ಮೆಂಟ್‌ವೊಂದರಲ್ಲಿ ಫ್ಲ್ಯಾಟ್ ಶುಚಿಗೊಳಿಸಲು ಬಂದಿದ್ದ ಸ್ವಚ್ಛತಾ ಸಿಬಂದಿಗೆ ದ್ರವ ಪದಾರ್ಥ ತುಂಬಿದ್ದ ಗಾಜಿನ ಬಾಟಲಿ ದೊರೆತಿವೆ. ಅದರೊಳಗೆ ಮುಚ್ಚಿಡಲಾಗಿದ್ದ ಒಂದು ವರ್ಷಕ್ಕೂ ಕಡಿಮೆ ವಯಸ್ಸಿನ ಇಬ್ಬರು ಗಂಡು ಮಕ್ಕಳ ಶವ ಪತ್ತೆಯಾಗಿವೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಹೆಚ್ಚಿನ ವಿಚಾರಣೆ ಆರಂಭಿಸಿದ್ದಾರೆ. **(ಉದಯವಾಣಿ: 11-03-2024)**

==========================================================================

## ವ್ಯಕ್ತಿಯ ಕಿಡ್ನಿಯಿಂದ 418 ಕಲ್ಲು ಹೊರತೆಗೆದ ವೈದ್ಯರು ಶಾಕ್ !

**ಹೈದರಾಬಾದ್:** ಹೈದರಾಬಾದ್‌ನ ಏಷಿಯನ್ ಇನ್‌ಸ್ಟಿಟ್ಯೂಟ್ ಆಫ್ ನೆಫ್ರಾಲಜಿ ಮತ್ತು ಯುರಾಲಜಿ ಆಸ್ಪತ್ರೆಯಲ್ಲಿ 60 ವರ್ಷದ ವ್ಯಕ್ತಿಯೊಬ್ಬರ ಕಿಡ್ನಿಯಿಂದ 418 ಕಲ್ಲುಗಳನ್ನು ತೆಗೆಯುವಲ್ಲಿ ವೈದ್ಯರು ಯಶಸ್ವಿಯಾಗಿದ್ದಾರೆ. ಈ ಶಸ್ತ್ರಚಿಕಿತ್ಸೆ ನಡೆಯುತ್ತಿದ್ದ ಸಮಯದಲ್ಲಿ ವ್ಯಕ್ತಿಯ ಮೂತ್ರಪಿಂಡ ಶೇ.27ರಷ್ಟು ಮಾತ್ರ ಕೆಲಸ ಮಾಡುತ್ತಿತ್ತು ಎಂದು ಅವರು ತಿಳಿಸಿದ್ದಾರೆ. ಅತ್ಯಾಧುನಿಕ ಸಲಕರಣೆಗಳನ್ನು ಬಳಕೆ ಮಾಡುವ ಮೂಲಕ ವೈದ್ಯರು ಈ ಶಸ್ತ್ರಚಿಕಿತ್ಸೆಯನ್ನು ನಡೆಸಿದ್ದಾರೆ. **(ಉದಯವಾಣಿ: 14-03-2024)**

==========================================================================

## ಜಗತ್ತಿನಾದ್ಯಂತ ಪ್ರತಿದಿನ 100 ಕೋಟಿ ಊಟಗಳು ವ್ಯರ್ಥವಾಗುತ್ತಿವೆ

### ಆದರೂ ಮಾನವ ಕುಲದ ಮೂರನೇ ಒಂದರಷ್ಟು ಭಾಗಕ್ಕೆ ಆಹಾರದ ಅಭದ್ರತೆ: ವಿಶ್ವಸಂಸ್ಥೆಯ ಪರಿಸರ ಏಜೆನ್ಸಿ ವರದಿ

### * ಆಹಾರ ವ್ಯರ್ಥವಾಗುವಿಕೆಯ ಪ್ರಮಾಣವು ಮನೆಗಳಲ್ಲಿ ಗರಿಷ್ಠ

### * ಸರಾಸರಿ ಪ್ರತಿಯೊಬ್ಬ ವ್ಯಕ್ತಿಯಿಂದ ವರ್ಷಕ್ಕೆ 79 ಕೆ.ಜಿ. ಆಹಾರ ವ್ಯರ್ಥ

**ವಿಶ್ವಸಂಸ್ಥೆ, ಮಾ.28:** ಜಾಗತಿಕವಾಗಿ ಪ್ರತಿವಿನ 100 ಕೋಟಿ ಊಟಗಳು ವ್ಯರ್ಥವಾಗಿ ಹೋಗುತ್ತಿವೆ. ಇನ್ನೊಂದೆಡೆ ಜಗತ್ತಿನ ಮಾನವಕುಲದ ಮೂರನೇ ಒಂದು ಭಾಗವು ಆಹಾರದ ಅಭದ್ರತೆಯನ್ನು ಎದುರಿಸುತ್ತಿದೆ ಎಂದು ವಿಶ್ವಸಂಸ್ಥೆಯ ಪರಿಸರ ಏಜೆನ್ಸಿ (ಯುಎನ್‌ಇಪಿ)ಯ 2024ನೇ ಸಾಲಿನ ಆಹಾರ ವ್ಯರ್ಥ ಸೂಚ್ಯಂಕವು ಬಹಿರಂಗಪಡಿಸಿದೆ. 2022ರಲ್ಲಿ 1.05 ಶತಕೋಟಿ ಟನ್ ಆಹಾರ ವ್ಯರ್ಥವಾಗಿತ್ತೆಂದು ಅದು ಹೇಳಿದೆ.

ರಿಟೇಲ್, ಆಹಾರ ಸೇವೆ ಹಾಗೂ ಮನೆಗಳ ಮಟ್ಟದಲ್ಲಿ ಬಳಕೆದಾರರಿಗೆ ಲಭ್ಯವಾಗಬೇಕಿದ್ದ ಶೇ. 19ರಷ್ಟು ಆಹಾರವು ನಷ್ಟವಾಗಿ ಹೋಗಿದೆ. ಆಹಾರ ಪೂರೈಕೆ ಸರಪಣಿಯಲ್ಲಿ ಶೇ. 13ರಷ್ಟು ಆಹಾರ ಪೋಲಾಗಿದೆ ಎಂದು ವಿಶ್ವಸಂಸ್ಥೆಯ ಆಹಾರ ಹಾಗೂ ಕೃಷಿ ಸಂಘಟನೆಯ ವರದಿ ಅಂದಾಜಿಸಿಸುವುದಾಗಿ ವರದಿ ತಿಳಿಸಿದೆ.

"ಆಹಾರ ವ್ಯರ್ಥವಾಗುವಿಕೆಯು ಜಾಗತಿಕ ದುರಂತವಾಗಿದೆ. ಜಗತ್ತಿನಾದ್ಯಂತ ಒಂದು ಶತಕೋಟಿಗೂ ಅಧಿಕ ಆಹಾರ ವ್ಯರ್ಥವಾಗುತ್ತಿರುವಂತೆಯೇ, ಪ್ರತಿದಿನವೂ ಕೊಟ್ಯಂತರ ಮಂದಿ ಹಸಿದ ಹೊಟ್ಟೆಯಲ್ಲಿ ಮಲಗುತ್ತಿದ್ದಾರೆ ಎಂದು ಯುಎನ್ಇಪಿ ಹೇಳಿದೆ. ಈ ಪ್ರಚಲಿತ ಸಮಸ್ಯೆಯು ಜಾಗತಿಕ ಆರ್ಥಿಕತೆಯ ಮೇಲೆ ಪರಿಣಾಮ ಬೀರುವ ಜೊತೆಗೆ, ಹವಾಮಾನ ಬದಲಾವಣೆ, ಜೀವವೈವಿಧ್ಯತೆಗೆ ಹಾನಿ ಹಾಗೂ ಪರಿಸರ ಮಾಲಿನ್ಯದಂತಹ ಸಮಸ್ಯೆಗಳು ಉಲ್ಬಣಗೊಳ್ಳುವಂತೆ ಮಾಡಿದೆ ಎಂದು ಯುಎನ್ಇಪಿಯ ಆಡಳಿತ ನಿರ್ದೇಶಕ ಇಂಗರ್ ಆ್ಯಂಡರ್ಸನ್ ತಿಳಿಸಿದ್ದಾರೆ. ಜಗತ್ತಿನಾದ್ಯಂತ ಮನೆಗಳಲ್ಲಿಯೇ ಅತ್ಯಧಿಕ ಪ್ರಮಾಣದ ಆಹಾರವು ವ್ಯರ್ಥವಾಗುತ್ತಿದ್ದು, ಅದರ ಪ್ರಮಾಣ 631 ದಶಲಕ್ಷ ಟನ್‌ಗಳಾಗಿವೆ. ಆಹಾರ ಸೇವಾ ಹಾಗೂ ರಿಟೇಲ್ ವಲಯಗಳಲ್ಲಿ ಕ್ರಮವಾಗಿ 290 ಹಾಗೂ 131 ದಶಲಕ್ಷಟನ್ ಆಹಾರ ಹಾಳಾಗಿ ಹೋಗುತ್ತಿದೆ. ಸರಾಸರಿಯಾಗಿ ಪ್ರತಿಯೊಬ್ಬ ವ್ಯಕ್ತಿಯು ವಾರ್ಷಿಕವಾಗಿ 79 ಕೆ.ಜಿ. ಆಹಾರವನ್ನು ವ್ಯರ್ಥ ಮಾಡುತ್ತಿದ್ದು, ಇದು ಹಸಿವಿನಿಂದ ಬಾಧಿತವಾಗಿರುವ ಜಗತ್ತಿನಲ್ಲಿ ಪ್ರತಿದಿನದ 1.3 ಊಟದ ಪ್ರಮಾಣಕ್ಕೆ ಸಮಾನವಾದುದಾಗಿದೆ ಎಂದು ವರದಿ ಗಮನಸೆಳೆದಿದೆ. ಆಹಾರ ವ್ಯರ್ಥವಾಗುವಿಕೆಯ ಸಮಸ್ಯೆಯು ಕೇವಲ ಶ್ರೀಮಂತ ರಾಷ್ಟ್ರಗಳಿಗಷ್ಟೇ ಸೀಮಿತವಾಗಿಲ್ಲ. ಅಧಿಕ ಆದಾಯ, ಮೇಲ್ ಮಧ್ಯಮ ಆದಾಯ ಹಾಗೂ ಕೆಳ–ಮಧ್ಯಮ ಆದಾಯದ ದೇಶಗಳ ಮನೆಗಳಲ್ಲಿ ವಾರ್ಷಿಕವಾಗಿ ಸರಾಸರಿ ತಲಾ 7 ಕೆ.ಜಿ.ಯಷ್ಟು ಆಹಾರ ವ್ಯರ್ಥವಾಗುತ್ತಿದೆ.

ಮಧ್ಯಮ ಆದಾಯದ ರಾಷ್ಟ್ರಗಳಲ್ಲಿ ನಗರ ಗ್ರಾಮೀಣ ಪ್ರದೇಶಗಳಲ್ಲಿ ಸಾಮಾನ್ಯ ಆಹಾರದ ಪೋಲಾಗುವಿಕೆಯು ಕಡಿಮೆ ಪ್ರಮಾಣದಲ್ಲಿದೆ. ಪ್ರಾಣಿಗಳಿಗೆ, ಜಾನುವಾರುಗಳಿಗೆ ಹಾಗೂ ಮನೆಯ ಸಾವಯವಗೊಬ್ಬರಕ್ಕೆ ಅವುಗಳನ್ನು ಪುನರ್‌ಬಳಕೆ ಮಾಡುವುದು ಇದಕ್ಕೆ ಕಾರಣವಾಗಿದೆ ಎಂದು ವರದಿ ಶಿಫಾರಸು ಮಾಡಿದೆ. **(ವಾರ್ತಾಭಾರತಿ: 29–03–2024)**

==========================================================================

## ಕುಟುಂಬದಲ್ಲಿ ನಾಲ್ಕು ಮಕ್ಕಳು ಕಡ್ಡಾಯ: ಮುರುಘೇಂದ್ರ ಶ್ರೀ

**ವಿಜಯಪುರ, ಎ.11:** ಆರತಿಗೊಂದು, ಕೀರ್ತಿಗೊಂದು ಮಕ್ಕಳನ್ನು ಹೆತ್ತ ಕಾರಣವೇ ದೇಶ ದುರ್ಬಲವಾಗಿದೆ. ದೇಶಕ್ಕೊಬ್ಬ, ಪರಿವಾರಕ್ಕೊಬ್ಬ, ಧರ್ಮಕ್ಕೊಬ್ಬ ಹಾಗೂ ಸಮಾಜಕ್ಕೊಬ್ಬನಂತೆ ತಾಯಂದಿರು ನಾಲ್ಕು ಮಕ್ಕಳಿಗೆ ಜನ್ಮ ನೀಡಬೇಕು ಎಂದು ಶಿರಶ್ಯಾಡದ ಅಭಿನವ ಮುರುಘೇಂದ್ರ ಶ್ರೀಗಳು ಹೇಳಿದರು.

ತಾಲೂಕಿನ ಸದಾಶಿವ ಸಿದ್ಧರಾಮೇಶ್ವರ ದೇಗುಲದಲ್ಲಿ ಮಾತನಾಡಿದ ಅವರು, ಆರತಿಗೊಂದು, ಕೀರ್ತಿಗೊಂದು ಎಂದು ಎರಡೇ ಮಕ್ಕಳನ್ನು ಹೆರುತ್ತಿರುವುದರಿಂದ ದೇಶ ದುರ್ಬಲವಾಗಿ ಭಾರತೀಯತೆ ನಾಶವಾಗುತ್ತಿದೆ. ದೇಶಸಂರಕ್ಷಣೆಗಾಗಿ ಪ್ರತಿ ಕುಟುಂಬದಲ್ಲಿ ಕಡ್ಡಾಯವಾಗಿ 4 ಮಕ್ಕಳಿರಬೇಕು. ನವ ಜೋಡಿಗಳು ಸನಾತನ ಭಾರತದ ಪರಂಪರೆ ತಿಳಿದುಕೊಳ್ಳಬೇಕು ಎಂದರು. **(ಉದಯವಾಣಿ: 12–04–2024)**

==========================================================================

## 1 ಲೀ. ಕತ್ತೆ ಹಾಲಿಗೆ 5,000 ರೂ.!

**ಗಾಂಧೀನಗರ:** ಕತ್ತೆ ಹಾಲಿಗಿರುವ ಬೇಡಿಕೆ ಮತ್ತು ಪ್ರಾಮುಖ್ಯ ನಮಗೆಲ್ಲಾ ತಿಳಿದೇ ಇದೆ. ಈ ಬೇಡಿಕೆಯನ್ನೇ ಬಂಡವಾಳವಾಗಿಸಿಕೊಂಡ ಗುಜರಾತ್ ಮೂಲದ ವ್ಯಕ್ತಿಯೊಬ್ಬರು ಆನ್‌ಲೈನ್ ಮೂಲಕ ಹಾಲಿನ ಮಾರಾಟ ಶುರು ಮಾಡಿದ್ದು, 1 ಲೀ. ಹಾಲನ್ನು ಬರೋಬ್ಬರಿ 5,000 ರೂ.ಗಳಿಗೆ ಮಾರಿದ್ದಾರೆ. ಧಿರೇನ್ ಸೋಲಂಕಿ 22 ಲಕ್ಷರೂ. ಹೂಡಿಕೆಯೊಂದಿಗೆ ಕತ್ತೆಗಳ ಸಾಕಣೆ ಆರಂಭಿಸಿದ್ದಾರೆ. ಈಗ ಕರ್ನಾಟಕ, ಕೇರಳ ಸೇರಿ ಹಲವು ರಾಜ್ಯಗಳಿಗೆ ಹಾಲು ಪೂರೈಸುತ್ತಿದ್ದಾರೆ. **(ಉದಯವಾಣಿ: 22–04–2024)**

==========================================================================

## ರೊಟ್ಟಿ ಕೇಳಿದ ಯುವಕನ ಮರ್ಮಾಂಗಕ್ಕೆ ಒದ್ದು ಹತ್ಯೆ ಮಾಡಿದ ಮುಸ್ಲಿಂ ಯುವಕ

**ಯಾದಗಿರಿ, ಎ. 22:** ತಿನ್ನಲು ರೊಟ್ಟಿ ಕೇಳಿದ ಬಡ ದಲಿತ ಯುವಕನನ್ನು ಅನ್ಯಕೋಮಿನ ಯುವಕನೊಬ್ಬ ಮರ್ಮಾಂಗಕ್ಕೆ ಕಾಲಿನಿಂದ ಒದ್ದು ಹತ್ಯೆ ಮಾಡಿರುವ ಹೇಯ ಘಟನೆ ಯಾದಗಿರಿಯಲ್ಲಿ ನಡೆದಿದೆ. ಯಾದಗಿರಿ ನಗರದ ಶಹಾಪುರಪೇಟೆಯ ರಾಕೇಶ್ (22) ಮೃತ ಯುವಕ. ಪ್ರಕರಣಕ್ಕೆ ಸಂಬಂಧಿಸಿ ಫಯಾಜ್ ಎಂಬಾತನನ್ನು ಬಂಧಿಸಲಾಗಿದೆ.

ರಾಕೇಶ ಬಡವನಾಗಿದ್ದು, ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ರವಿವಾರ ರಾತ್ರಿ ರೊಟ್ಟಿ ತರಲು ತೆರಳಿದ್ದ. ಅದು ಬಂದ್ ಆಗಿದ್ದರಿಂದ ಪಕ್ಕದಲ್ಲೇ ಇದ್ದ ಮನೆಯಲ್ಲಿ ರೊಟ್ಟಿ ಕೇಳಲು ಬಾಗಿಲು ಬಡಿದಿದ್ದಾನೆ. ಆಗ ರೊಟ್ಟಿ ಕೇಂದ್ರದ ಬಳಿ ಇದ್ದ ಫಯಾಜ್ 'ಬೇರೆಯವರ ಮನೆ ಬಾಗಿಲು ಬಡಿದು ರೊಟ್ಟಿ ಕೇಳುತ್ತೀಯಾ' ಎಂದು ಬೈದಿದ್ದಾನೆ. ಆಗ ಇಬ್ಬರ ಮಧ್ಯೆ ಮಾತಿನ ಚಕಮಕಿ ನಡೆದಿದೆ. ಬಳಿಕ ರಾಕೇಶ್ ಮನೆಗೆ ತೆರಳಿ ಮಲಗಿದ್ದಾನೆ. ರಾತ್ರಿ 11 ಗಂಟೆ ಸುಮಾರಿಗೆ ಫಯಾಜ್ ತನ್ನ ಗೆಳೆಯರ ಜತೆ ಸೇರಿ ರಾಕೇಶ್ ಮನೆಗೆ ನುಗ್ಗಿ ಮಲಗಿದ್ದ ರಾಕೇಶ್‌ನ ಮರ್ಮಾಂಗಕ್ಕೆ ಕಾಲಿನಿಂದ ಒದ್ದು ಹತ್ಯೆ ಮಾಡಿದ್ದಾನೆ ಎಂದು ಪ್ರಕರಣ ದಾಖಲಾಗಿದೆ.

**(ಉದಯವಾಣಿ: 23–04–2024)**

==========================================================================

## ಭಿಕ್ಷೆಬೇಡಿ 1 ಲಕ್ಷ ರೂ. ಅನ್ನದಾನಕ್ಕೆ !

**ಬ್ರಹ್ಮಾವರ, ಮೇ 2:** ಭಿಕ್ಷೆ ಬೇಡಿ ಸಂಗ್ರಹಿಸಿದ 1 ಲಕ್ಷ ರೂ.ಗಳನ್ನು ದೇಣಿಗೆಯಾಗಿ ನೀಡಿದ ವಿಶಿಷ್ಟ ಘಟನೆಯಿದು. ಅಶ್ವತ್ಥಮ್ಮ

ಕಂಚುಗೋಡು ಅವರು ಅನೇಕ ದೇವಸ್ಥಾನಳೆದುರು ಕುಳಿತು ಬೇಡಿದ ಹಣದಿಂದ ಸಂಗ್ರಹಗೊಂಡ 1 ಲಕ್ಷ ರೂ.ಗಳನ್ನು ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಅನ್ನದಾನಕ್ಕೆ ನೀಡಿದ್ದಾರೆ.

ಎಷ್ಟೇ ಇದ್ದರೂ ದಾನಕ್ಕೆ ಮನಸ್ಸು ಹಿಂಜರಿಯುವ ಇಂದಿನ ಕಾಲಘಟ್ಟದಲ್ಲಿ ಭಿಕ್ಷೆ ಬೇಡಿ ದಾನ ಮಾಡುವ ಅಶ್ವತ್ಥಮ್ಮನ ನಡೆತ ನಿಜಕ್ಕೂ ವಿಚಿತ್ರ ಹಾಗೂ ಪ್ರೇರಣೆಯಾಗಿದೆ. ಅವರು ಈ ಮೊದಲೂ ಅನೇಕ ದೇವಸ್ಥಾನಗಳಿಗೆ ದೇಣಿಗೆ ನೀಡಿದ್ದರು.

**(ಉದಯವಾಣಿ: 03–05–2024)**

============================================================

## ಶಸ್ತ್ರಕ್ರಿಯೆ ನಡೆಸಿ ಬಾಣಂತಿ ದೇಹದಲ್ಲೇ ಬಟ್ಟೆ ಬಿಟ್ಟ ಕೋಲಾರ ಆಸ್ಪತ್ರೆ ವೈದ್ಯೆ?

**ಕೋಲಾರ, ಮೇ 16:** ಸಹಜ ಹೆರಿಗೆಯಾದ ಬಳಿಕ ನಡೆಸಿದ ಪುಟ್ಟ ಶಸ್ತ್ರಚಿಕಿತ್ಸೆ ವೇಳೆ ಮಹಿಳೆಯ ದೇಹದಲ್ಲೇ ಬಟ್ಟೆಯನ್ನು ಉಳಿಸಿ ಮನೆಗೆ ಕಳುಹಿಸಲಾಗಿದೆ ಎಂಬ ಆರೋಪ ಸರಕಾರಿ ಆಸ್ಪತ್ರೆ ವೈದ್ಯೆ ವಿರುದ್ಧ ಕೇಳಿಬಂದಿದೆ.

ಮಾಲೂರು ತಾಲೂಕು ರಾಮಸಾಗರದ ಚಂದ್ರಿಕಾ ಎಂಬವರು ಮೇ 5ರಂದು ನಗರದ ಜಿಲ್ಲಾಸ್ಪತ್ರೆಗೆ ದಾಖಲಾಗಿ, ಗಂಡು ಮಗುವಿಗೆ ಜನ್ಮ ನೀಡಿದ್ದಾರೆ. ಆ ಸಂದರ್ಭ ರಕ್ತಸ್ರಾವ ತಡೆಗೆ ವೈದ್ಯರು ಚಿಕಿತ್ಸೆ ನಡೆಸಿದ್ದಾರೆ. ಆಸ್ಪತ್ರೆಯಿಂದ ಮನೆಗೆ ಹೋಗಿ 3–4 ದಿನಗಳ ಬಳಿಕ ಮಹಿಳೆಗೆ ಹೊಟ್ಟೆನೋವು ಕಾಣಿಸಿಕೊಂಡಿದೆ. ಚಿಕಿತ್ಸೆಗಾಗಿ ನಗರದ ಖಾಸಗಿ ನರ್ಸಿಂಗ್ ಹೋಂ ವೈದ್ಯರ ಬಳಿ ತೋರಿಸಿದ್ದಾರೆ. ಆಗ ಗಾಯಕ್ಕೆ ಕ್ರೀಮ್ ಹಚ್ಚುವ ಸಮಯದಲ್ಲಿ ಬಟ್ಟೆ ಕಂಡುಬಂದಿದೆ ಎಂದು ಚಂದ್ರಿಕಾ ಕುಟುಂಬಸ್ಥರು ದೂರಿದ್ದಾರೆ.

**(ಉದಯವಾಣಿ: 17–05–2024)**

============================================================

## ಬಾಲಕಿಯ ಕೈಬೆರಳಿನ ಬದಲು ನಾಲಿಗೆಗೆ ಶಸ್ತ್ರಚಿಕಿತ್ಸೆ !

### ಕೇರಳ ಸರಕಾರಿ ಆಸ್ಪತ್ರೆಯ ವೈದ್ಯರ ಯಡವಟ್ಟು

**ಕೋಯಿಕ್ಕೋಡ್, ಮೇ 16:** ಆತಂಕಕಾರಿ ಬೆಳವಣಿಗೆಯೊಂದರಲ್ಲಿ ಕೋಯಿಕ್ಕೋಡ್‌ನ ಸರಕಾರಿ ಮೆಡಿಕಲ್ ಕಾಲೇಜ್ ಆಸ್ಪತ್ರೆಯ ವೈದ್ಯರು ಗುರುವಾರ ನಾಲ್ಕರ ಹರೆಯದ ಬಾಲಕಿಯ ಕೈಬೆರಳಿನ ಬದಲು ತಪ್ಪಾಗಿ ನಾಲಿಗೆಗೆ ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಬಾಲಕಿಯ ಕೈಯಲ್ಲಿ ಆರು ಬೆರಳುಗಳಿದ್ದು, ಆರನೇ ಬೆರಳನ್ನು ತೆಗೆಯಲು ಶಸ್ತ್ರಚಿಕಿತ್ಸೆ ನಿಗದಿಯಾಗಿತ್ತು. ಶಸ್ತ್ರಚಿಕಿತ್ಸೆಯ ಬಳಿಕ ಬಾಯಿಯೊಳಗೆ ಹತ್ತಿಯನ್ನು ತುಂಬಿಕೊಂಡಿದ್ದ ಬಾಲಕಿಯನ್ನು ಹೊರತಂದಾಗ ವೈದ್ಯರ ಯಡವಟ್ಟು ಬೆಳಕಿಗೆ ಬಂದಿದೆ. ಬಾಲಕಿಯ ಕೈಯಲ್ಲಿ ಆರನೇ ಬೆರಳು ಯಥಾಸ್ಥಿತಿಯಲ್ಲಿದ್ದು ವೈದ್ಯರು ನಾಲಿಗೆಗೆ ಶಸ್ತ್ರಚಿಕಿತ್ಸೆ ನಡೆಸಿದ್ದರು.

ಈ ಘಟನೆಯ ಕುರಿತು ತಕ್ಷಣ ತನಿಖೆ ನಡೆಸಿ ಸಮಗ್ರ ವರದಿಯನ್ನು ಸಲ್ಲಿಸುವಂತೆ ಕೇರಳದ ಆರೋಗ್ಯ ಸಚಿವೆ ವೀನಾ ವೈದ್ಯಕೀಯ ಶಿಕ್ಷಣ ನಿರ್ದೇಶಕರಿಗೆ ಆದೇಶಿಸಿದ್ದಾರೆ.

ಬಾಲಕಿಯು ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಘೋರ ವೈದ್ಯಕೀಯ ನಿರ್ಲಕ್ಷ್ಯಕ್ಕೆ ಕಾರಣರಾದವರ ವಿರುದ್ಧ ಕ್ರಮಕ್ಕೆ ಕೋರಿ ಪೊಲೀಸ್ ದೂರು ಸಲ್ಲಿಸಲು ಕುಟುಂಬವು ಸಜ್ಜಾಗಿದೆ. ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಇಂತಹ ಅನುಭವ ಬೇರೆ ಯಾರಿಗೂ ಆಗಬಾರದು. ಬಾಲಕಿಗೆ ನಾಲಿಗೆಯ ಯಾವುದೇ ಸಮಸ್ಯೆ ಇರಲಿಲ್ಲ ಎಂದು ಕುಟುಂಬ ಸದಸ್ಯರು ತಿಳಿಸಿದರು.

ಈ ಶಸ್ತ್ರಚಿಕಿತ್ಸೆಯಿಂದಾಗಿ ಬಾಲಕಿಯ ಮೇಲೆ ಯಾವುದೇ ಪ್ರತಿಕೂಲ ಪರಿಣಾಮಗಳಿಗೆ ಆಸ್ಪತ್ರೆಯ ಅಧಿಕಾರಿಗಳೇ ಹೊಣೆಯಾಗುತ್ತಾರೆ ಎಂದು ಕುಟುಂಬವು ಹೇಳಿದೆ. ಒಂದೇ ದಿನ ಇಬ್ಬರು ಮಕ್ಕಳಿಗೆ ಶಸ್ತ್ರಚಿಕಿತ್ಸೆ ನಿಗದಿಯಾಗಿದ್ದು ಈ ತಪ್ಪಿಗೆ ಕಾರಣವಾಗಿತ್ತು ಎಂದು ಆಸ್ಪತ್ರೆಯ ಅಧಿಕಾರಿಗಳು ಸಮಜಾಯಿಷಿ ನೀಡಿದ್ದಾರೆ. **(ವಾರ್ತಾಭಾರತಿ: 17–05–2024)**

============================================================

## ಅಬುಧಾಬಿಯಲ್ಲಿ ಬಿಯರ್ ಅಂಗಡಿ!

### ಮೊದಲ ಬಾರಿಗೆ ಮದ್ಯ ನೀತಿ ಪರಿಷ್ಕರಣೆ । ಮದ್ಯ ತಯಾರಿಕೆಗೆ ಒಪ್ಪಿಗೆ

**ಅಬುಧಾಬಿ:** ಇಸ್ಲಾಮಿಕ್ ರಾಷ್ಟ್ರಗಳಲ್ಲಿ ಮದ್ಯ ಕುರಿತು ಸಾಕಷ್ಟು ಕಟ್ಟುನಿಟ್ಟಾದ ನಿಯಮಗಳು ಜಾರಿಯಲ್ಲಿವೆ. ಇದಕ್ಕೆ ಯುಎಇ ಕೂಡ ಹೊರತಾಗಿಲ್ಲ. ಆ ಆದರೆ, ಈಗ ಕಾಲ ಬದಲಾಗಿದೆ. ಯುಎಇ ತನ್ನ ಮದ್ಯ ನೀತಿಯಲ್ಲಿ ಅಮೂಲಾಗ್ರ ಬದಲಾವಣೆಯನ್ನು ಮಾಡಿದ್ದು, ದೇಶದಲ್ಲೇ ಮದ್ಯ ತಯಾರಿಕೆಗೆ ಒಪ್ಪಿಗೆ ನೀಡಿದೆ. ಪರಿಣಾಮ, ಅಬುಧಾಬಿಯಲ್ಲಿ ಮೊದಲ ಚಾಡ್ ಮ್ಯಾಕ್‌ಫೀ ಬಿಯರ್ ಅಂಗಡಿಯನ್ನು ತೆರೆಯಲಾಗಿದೆ.

ಈ ಮೊದಲು ಮದ್ಯ ಮಾರಾಟಕ್ಕೆ ಅವಕಾಶವಿತ್ತಾದರೂ, ತಯಾರಿಸುವಂತಿರಲಿಲ್ಲ. ಆಗ ಚಾಡ್ ಮ್ಯಾಕ್‌ಫೀ ಅಮೆರಿಕದಲ್ಲಿ ತಯಾರಿಸಿ ಯುಎಇಗೆ ಆಮದು ಮಾಡಿಕೊಳ್ಳುತ್ತಿತ್ತು. ಆದರೆ ಪ್ರವಾಸಿಗರನ್ನು ಹೆಚ್ಚಿಸುವುದಕ್ಕಾಗಿ ಯುಎಇ ತನ್ನ ಒಟ್ಟು ಮದ್ಯ ನೀತಿಯನ್ನು ಪರಿಷ್ಕರಿಸಿದೆ.

ಇಷ್ಟಾಗಿಯೂ ಕುಡಿದು ವಾಹನ ಚಾಲನೆ ಮತ್ತು ಸಾರ್ವಜನಿಕ ಕುಡಿದು ನಶೆಯಲ್ಲಿ ತೂರಾಡುವುದಕ್ಕೆ ಸಂಬಂಧಿಸಿದಂತೆ ಈಗಲೂ ಕಠಿಣ ನಿಯಮಗಳು ಜಾರಿಯಲ್ಲಿವೆ.

2020ರ ಬಳಿಕ ಅಬುಧಾಬಿ ತನ್ನ ಮದ್ಯ ನೀತಿಗಳಲ್ಲಿ ಬದಲಾವಣೆಗಳನ್ನು ತರಲು ಶುರುಮಾಡಿತು. ಮದ್ಯ ಖರೀದಿಗೆ ಇದ್ದ ಅನುಮತಿ ವ್ಯವಸ್ಥೆಯನ್ನು ತೆಗೆದು ಹಾಕಿತು. **(ವಾರ್ತಾಭಾರತಿ: 18-05-2024)**

==========================================================================

## ಸ್ವಿಮ್‌ವೇರ್ ಫ್ಯಾಶನ್ ಶೋ: ಮೊದಲ ಬಾರಿಗೆ ಸೌದಿಯಿಂದ ಅನುಮತಿ !

**ಅಬುಧಾಬಿ:** ಇದೇ ಮೊಟ್ಟ ಮೊದಲ ಭಾರಿಗೆ ಸೌದಿ ಅರೇಬಿಯಾದಲ್ಲಿ ಸ್ವಿಮ್ಮಿಂಗ್‌ವೇರ್ ಫ್ಯಾಶನ್ ಶೋ ನಡೆದಿದ್ದು, ರೂಪದರ್ಶಿಗಳು ವಿವಿಧ ಪ್ರಕಾರದ ಸ್ವಿಮ್ ಸೂಟ್‌ಗಳನ್ನು ಧರಿಸಿ ಪೂಲ್ ಪಕ್ಕದಲ್ಲಿ ನಡೆದಿದ್ದಾರೆ. ಇಸ್ಲಾಮಿಕ್ ರಾಷ್ಟ್ರವಾದ ಸೌದಿಯಲ್ಲಿ ಇಂಥ ಫ್ಯಾಶನ್ ಶೋಗೆ ಅನುಮತಿಸಿರುವುದು ಇದೇ ಮೊದಲು. ಸೌದಿಯ ಪಶ್ಚಿಮ ಕರಾವಳಿಯಲ್ಲಿರುವ ಸೆಂಟ್ ರೇಗಿಸ್ ರೆಡ್ ಸೀ ರೆಸಾರ್ಟ್‌ನಲ್ಲಿ ರೆಡ್ ಸೀ ಫ್ಯಾಶನ್ ವೀಕ್‌ನ 2ನೇ ದಿನದಂದು ಸ್ವಿಮ್‌ವೇರ್ ಫ್ಯಾಶನ್ ಶೋ ನಡೆದಿದೆ. ಮೊರಾಕೋದ ಖ್ಯಾತ ವಸ್ತ್ರವಿನ್ಯಾಸಕಿ ಯಾಸ್ಮಿನ್ ಕನ್ಸಾಲ್ ಅವರ ವಿವಿಧ ಸ್ವಿಮ್‌ವೇರ್ ಸಂಗ್ರಹಗಳನ್ನು ರೂಪದರ್ಶಿಗಳು ಪ್ರದರ್ಶಿಸಿದ್ದಾರೆ. ಸೌದಿ-2030 ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಯ ಭಾಗವಾಗಿರುವ ರೆಡ್ ಸೀ ರೆಸಾರ್ಟ್‌ನಲ್ಲೇ ಈ ಫ್ಯಾಶನ್ ಶೋ ಆಯೋಜಿಸಿರುವುದು ವಿಶೇಷ. **(ಉದಯವಾಣಿ: 19-05-2024)**

==========================================================================

## ಭಾರತದ ಎರಡು 10ರೂ. ನೋಟುಗಳು 2.75 ಲಕ್ಷ ರೂ.ಗೆ ಹರಾಜು?

**ಲಂಡನ್:** 1918ರಲ್ಲಿ ಮುಳುಗಿದ ಹಡಗೊಂದರಲ್ಲಿ ದೊರೆತ 10 ರೂ. ಮೌಲ್ಯದ ಎರಡು ನೋಟುಗಳನ್ನು ಲಂಡನ್‌ನ ಹರಾಜು ಸಂಸ್ಥೆಯೊಂದು ಸದ್ಯದಲ್ಲೇ ಹರಾಜು ಹಾಕುತ್ತಿದೆ. ಮೇ 29ರಂದು ನಡೆಯುವ ನೂನನ್ಸ್ ಮೇಫೇರ್ ಹರಾಜಿನಲ್ಲಿ ವಿಶ್ವದ ವಿವಿಧ ಬ್ಯಾಂಕ್ ನೋಟುಗಳ ಹರಾಜು ನಡೆಯಲಿದ್ದು, ಭಾರತದ ಎರಡು 10 ರೂ. ನೋಟುಗಳಿಗೆ 2000 (2.11 ಲಕ್ಷ ರೂ.)ಗಳಿಂದ 2,600 ಗ್ರೇಟ್ ಬ್ರಿಟನ್ ಪೌಂಡ್ (2.75 ಲಕ್ಷ ರೂ.)ಗಳು ದೊರೆಯುವ ನಿರೀಕ್ಷೆ ಇದೆ. 1918ರಲ್ಲಿ ಬಾಂಬೆಯಿಂದ ಲಂಡನ್‌ಗೆ ತೆರಳುತ್ತಿದ್ದ ಹಡಗು, ಜರ್ಮನ್ ಯು ಬೋಟ್‌ನಿಂದ ಮುಳುಗಡೆಯಾಗಿತ್ತು. 5, 10ರೂ. ಮುಖಬೆಲೆಯ ಬಹಳಷ್ಟು ನೋಟುಗಳು ನೀರು ಪಾಲಾಗಿ, ಕೆಲವು ನೋಟುಗಳು ಮಾತ್ರ ಹಾಗೇ ಉಳಿದುಕೊಂಡಿದ್ದವು. ಈ 10 ರೂ. ನೋಟುಗಳ ಜೊತೆಗೆ ಬ್ರಿಟಿಷ್ ಆಳ್ವಿಕೆ ಕಾಲದ 100 ಹಾಗೂ 5 ರೂ. ನೋಟುಗಳನ್ನೂ ಹರಾಜು ಹಾಕಲಾಗುತ್ತಿದೆ. **(ಉದಯವಾಣಿ: 25-05-2024)**

==========================================================================

## ದೆವ್ವ ಬಿಡಿಸುವ ನೆಪ: ಬಾಲಕಿ ಮೇಲೆ, ಸಹೋದರ, ಮೌಲ್ವಿಯಿಂದ ಅತ್ಯಾಚಾರ

**ಚಿತ್ರದುರ್ಗ, ಜೂ. 3:** ಕುರಾನ್ ಪಠಿಸಲು ಮಸೀದಿಗೆ ಬರುತ್ತಿದ್ದ ಬಾಲಕಿಗೆ ದೆವ್ವ ಹಿಡಿದಿದೆ ಎಂದು ನಂಬಿಸಿ, ಆಕೆಗೆ ಲೈಂಗಿಕ ಕಿರುಕುಳ ನೀಡಿದ ನಗರದ ಮಸೀದಿಯೊಂದರ ಮೌಲ್ವಿ ಹಾಗೂ ಬಾಲಕಿಯ ಸಹೋದರನನ್ನು ಮಹಿಳಾ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರಪ್ರದೇಶ ಮೂಲದ ಮೌಲ್ವಿ ಅಬ್ದುಲ್ ರೆಹಮಾನ್ ಹಾಗೂ ಬಾಲಕಿಯ ಅಣ್ಣ ಬಂಧಿತರು. 17 ವರ್ಷದ ಬಾಲಕಿ ಮೂರು ವರ್ಷಗಳಿಂದ ಕುರಾನ್ ಪಠಿಸಲು ಮಸೀದಿಗೆ ಹೋಗುತ್ತಿದ್ದಳು. ಒಂದು ವರ್ಷದ ಹಿಂದೆ ಈ ಬಾಲಕಿಗೆ ಗಾಳಿ ಸೋಕಿದೆ, ನಿಮ್ಮ ಮನೆಯಲ್ಲಿ ದೈವಕಾರ್ಯ ಮಾಡಿಸಬೇಕು ಎಂದು ಬಾಲಕಿಯ ತಾಯಿಯನ್ನು ಮೌಲ್ವಿ ನಂಬಿಸಿದ್ದ. ಅದರಂತೆ ಪ್ರತಿ ವಾರ ಮನೆಗೆ ಹೋಗಿ ಧಾರ್ಮಿಕ ಕ್ರಿಯೆ ಮಾಡುವಾಗ ಬಾಲಕಿಯ ಮೈ-ಕೈ ಮುಟ್ಟಿ ಅಸಭ್ಯವಾಗಿ ವರ್ತಿಸಿದ್ದ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಅಲ್ಲದೆ, 6 ತಿಂಗಳ ಹಿಂದೆ ಬಾಲಕಿಯ ಅಣ್ಣ ಹಾಗೂ ಮೌಲ್ವಿಯು ಬಾಲಕಿಯನ್ನು ಕೊಠಡಿಗೆ ಕರೆದೊಯ್ದು ತಾಯಿಯನ್ನು ಹೊರಗೆ ಕಳುಹಿಸಿದ್ದರು. ದೆವ್ವಕ್ಕೆ ದೈಹಿಕ ಸುಖ ಕೊಟ್ಟರೆ ಶಾಂತಿಯಾಗಲಿದೆ ಎಂದು ಬಾಲಕಿಯ ಅಣ್ಣನನ್ನು ನಂಬಿಸಿ ಆತನಿಂದಲೇ ಅತ್ಯಾಚಾರ ಮಾಡಿಸಿದ್ದ ಮೌಲ್ವಿ ಅದನ್ನು ವೀಡಿಯೋ ಚಿತ್ರೀಕರಿಸಿಕೊಂಡಿದ್ದ. ಬಳಿಕ ತಾನೂ ಅತ್ಯಾಚಾರ ಎಸಗಿದ್ದ ಎಂದು ಬಾಲಕಿಯ ತಾಯಿ ಆರೋಪಿಸಿದ್ದಾರೆ. **(ಉದಯವಾಣಿ: 04-06-2024)**

==========================================================================

## ವಿಜಯಪುರ: ಸ್ನಾತಕೋತ್ತರ ಪರೀಕ್ಷೆ ಬರೆದ 83ರ ವೃದ್ಧ !

**ವಿಜಯಪುರ, ಜೂ. 7:** ಎಂಬತ್ತಮೂರು ವರ್ಷ ಪ್ರಾಯದ ವೃದ್ಧರೊಬ್ಬರು ಸಹಿತ ಮೂವರು ಹಿರಿಯ ನಾಗರಿಕರು ಸ್ನಾತಕೋತ್ತರ ಪರೀಕ್ಷೆ ಬರೆದು ಸುದ್ದಿಯಾಗಿದ್ದಾರೆ.

ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸಿ, 24 ವರ್ಷಗಳ ಹಿಂದೆಯೇ ಸೇವಾ ನಿವೃತ್ತಿ ಹೊಂದಿರುವ ಬಾಗಲಕೋಟೆ ಜಿಲ್ಲೆ ಇಳಕಲ್ ತಾಲೂಕಿನ ಗುಡೂರ ಮೂಲದ 83 ವರ್ಷದ ನಿಂಗಯ್ಯ, ವಿಜಯಪುರ ಜಿಲ್ಲೆ ಸಿಂದಗಿ ಮೂಲದ ನಿವೃತ್ತ ಉಪನ್ಯಾಸಕ ಪಿ.ಎಂ. ಮಡಿವಾಳ ಹಾಗೂ ಇನ್ನು 5 ವರ್ಷಗಳಲ್ಲಿ ಸೇವಾ ನಿವೃತ್ತಿ ಆಗುತ್ತಿರುವ ಶಿವಮೊಗ್ಗದ ಕಲಾ ಶಿಕ್ಷಕ ನಾಗನಗೌಡ ಪಾಟೀಲ್ ಅವರು ಶುಕ್ರವಾರ

ಮಧ್ಯಾಹ್ನ 2ರಿಂದ 5ರ ವರೆಗೆ ನಗರದ ಜೆಎಸ್ಎಸ್ ಕಾಲೇಜಿನ ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿವಿ ಕೇಂದ್ರದಲ್ಲಿ ಎಂ.ಎ. ಇಂಗ್ಲಿಷ್ ಪರೀಕ್ಷೆ ಬರೆದಿದ್ದಾರೆ. **(ಉದಯವಾಣಿ: 08–06–2024)**

==========================================================

## ಅತ್ಯಾಚಾರ ಪ್ರಕರಣಗಳಲ್ಲಿ ಗರ್ಭಪಾತಕ್ಕೆ ಯುಎಇ ಅನುಮತಿ

**ಅಬುಧಾಬಿ, ಜೂ. 21:** ಅತ್ಯಾಚಾರ ಮತ್ತು ರಕ್ತಸಂಬಂಧಿಗಳ ನಡುವಿನ ದೈಹಿಕ ಸಂಬಂಧದ ಪ್ರಕರಣಗಳಲ್ಲಿ ಗರ್ಭಪಾತಕ್ಕೆ ಅನುಮತಿ ನೀಡಲು ಯುನೈಟೆಡ್ ಅರಬ್ ಎಮಿರೇಟ್ಸ್ ನಿರ್ಧರಿಸಿದೆ. ವೈದ್ಯಕೀಯ ಹೊಣೆಗಾರಿಕೆ ಕಾನೂನಿಗೆ ಸಂಬಂಧಿಸಿದ 2024ರ ಸಂಪುಟ ನಿರ್ಣಯವು 'ಹೆಣ್ಣಿನ ಇಚ್ಛೆಗೆ ವಿರುದ್ಧವಾಗಿ ಅಥವಾ ಆಕೆಯ ಒಪ್ಪಿಗೆಯಿಲ್ಲದೆ ದೈಹಿಕ ಸಂಬಂಧದಲ್ಲಿ ಗರ್ಭವತಿಯಾಗಿದ್ದರೆ' ಗರ್ಭಪಾತಕ್ಕೆ ಅವಕಾಶ ನೀಡಿದೆ ಎಂದು ಯುಎಇಯ ಸರಕಾರಿ ಸ್ವಾಮ್ಯದ 'ದಿ ನ್ಯಾಷನಲ್' ಪತ್ರಿಕೆ ವರದಿ ಮಾಡಿದೆ. 'ಅತ್ಯಾಚಾರದ ಘಟನೆಯನ್ನು ತಕ್ಷಣ ಅಧಿಕಾರಿಗಳಿಗೆ ವರದಿ ಮಾಡಬೇಕು ಮತ್ತು ಪಬ್ಲಿಕ್ ಪ್ರಾಸಿಕ್ಯೂಷನ್‌ನ ವರದಿಯಿಂದ ಸಾಬೀತುಪಡಿಸಬೇಕು. ಗರ್ಭಾವಸ್ಥೆಯನ್ನು 120 ದಿನದೊಳಗೆ ಕೊನೆಗೊಳಿಸಬೇಕು ಮತ್ತು ಮಹಿಳೆಯ ಜೀವಕ್ಕೆ ಅಪಾಯವುಂಟುಮಾಡುವ ಯಾವುದೇ ವೈದ್ಯಕೀಯ ತೊಡಕುಗಳಿಂದ ಮುಕ್ತವಾಗಿರಬೇಕು' ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. **(ವಾರ್ತಾಭಾರತಿ: 22–06–2024)**

==========================================================

### ಪಾಕ್ ಸಂಸತ್‌ನಲ್ಲಿ ರಕ್ಷಣಾ ಸಚಿವರ ಹೇಳಿಕೆ

## ನಮ್ಮಲ್ಲಿ ಅಲ್ಪಸಂಖ್ಯಾಕರು ಸುರಕ್ಷಿತರಲ್ಲ!: ಪಾಕಿಸ್ಥಾನ

### * ಇದು ದೇಶಕ್ಕೆ ಮುಜುಗರದ ವಿಚಾರ: ಖ್ವಾಜಾ ಆಸಿಫ್

**ಇಸ್ಲಾಮಾಬಾದ್:** ಧರ್ಮದ ಹೆಸರಿನಲ್ಲಿ ಪಾಕಿಸ್ಥಾನದ ಅಲ್ಪಸಂಖ್ಯಾಕರು ಹಿಂಸೆಗೆ ಒಳಗಾಗಿದ್ದಾರೆ. ಅವರನ್ನು ರಕ್ಷಿಸುವಲ್ಲಿ ಸರಕಾರ ವಿಫಲವಾಗಿದೆ ಎಂದು ಪಾಕಿಸ್ಥಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಕಳವಳ ವ್ಯಕ್ತಪಡಿಸಿದ್ದಾರೆ. ಪಾಕಿಸ್ಥಾನದ ಸಂಸತ್‌ನಲ್ಲಿ ಮಾತನಾಡಿದ ಅವರು, ದಿನೇದಿನೆ ಅಲ್ಪಸಂಖ್ಯಾಕರನ್ನು ಹತ್ಯೆ ಮಾಡಲಾಗುತ್ತಿದೆ ಎಂದು ಹೇಳಿಕೊಂಡಿದ್ದಾರೆ. ಮುಸ್ಲಿಂ ಸಮುದಾಯದ ಸಣ್ಣ ಪಂಗಡಗಳೂ .ಸೇರಿದಂತೆ ಪಾಕಿಸ್ಥಾನದಲ್ಲಿ ಯಾವುದೇ ಅಲ್ಪಸಂಖ್ಯಾಕರು ಸುರಕ್ಷಿತವಾಗಿಲ್ಲ. ಇದು ದೇಶಕ್ಕೆ ಮುಜುಗರದ ವಿಚಾರವಾಗಿದೆ. ಸಂತ್ರಸ್ತರು ಧರ್ಮನಿಂದನೆ ಮಾಡದಿದ್ದರೂ, ಅವರ ಮೇಲೆ ಅಂಥ ಆರೋಪ ಹೊರಿಸಿ ವೈಯಕ್ತಿಕ ಕಾರಣಗಳ ಹಿನ್ನೆಲೆಯಲ್ಲಿ ಕೊಲ್ಲಲಾಗುತ್ತದೆ ಎಂದು ವಿಷಾದಿಸಿದ್ದಾರೆ. ಈ ಹಿನ್ನೆಲೆಯಲ್ಲಿ ದೇಶದಲ್ಲಿರುವ ಅಲ್ಪಸಂಖ್ಯಾತರ ರಕ್ಷಣೆಗೆ ಮಸೂದೆ ರೂಪಿಸಬೇಕಿದೆ ಎಂದಿದ್ದಾರೆ. ಆದರೆ ಸಚಿವರ ಪ್ರಸ್ತಾವಕ್ಕೆ ಪಾಕಿಸ್ಥಾನ್ ತೆಹ್ರಿಕ್–ಇ–ಇನ್ಸಾಫ್ ಪಕ್ಷ ವಿರೋಧಿಸಿದ ಕಾರಣ ಯಾವುದೇ ಮಸೂದೆ ರೂಪಿಸುವ ಕುರಿತು ಚರ್ಚೆ ನಡೆಸಲು ಸಾಧ್ಯವಾಗಲಿಲ್ಲ. ಪಾಕಿಸ್ಥಾನದಲ್ಲಿ ಇಸ್ಲಾಂನ ಅಹ್ಮದಿ ಪಂಗಡ, ಹಿಂದೂ, ಸಿಕ್ಖ್, ಕ್ರಿಶ್ಚಿಯನ್ನರು ಅಲ್ಪಸಂಖ್ಯಾಕರಾಗಿದ್ದಾರೆ.

**(ಉದಯವಾಣಿ: 25–06–2024)**

==========================================================

## ಕೆಲಸ ಕೊಡದೆ 20 ವರ್ಷ ಸಂಬಳ ಕೊಟ್ಟ ಕಂಪೆನಿ ವಿರುದ್ಧ ಮಹಿಳೆ ದೂರು !

**ಪ್ಯಾರಿಸ್:** ಯಾವುದೇ ಕೆಲಸ ಕೊಡದೆ 20 ವರ್ಷಗಳ ಕಾಲ ತನಗೆ ಸಂಬಳ ನೀಡಿದ ಕಂಪೆನಿ ವಿರುದ್ಧ ಮಹಿಳೆಯೊಬ್ಬರು ಪ್ರಕರಣ ದಾಖಲಿಸಿದ ವಿಚಿತ್ರ ಘಟನೆ ಫ್ರಾನ್ಸ್‌ನಲ್ಲಿ ನಡೆದಿದೆ. ಲಾರೆನ್ಸ್ ವ್ಯಾನ್ ವಾಸ್ಸೆನ್‌ಹೋವ್ ಆರೇಂಜ್ ಟೆಲಿಕಾಂ ಸಂಸ್ಥೆಯಲ್ಲಿ 1993ರಲ್ಲಿ ಕೆಲಸಕ್ಕೆ ಸೇರಿದ್ದರು. ಪಾರ್ಶ್ವವಾಯು, ಮೂರ್ಛೆ ರೋಗದಿಂದ ಬಳಲುತ್ತಿದ್ದ ಲಾರೆನ್ಸ್ 2002ರಲ್ಲಿ ವರ್ಗಾವಣೆಗೆ ಕೋರಿದ್ದರು. ಕಂಪೆನಿ ವರ್ಗಾವಣೆ ಮಾಡಿದ್ದರೂ, ಅವರಿಗೆ ಯಾವುದೇ ನಿರ್ದಿಷ್ಟ ಕೆಲಸ ನೀಡಿರಲಿಲ್ಲ. 2 ದಶಕ ಕೆಲಸ ಮಾಡದಿದ್ದರೂ ನಿರಂತರವಾಗಿ ಅವರಿಗೆ ಕಂಪೆನಿ ವೇತನ ನೀಡಿದೆ. ಈ ಪರಿಸ್ಥಿತಿಯಿಂದ ನಾನು ಒಂಟಿತನ ಹಾಗೂ ನೈತಿಕ ಶೋಷಣೆ ಅನುಭವಿಸಿದ್ದೇನೆ. ನನ್ನ ವೃತ್ತಿ ಬದುಕಿಗೆ ಧಕ್ಕೆಯಾಗಿದೆ ಎಂದು ಲಾರೆನ್ಸ್ ಕಂಪೆನಿ ವಿರುದ್ಧ ಆರೋಪಿಸಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿದ ಆರೇಂಜ್ ಕಂಪೆನಿ, ಲಾರೆನ್ಸ್ ಅವರ ವೈದ್ಯಕೀಯ ಸ್ಥಿತಿ ಪರಿಗಣಿಸಿ, ಅನುಕೂಲ ವಾತಾವರಣದಲ್ಲಿ ಕೆಲಸ ಮಾಡಲು ತಿಳಿಸಿದ್ದೆವು. ಅವರ ನಿರಂತರ ಅನಾರೋಗ್ಯ ರಜೆಯಿಂದ ಸಮಸ್ಯೆ ಸೃಷ್ಟಿಯಾಗಿದೆ ಎಂದು ತಿಳಿಸಿದೆ. **(ಉದಯವಾಣಿ: 24–06–2024)**

==========================================================

## ಅವಳಿ ಹೆಣ್ಣು ಶಿಶು ಜನನ: ಮಕ್ಕಳಿಬ್ಬರನ್ನೂ ಕೊಂದ ತಂದೆ !

**ಹೊಸದಿಲ್ಲಿ:** ಅವಳಿ ಹೆಣ್ಣು ಮಕ್ಕಳು ಹುಟ್ಟಿದ ಕಾರಣಕ್ಕೆ ಅಸಮಾಧಾನಗೊಂಡ ಮಗುವಿನ ತಂದೆ ಹಾಗೂ ಕುಟುಂಬಸ್ಥರು ಎರಡೂ ಶಿಶುಗಳನ್ನು ದಾರುಣವಾಗಿ ಕೊಂದಿರುವ ಘಟನೆ ಹೊಸದಿಲ್ಲಿಯಲ್ಲಿ ನಡೆದಿದೆ. ಗಂಡು ಮಗು ಬಯಸಿದ್ದ ಕುಟುಂಬಸ್ಥರು, ಅವಳಿ ಹೆಣ್ಣು ಮಕ್ಕಳು ಜನಿಸಿದ್ದನ್ನು ಸಹಿಸಿರಲಿಲ್ಲ. ಹಾಗಾಗಿ ತಾಯಿಗೂ ತಿಳಿಸದೆ ಶಿಶುಗಳನ್ನು ಕೊಂದಿದ್ದಾರೆ. ಮಕ್ಕಳ ಬಗ್ಗೆ ತಾಯಿ ವಿಚಾರಿಸಿದಾಗ, ಶಿಶುಗಳು ಅನಾರೋಗ್ಯದಿಂದ ಸತ್ತಿವೆ ಎಂದು ಸುಳ್ಳು ಹೇಳಿದ್ದಾರೆ. ಅನುಮಾನಗೊಂಡ ತಾಯಿ ಪೊಲೀಸರಿಗೆ ದೂರು ನೀಡಿದ್ದಾರೆ. ಬಳಿಕ ವಿಚಾರ ಬೆಳಕಿಗೆ ಬಂದಿದೆ. **(ಉದಯವಾಣಿ: 24–06–2024)**

### ಸರ್ವಾಧಿಕಾರಿ ಕಿಮ್ ಜಾಂಗ್ ಉನ್ ಅವಾಂತರ
## ದ.ಕೊರಿಯ ಹಾಡು ಕೇಳಿದ ಯುವಕನ ಶಿರಚ್ಛೇದ !
### * 70 ಹಾಡು, 3 ಸಿನೆಮಾ ನೋಡಿದ್ದ ಯುವಕ

**ಸಿಯೋಲ್:** ಕೆ–ಪಾಪ್ ಹಾಡು ಕೇಳಿದ ಅಪರಾಧಕ್ಕೆ ಉತ್ತರ ಕೊರಿಯಾದಲ್ಲಿ ಸಾರ್ವಜನಿಕವಾಗಿ 22 ವರ್ಷದ ಯುವಕನ ಶಿರಚ್ಛೇದ ಮಾಡಲಾಗಿದೆ ಎಂದು ದಕ್ಷಿಣ ಕೊರಿಯಾದ ಏಕೀಕರಣ ಸಚಿವಾಲಯ ಬಿಡುಗಡೆಗೊಳಿಸಿದ ಮಾನವ ಹಕ್ಕುಗಳ ವರದಿಯಲ್ಲಿ ಹೇಳಿದೆ.

ವರದಿಯ ಪ್ರಕಾರ, ದಕ್ಷಿಣ ಹ್ವಾಂಗೇ ಪ್ರಾಂತದ ಯುವಕನೊಬ್ಬ 70 ಕೊರಿಯನ್ ಹಾಡುಗಳು, 3 ಸಿನೆಮಾ ನೋಡಿದ್ದು ಹಾಗೂ ಹಂಚಿಕೊಂಡಿದ್ದಕ್ಕಾಗಿ 2022ರಲ್ಲಿ ಉತ್ತರ ಕೊರಿಯಾ ಆಡಳಿತ ಆತನ ಶಿರಚ್ಛೇದ ಮಾಡಿದೆ.

ಉತ್ತರ ಕೊರಿಯಾದಲ್ಲಿ 2020ರಲ್ಲಿ ಜಾರಿಗೆ ತರಲಾದ ಪ್ರತಿಗಾಮಿ ಸಿದ್ಧಾಂತ ಹಾಗೂ ಸಂಸ್ಕೃತಿ ಕಾನೂನನ್ನು ಯುವಕ ಉಲ್ಲಂಘಿಸಿದ್ದಾನೆ ಎಂದು ಈ ಶಿಕ್ಷೆ ನೀಡಲಾಗಿದೆ. ಈ ಕಾನೂನಿನ ಪ್ರಕಾರ ದಕ್ಷಿಣ ಕೊರಿಯಾದ ಪಾಪ್ ಸಂಸ್ಕೃತಿಯನ್ನು ಉತ್ತರ ಕೊರಿಯಾ ನಿರ್ಬಂಧಿಸಿದೆ. ಪಾಶ್ಚಾತ್ಯರ ಭ್ರಷ್ಟ ಸಂಸ್ಕೃತಿಯಿಂದ ಉತ್ತರ ಕೊರಿಯನ್ನರನ್ನು ರಕ್ಷಿಸುವ ಅಭಿಯಾನದ ಭಾಗವಾಗಿ ಕಾನೂನನ್ನು ತರಲಾಗಿದೆ.

ಕೆ–ಪಾಪ್, ಕೆ–ಡ್ರಾಮಗಳು ದಕ್ಷಿಣ ಕೊರಿಯಾದ ಮನೋರಂಜನ ಕ್ಷೇತ್ರದ ಭಾಗವಾಗಿದ್ದು, ಇವು ಇತ್ತೀಚಿನ ವರ್ಷಗಳಲ್ಲಿ ಇಡೀ ವಿಶ್ವವನ್ನು ತನ್ನತ್ತ ಸೆಳೆದಿದೆ. **(ಉದಯವಾಣಿ: 01–07–2024)**

==========================================

### ಕೊರಿಯಾ ರೋಬೊ ಸಾವು ವಿಶ್ವದ ಮೊದಲ ಕೇಸ್
## ಕೆಲಸದ ಒತ್ತಡಕ್ಕೆ ಬೇಸತ್ತು ರೋಬೋಟ್ ಆತ್ಮಹತ್ಯೆ !

**ಸಿಯೋಲ್:** ಉದ್ಯೋಗ ಕ್ಷೇತ್ರದಲ್ಲಿ ಒತ್ತಡದಿಂದ ಆತ್ಮಹತ್ಯೆ ಮಾಡಿಕೊಂಡಿರುವ ಅನೇಕ ವರದಿಗಳು ಆಗಿವೆ. ಆದರೆ ದಕ್ಷಿಣ ಕೊರಿಯಾದಲ್ಲಿ ವಿಚಿತ್ರವೆಂಬಂತೆ ಕೆಲಸದ ಒತ್ತಡದಿಂದ ರೋಬೋಟ್ ಒಂದು ಆತ್ಮಹತ್ಯೆ ಮಾಡಿ ಕೊಂಡಿದೆ. ಸಾಕಷ್ಟು ಚರ್ಚೆಗೆ ಕಾರಣವಾಗಿದೆ. ದ.ಕೊರಿಯಾದ ಗುಮಿ ನಗರ ಪಾಲಿಕೆ ಕಚೇರಿಯಲ್ಲಿ ಸೇವೆಯಲ್ಲಿ ತೊಡಗಿಕೊಂಡಿದ್ದ ರೋಬೋಟ್, ಕಚೇರಿ ಮೆಟ್ಟಿಲುಗಳಿಂದ ಜಿಗಿದಿದೆ. ಪರಿಣಾಮ ಅದರ ಭಾಗಗಳು ನಾಶವಾಗಿವೆ. ಬಿಡಿ ಭಾಗಗಳನ್ನು ಸಂಗ್ರಹಿಸಲಾಗಿದ್ದು, ಘಟನೆ ಹಿಂದಿನ ಕಾರಣವನ್ನು ಪರಿಶೀಲಿಸಲಾಗುವುದು ಎಂದು ರೋಬೋಟ್ ಕಂಪೆನಿ ತಿಳಿಸಿದೆ.

**ಬಹುಮುಖಿ ರೋಬೋಟ್:** ಬೇರ್ ರೋಬೋಟಿಕ್ಸ್ ಕಂಪೆನಿ ಅಭಿವೃದ್ಧಿ ಪಡಿಸಿದ ಈ ರೋಬೋಟ್ 2023ರಿಂದ ಗುಮಿ ನಗರ ಪಾಲಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಕಡತಗಳ ವಿತರಣೆ, ನಗರದ ಪ್ರಚಾರ, ಅಗತ್ಯ ಮಾಹಿತಿಗಳ ಪೂರೈಕೆ ಸೇರಿ ಬಹುಮುಖಿಯಾಗಿ ಕೆಲಸ ಮಾಡುತ್ತಿತ್ತು. ರೋಬೋಟ್ ಆತ್ಮಹತ್ಯೆ ದ.ಕೊರಿಯಾದಲ್ಲೇ ಮೊದಲ ಘಟನೆಯಾಗಿದೆ. ಜಾಲತಾಣಗಳಲ್ಲಿ ರೋಬೋಟ್ ಬಗ್ಗೆ ನೆಟ್ಟಿಗರಿಂದ ವಿಷಾದ, ಅನುಕಂಪದ ಮಾತುಗಳು ಕೇಳಿಬಂದಿವೆ. **(ಉದಯವಾಣಿ: 05–07–2024)**

==========================================

## ಆಡಿ ಕಾರಿಗಿಂತಲೂ ದುಬಾರಿ ಈ ಕೀಟ: ಬೆಲೆ 75 ಲಕ್ಷ ರೂ.!

**ಹೊಸದಿಲ್ಲಿ:** ಐಷಾರಾಮಿ ಆಡಿ ಕಾರಿನ ಬೆಲೆಗಿಂತಲೂ ಹೆಚ್ಚು ಮೌಲ್ಯ ಹೊಂದಿರುವ 'ಸ್ಟ್ಯಾಗ್ ಬೀಟಲ್' ವಿಶ್ವದ ಅತೀ ದುಬಾರಿ ಹುಳ ಎಂದು ಖ್ಯಾತಿ ಪಡೆದಿದೆ. ಈ ಹುಳವನ್ನು ಇರಿಸಿಕೊಳ್ಳುವುದು ಅದೃಷ್ಟ ಎಂದು ನಂಬಲಾಗಿದ್ದು, ಅದೇ ಕಾರಣದಿಂದ ಈ ಹುಳಕ್ಕೆ ಇಷ್ಟು ಬೇಡಿಕೆಯಿದೆ. 1 ಕೀಟಕ್ಕೆ 75 ಲಕ್ಷ ರೂ. ಬೆಲೆ ಇದೆ. ಅರಣ್ಯ ಪರಿಸರ ವ್ಯವಸ್ಥೆಯಲ್ಲಿ ಗಮನಾರ್ಹವಾಗಿ 'ಸಪ್ರೋಕ್ಸಿಲಿಕ್' ಜೋಡಣೆಯನ್ನು ಈ ಸ್ಟ್ಯಾಗ್ ಬೀಟಲ್ ಪ್ರತಿನಿಧಿಸುತ್ತವೆ ಎಂದು ಸೈಂಟಿಫಿಕ್ ಡೇಟಾ ಜರ್ನಲ್‌ನ ಇತ್ತೀಚಿನ ಅಧ್ಯಯನ ಹೇಳಿದೆ.

**(ಉದಯವಾಣಿ: 08–07–2024)**

==========================================

## ಬುದ್ಧಿ ಹೇಳಿದ್ದಕ್ಕೆ ಶಿಕ್ಷಕನನ್ನೇ ಇರಿದು ಕೊಂದ ವಿದ್ಯಾರ್ಥಿ!

**ಗುವಾಹಾಟಿ:** ಸರಿಯಾಗಿ ಅಭ್ಯಾಸ ಮಾಡುತ್ತಿಲ್ಲವೆಂಬ ಕಾರಣಕ್ಕೆ ಶಿಕ್ಷಕರೊಬ್ಬರು ವಿದ್ಯಾರ್ಥಿಗೆ ಬೈದಿದ್ದು, ಇದರಿಂದ ಕೋಪಗೊಂಡ ವಿದ್ಯಾರ್ಥಿ ಶಿಕ್ಷಕನಿಗೆ ಚಾಕುನಿಂದ ಇರಿದು ಕೊಂದಿರುವ ಘಟನೆ ಅಸ್ಸಾಂನ ಶಿವಸಾಗರ ಜಿಲ್ಲೆಯಲ್ಲಿ ನಡೆದಿದೆ. ರಾಜೇಶ್ ಬೆಜ್ವಾಡಾ ಖಾಸಗಿ ಶಾಲೆಯಲ್ಲಿ ಕೆಮೆಸ್ಟ್ರಿ ಶಿಕ್ಷಕರಾಗಿದ್ದರು. 11ನೇ ತರಗತಿ ವಿದ್ಯಾರ್ಥಿ ಸರಿಯಾಗಿ ಅಭ್ಯಾಸ ಮಾಡಿರದ ಕಾರಣ ಅವನಿಗೆ ಬೈದಿದ್ದು, ಪೋಷಕರನ್ನು ಕರೆತರುವಂತೆ ರಾಜೇಶ್ ಹೇಳಿದ್ದರು. ಸಿಟ್ಟಾದ ವಿದ್ಯಾರ್ಥಿ ಮರುದಿನ ತರಗತಿಯಲ್ಲಿ ರಾಜೇಶ್ ಮೇಲೆ ಏಕಾಏಕಿ ಎರಗಿ ಚಾಕುವಿನಿಂದ ಹಲವು ಬಾರಿ ಇರಿದು ಕೊಂದಿದ್ದಾನೆ. **(ಉದಯವಾಣಿ: 08–07–2024)**

==========================================

## ದಿಲ್ಲಿ 0001 ಕಾರ್ ನಂಬರ್ ಪ್ಲೇಟ್ ₹23.4 ಲಕ್ಷಕ್ಕೆ ಹರಾಜು!

**ಹೊಸದಿಲ್ಲಿ:** ಇತ್ತೀಚೆಗಿನ ವರ್ಷಗಳಲ್ಲಿ ಕಾರುಗಳಿಗೆ ವಿಶಿಷ್ಟ ರೀತಿಯ ಫ್ಯಾನ್ಸಿ ನಂಬರ್ ಪ್ಲೇಟ್‌ಗಳನ್ನು ಹೊಂದುವ ಕ್ರೇಜ್ ಹೆಚ್ಚುತ್ತಿದೆ. ಇದಕ್ಕೆ ನಿದರ್ಶನವೆಂಬಂತೆ ದಿಲ್ಲಿಯಲ್ಲಿ 0001 ಫ್ಯಾನ್ಸಿ ನಂಬರ್‌ನ ಲೈಸೆನ್ಸ್ ಪ್ಲೇಟ್ ಬರೋಬ್ಬರಿ 23.4 ಲಕ್ಷ ರೂ.ಗಳಿಗೆ ಮಾರಾಟವಾಗಿದೆ!

ದಿಲ್ಲಿ ಸಾರಿಗೆ ಇಲಾಖೆ ಪ್ರಕಾರ ಬಹು ಬೇಡಿಕೆಯಲ್ಲಿದ್ದ 0001 ಫ್ಯಾನ್ಸಿ ನಂಬರ್ ಪ್ಲೇಟ್ ಮಾರ್ಚ್‌ನಲ್ಲಿ 23.4 ಲಕ್ಷ ರೂ.ಗಳಿಗೆ ಮಾರಾಟವಾಗಿದೆ. ಪ್ರತೀ ತಿಂಗಳು ಈ ರೀತಿ ಫ್ಯಾನ್ಸಿ ನಂಬರ್ ಪ್ಲೇಟ್‌ಗಳ ಹರಾಜು ನಡೆಯುತ್ತಿದೆ. ಈ ವರ್ಷ ಅತೀಹೆಚ್ಚು ಬೆಲೆಗೆ ಮಾರಾಟವಾದ ನಂಬರ್ ಇದು. **(ಉದಯವಾಣಿ: 10–07–2024)**

==========================================================================

## ಮದ್ವೆ ಇನ್ವಿಟೇಶನ್ ಬೆಲೆ ಭಾರತದ ತಲಾದಾಯಕ್ಕಿಂತ 5 ಪಟ್ಟು ಹೆಚ್ಚು!

ಅನಂತ್ ಅಂಬಾನಿ ಮತ್ತು ರಾಧಿಕ ಮರ್ಚೆಂಟ್ ವಿವಾಹಕ್ಕೆ ಆಹ್ವಾನ ನೀಡಲು ಮುಕೇಶ್ ಅಂಬಾನಿ ಅವರು ಮಾಡಿಸಿರುವ ಆಮಂತ್ರಣ ಪತ್ರಿಕೆಯ ಬೆಲೆ ಭಾರತೀಯನ ತಲಾದಾಯಕ್ಕಿಂತ 5 ಪಟ್ಟು ಹೆಚ್ಚು ಮೌಲ್ಯದ್ದಾಗಿದೆ. ಒಂದು ಆಮಂತ್ರಣ ಪತ್ರಿಕೆಯ ಮೌಲ್ಯ ಸುಮಾರು 6–7 ಲಕ್ಷ ರೂ.ನಷ್ಟಿದ್ದು, ಭಾರತೀಯರ ತಲಾದಾಯ 1.5 ಲಕ್ಷ ರೂ.ನಷ್ಟಿದೆ. ಭಾರತದಲ್ಲಿನ ಉದ್ಯಮಗಳಲ್ಲಿ ಪಾವತಿಸಲಾಗುವ ಸರಾಸರಿ ವೇತನ 9.45 ಲಕ್ಷ ರೂ.ನಷ್ಟಿದೆ. **(ಉದಯವಾಣಿ: 11–07–2024)**

==========================================================================

## ಆಸ್ಟ್ರೇಲಿಯಾ ಕೋರ್ಟ್ ಆದೇಶ
## ನಾಯಿಗಳ ರೇಪ್: ವಿಜ್ಞಾನಿಗೆ 249 ವರ್ಷ ಜೈಲು ಶಿಕ್ಷೆ?
### * ಕಕ್ಷಿದಾರನ ಮಾನಸಿಕ ಸ್ಥಿತಿ ಸರಿ ಇಲ್ಲ: ವಕೀಲರು

**ಹೊಸದಿಲ್ಲಿ:** ಸುಮಾರು 60ಕ್ಕೂ ಹೆಚ್ಚು ನಾಯಿಗಳ ಮೇಲೆ ಅತ್ಯಾಚಾರ ಎಸಗಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ರಿಟನ್ನಿನ ಪ್ರಾಣಿಶಾಸ್ತ್ರಜ್ಞರೊಬ್ಬರಿಗೆ ಆಸ್ಟ್ರೇಲಿಯಾದ ನ್ಯಾಯಾಲಯವೊಂದು 249 ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಆ್ಯಡಂ ಬ್ರಿಟ್ಟನ್ ಕಳೆದ ವರ್ಷ ತಪ್ಪೊಪ್ಪಿಕೊಂಡಿದ್ದ. ಇದೀಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬ್ರಿಟ್ಟನ್‌ನ ವಕೀಲ ಹೊಸ ಅರ್ಜಿಯನ್ನು ಸಲ್ಲಿಕೆ ಮಾಡಿದ್ದು, ಪ್ರಕರಣದ ವಿಚಾರಣೆಯನ್ನು ಆಗಸ್ಟ್‌ಗೆ ಮುಂದೂಡಲಾಗಿದೆ.

ಬ್ರಿಟ್ಟನ್‌ನ ಮಾನಸಿಕ ಸ್ಥಿತಿಗೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಕೆ ಮಾಡಿರುವ ಆತನ ವಕೀಲ, ಮನಶಾಸ್ತ್ರಜ್ಞರ ಬಳಿ ಬ್ರಿಟ್ಟನ್ 30 ಗಂಟೆಗಳ ಕಾಲ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾನೆ. ಅವನ ಮಾನಸಿಕ ಸ್ಥಿತಿ ಸರಿಯಿಲ್ಲ. ಹೀಗಾಗಿ ಮತ್ತೊಮ್ಮೆ ಶಿಕ್ಷೆಯ ಬಗ್ಗೆ ಚಿಂತನೆ ನಡೆಸಬೇಕು ಎಂದು ಅವರು ಕೋರಿದ್ದಾರೆ.

**ಏನಿದು ಪ್ರಕರಣ?:** ಸುಮಾರು 60ಕ್ಕೂ ಹೆಚ್ಚು ನಾಯಿಗಳಿಗೆ ಹಿಂಸೆ ಮಾಡಿರುವುದಲ್ಲದೇ, ಅವುಗಳನ್ನು ಕೊಲೆ ಮಾಡಿದ್ದಾನೆ. ಅಲ್ಲದೇ ಕೊಲೆ ಮಾಡುತ್ತಿರುವುದನ್ನು ವೀಡಿಯೋ ಮಾಡಿಟ್ಟುಕೊಂಡಿದ್ದಾನೆ ಎಂಬ ಆರೋಪಗಳನ್ನು ಬ್ರಿಟ್ಟನ್ ಮೇಲೆ ಹೊರಿಸಲಾಗಿದೆ.

**(ಉದಯವಾಣಿ: 15–07–2024)**

==========================================================================

## 2,216 ಹುದ್ದೆಗಳಿಗೆ 25,000ಕ್ಕೂ ಹೆಚ್ಚು ಜನ ಲಗ್ಗೆ
## ಏರ್‌ಪೋರ್ಟ್ ಲೋಡರ್ ಹುದ್ದೆಗೆ ನೂಕುನುಗ್ಗಲು!
### * 25 ಸಾವಿರ ರೂ. ವೇತನಕ್ಕೆ ಪದವೀಧರರಿಂದಲೂ ಅರ್ಜಿ

ಮುಂಬಯಿ: ತಿಂಗಳಿಗೆ 25 ಸಾವಿರ ರೂ. ವೇತನವಿರುವ ಏರ್‌ಪೋರ್ಟ್ ಲೋಡರ್ ಕೆಲಸಕ್ಕಾಗಿ ಬರೋಬ್ಬರಿ 25 ಸಾವಿರಕ್ಕೂ ಹೆಚ್ಚು ಆಕಾಂಕ್ಷಿಗಳು ಮುಗಿಬಿದ್ದ ಘಟನೆ ಮುಂಬಯಿಯಲ್ಲಿ ನಡೆದಿದೆ. ಹೀಗಾಗಿ ಅಲ್ಲಿ ಕಾಲ್ತುಳಿತದ ಪರಿಸ್ಥಿತಿ ನಿರ್ಮಾಣವಾಗಿತ್ತು. ಏರ್ ಇಂಡಿಯಾ ಏರ್‌ಪೋರ್ಟ್ ಸರ್ವಿಸಸ್ ಲಿಮಿಟೆಡ್ 2,216 ಏರ್‌ಪೋರ್ಟ್ ಲೋಡರ್ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನ ಮಾಡಿತ್ತು. ಅದಕ್ಕಾಗಿ ಎಂಕಾಂ, ಬಿಎ, ಬಿಬಿಎ ಪದವೀಧರರು ಕೂಡ 400–500 ಕಿ.ಮೀ. ದೂರದಿಂದ ಮುಂಬಯಿಗೆ ಧಾವಿಸಿದ್ದರು. 25 ಸಾವಿರಕ್ಕೂ ಅಧಿಕ ಮಂದಿ ಏಕಕಾಲಕ್ಕೆ ಬಂದ ಕಾರಣ, ಪರಿಸ್ಥಿತಿ ಕೈಮೀರುವಂತಾಯಿತು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಉದ್ಯೋಗಾಕಾಂಕ್ಷಿಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸಂಸ್ಥೆಯ ಅಧಿಕಾರಿಗಳು ನಡೆಸುವ ವಿವಿಧ ಪ್ರಯತ್ನಗಳು ಈಗ ಜಾಲತಾಣಗಳಲ್ಲಿ ವೈರಲ್ ಆಗಿವೆ. ವಿಮಾನದಲ್ಲಿನ ಲಗೇಜ್‌ಗಳನ್ನು ಲೋಡ್ ಮಾಡುವ ಮತ್ತು ಅನ್‌ಲೋಡ್ ಮಾಡುವ, ಬ್ಯಾಗೇಜ್ ಬೆಲ್ಟ್ ಹಾಗೂ ರ್‍ಯಾಂಪ್ ಟ್ರ್ಯಾಕ್ಟರ್‌ಗಳನ್ನು ನಿಭಾಯಿಸುವ ಕೆಲಸವನ್ನು ಏರ್‌ಪೋರ್ಟ್ ಲೋಡರ್‌ಗಳು ಮಾಡುತ್ತಾರೆ. ಪ್ರತೀ ವಿಮಾನಕ್ಕೂ ಇಂಥ ಕನಿಷ್ಠ 5 ಲೋಡರ್‌ಗಳು ಬೇಕಾಗುತ್ತಾರೆ. (ಉದಯವಾಣಿ: 18–07–2024)

==========================================================================

**“ದೇಶಪ್ರೇಮ (ಧಾರ್ಮಿಕ) ವಿಶ್ವಾಸದ ಅಂಶವಾಗಿದೆ.”**

**– ಹಝ್ರತ್ ಮುಹಮ್ಮದ್ ಪೈಗಂಬರ್(ಸ)**

## ಪ್ರತಿಭೆಗಳು



**ಮಂಗಳೂರು** ಜಮಾಅತಿನ ಸಿತಾರ ಶೆರೀನ್ (ಕಣ್ಣೂರಿನ ಮುಬಾರಕ್ ಅಹ್ಮದ್ ಸಾಹಿಬ್ ಮತ್ತು ದೇಲಂಪಾಡಿಯ ಹಾಜಿರ ಸಾಹಿಬ ದಂಪತಿಯ ಪುತ್ರಿ) ಮಂಗಳೂರು ವಿಶ್ವವಿದ್ಯಾನಿಲಯದ 2021 – 23 ಸಾಲಿನ ಸ್ನಾತಕೋತ್ತರ ಪದವಿ ಪರೀಕ್ಷೆಯಲ್ಲಿ ಸಮಾಜ ಕಾರ್ಯ ವಿಭಾಗದಲ್ಲಿ (MSW) 8.58 ಸಿಜಿಪಿಎಯೊಂದಿಗೆ ಪ್ರಥಮ ರ್‍ಯಾಂಕ್ ಪಡೆದಿದ್ದಾಳೆ. (ಮಾಶಾ ಅಲ್ಲಾಹ್).



**ಪಯಂಗಾಡಿ** ಜಮಾಅತಿನ ಶಫೀಕ್ ಅಹ್ಮದ್ ಸಾಹಿಬ್ ಮತ್ತು ಫಾತಿಮ ಝುಹ್ರಾ ಸಾಹಿಬ ದಂಪತಿಯ ಪುತ್ರಿ ಶಹಾಮಾ ಪರ್ವೀನ್ ("ಯುಗರಶ್ಮಿ" ಸಂಪಾದಕರ ಮೊಮ್ಮಗಳು) ಪ್ಲಸ್2 ಸಾಯನ್ಸ್ ಪರೀಕ್ಷೆಯಲ್ಲಿ 99.66% ಅಂಕ ಪಡೆದು ತೇರ್ಗಡೆ ಹೊಂದಿದ್ದಾಳೆ. (ಮಾಶಾ ಅಲ್ಲಾಹ್). ಅವಳು GHSS ಮಾಡಾಯಿ ಸ್ಕೂಲಿನ ವಿದ್ಯಾರ್ಥಿನಿಯಾಗಿದ್ದಾಳೆ.



**ಮಂಜೇಶ್ವರ** ಜಮಾಅತಿನ ಎಂ.ಪಿ. ಮೂಸಾ ಸಾಹಿಬ್ ಮತ್ತು ಫಹ್‌ಮಿದ ಸಾಹಿಬ ದಂಪತಿಯ ಪುತ್ರಿ ಎಂ.ಪಿ. ಮಲೀಹಾ ಫಾತಿಮ ಪ್ಲಸ್2 ಪರೀಕ್ಷೆಯಲ್ಲಿ 98.8% (ಎಲ್ಲ ವಿಷಯಗಳಲ್ಲಿ A+) ಅಂಕ ಪಡೆದು ತೇರ್ಗಡೆ ಹೊಂದಿದ್ದಾಳೆ. (ಮಾಶಾ ಅಲ್ಲಾಹ್). ಅವಳು ಕುಂಜತ್ತೂರಿನ GVHS ಸ್ಕೂಲಿನ ವಿದ್ಯಾರ್ಥಿನಿಯಾಗಿದ್ದಾಳೆ.



**ಪಯಂಗಾಡಿ** ಜಮಾಅತಿನ ಶಫೀಕ್ ಅಹ್ಮದ್ ಸಾಹಿಬ್ ಮತ್ತು ಫಾತಿಮ ಝುಹ್ರಾ ಸಾಹಿಬ ದಂಪತಿಯ ಪುತ್ರಿ ಅಮ್ನಾ ಶೆರೀನ್ ("ಯುಗರಶ್ಮಿ" ಸಂಪಾದಕರ ಮೊಮ್ಮಗಳು) SSLC ಪರೀಕ್ಷೆಯಲ್ಲಿ ಎಲ್ಲ ವಿಷಯಗಳಲ್ಲಿ A+ ಪಡೆದು ತೇರ್ಗಡೆ ಹೊಂದಿದ್ದಾಳೆ. (ಮಾಶಾ ಅಲ್ಲಾಹ್). ಅವಳು GHSS ಮಾಡಾಯಿ ಸ್ಕೂಲಿನ ವಿದ್ಯಾರ್ಥಿಯಾಗಿದ್ದಾಳೆ.



**ಕೊಯಂಬತ್ತೂರ್** ಜಮಾಅತಿನ ಝುಬೈರ್ ಅಹ್ಮದ್ ಸಾಹಿಬ್ ಮತ್ತು ಹಾಜಿರಾ ಸಾದಿಖ ಸಾಹಿಬ ದಂಪತಿಯ ಪುತ್ರ ಅಬ್ದುಲ್ ಹಯ್ಯ್ ("ಯುಗರಶ್ಮಿ" ಸಂಪಾದಕರ ಮೊಮ್ಮಗ) SSLC ಪರೀಕ್ಷೆಯಲ್ಲಿ 84% ಅಂಕ ಪಡೆದು ತೇರ್ಗಡೆ ಹೊಂದಿದ್ದಾನೆ. (ಮಾಶಾ ಅಲ್ಲಾಹ್). ಅವನು ಕೊಯಂಬತ್ತೂರ್‌ನ ವಿದ್ಯಾನಿಕೇತನ್ ಪಬ್ಲಿಕ್ ಸ್ಕೂಲಿನ ವಿದ್ಯಾರ್ಥಿಯಾಗಿದ್ದಾನೆ.



**ಕೂಡಾಳಿ** ಜಮಾಅತಿನ ಅನಸ್ ಅಹ್ಮದ್ ಸಾಹಿಬ್ ಮತ್ತು ಖಾನಿತ ಸಿದ್ದೀಖ ಸಾಹಿಬ ದಂಪತಿಯ ಪುತ್ರ ಮುಹಮ್ಮದ್ ಐಹಾನ್ ಇಬ್ರಾಹೀಂ ("ಯುಗರಶ್ಮಿ" ಸಂಪಾದಕರ ಮೊಮ್ಮಗ) ಪ್ಲಸ್2 ಪರೀಕ್ಷೆಯಲ್ಲಿ 83% ಅಂಕ ಪಡೆದು ತೇರ್ಗಡೆ ಹೊಂದಿದ್ದಾನೆ. (ಮಾಶಾ ಅಲ್ಲಾಹ್). ಅವನು KPC HSS ಪಟ್ಟನ್ನೂರ್ ಸ್ಕೂಲಿನ ವಿದ್ಯಾರ್ಥಿಯಾಗಿದ್ದಾನೆ.

## ಸಂಪಾದಕರಿಗೆ ಪತ್ರ

ಮಾನ್ಯರೇ,

"ಮುಹಮ್ಮದ್ ಪೈಗಂಬರರ ನುಡಿಮುತ್ತುಗಳು" ಇಷ್ಟವಾದವು. "ಹಝ್ರತ್ ಮುಹಮ್ಮದ್ ಪೈಗಂಬರರ ಜೀವನ ಚರಿತ್ರೆ" ಲೇಖನ ಉತ್ತಮವಾಗಿತ್ತು. ಸಂಗ್ರಹಯೋಗ್ಯವಾಗಿತ್ತು. ಲೇಖಕಿ ಜಹೀರ ಅನಸ್, ಬೆಂಗಳೂರು ಇವರಿಗೆ ಅಭಿನಂದನೆಗಳನ್ನು ತಿಳಿಸಿರಿ. ಮುಖಪುಟ ಸುಂದರವಾಗಿದೆ.


**– ಎಂ. ಎಸ್. ಹೀರೇಮಠ, ಬಸವನ ಬಾಗೇವಾಡಿ.**


**LOVE FOR ALL - HATRED FOR NONE**


# ಅಹ್ಮದಿಯಾ ಜಮಾಅತಿನ ಪ್ರಗತಿ – 2024


- ♦ ಈ ವರ್ಷ ತೈವಾನ್‌ನಲ್ಲಿ ಅಹ್ಮದಿಯಾ ಜಮಾಅತ್ ಸ್ಥಾಪಿಸಲ್ಪಟ್ಟಿದೆ.
- ♦ ಈ ಒಂದು ವರ್ಷದಲ್ಲಿ 106 ಹೊಸ ಮಸೀದಿಗಳು ನಿರ್ಮಿಸಲ್ಪಟ್ಟಿವೆ.
- ♦ 117 ಪ್ರಚಾರ ಕೇಂದ್ರಗಳು ತೆರೆಯಲ್ಪಟ್ಟಿವೆ.
- ♦ 482 ಜನಾಂಗಗಳಿಗೆ ಸೇರಿದ 2,38,561 ಮಂದಿ ಅಹ್ಮದಿಯತ್ ಸ್ವೀಕರಿಸಿದ್ದಾರೆ.
- ♦ ನೈಜೀರಿಯಾ, ಗಿನಿಯಾ ಕೊನಕ್ರಿ ಮತ್ತು ಕಾಂಗೋ ಬ್ರಝ್ಝಾ ವಿಲ್ಲೆ ಈ ಮೂರು ದೇಶಗಳಲ್ಲಿ ಅತಿ ಹೆಚ್ಚು ಮಂದಿ ಸೇರಿದ್ದಾರೆ.
- ♦ ಇಷ್ಟರ ವರೆಗೆ ಹೀಬ್ರೂ ಭಾಷೆ ಸಹಿತ 78 ವಿವಿಧ ಭಾಷೆಗಳಲ್ಲಿ ಖುರ್‌ಆನ್ ಭಾಷಾಂತರಿಸಲ್ಪಟ್ಟಿದೆ.
- ♦ ವಕ್ಫೆ ನೌ ಯೋಜನೆಯಲ್ಲಿ 48,582 ಹುಡುಗರು ಮತ್ತು 34,473 ಹುಡುಗಿಯರು ಇಷ್ಟರವರೆಗೆ ಸೇರಿದ್ದಾರೆ.
- ♦ ಸಾಮಾಜಿಕ ಮಾಧ್ಯಮಗಳ ಮೂಲಕ 1,90,00,000 ಮಂದಿಗೆ ಅಹ್ಮದಿಯಾ ಸಂದೇಶ ತಲಪಿದೆ.
- ♦ ಎಂ.ಟಿ.ಎ. ಇಂಟರ್‌ನೇಶನಲ್ ಮೂಲಕ 73 ದೇಶಗಳ 1,80,00,000 ಮಂದಿಗೆ ಅಹ್ಮದಿಯಾ ಸಂದೇಶ ತಲಪಿದೆ.
- ♦ 2784 ಬುಕ್ ಸ್ಟಾಲ್‌ಗಳ ಮೂಲಕ 14,38,000+ ಮಂದಿಗೆ ಅಹ್ಮದಿಯಾ ಸಂದೇಶ ತಲಪಿದೆ.
- ♦ 51 ಭಾಷೆಗಳಲ್ಲಿ 4,09,400 ಪುಸ್ತಕಗಳು ಮತ್ತು ಕಿರುಹೊತ್ತಗೆಗಳು ಪ್ರಕಟಿಸಲ್ಪಟ್ಟಿವೆ.
- ♦ ಗಾಝಾ ಸಹಿತ 12 ಯುದ್ಧ ಪೀಡಿತ ದೇಶಗಳ 1,30,000 ಮಂದಿಗೆ ಹ್ಯುಮ್ಯಾನಿಟಿ ಫಸ್ಟ್ ಸಂಘ ಮೂಲಕ ನೆರವು ನೀಡಲಾಗಿದೆ.
- ♦ ನುಸ್ರತ್ ಜಹಾನ್ ಯೋಜನೆಯ ಮೂಲಕ 13 ದೇಶಗಳಲ್ಲಿ 40 ಆಸ್ಪತ್ರೆ ಮತ್ತು ಕ್ಲಿನಿಕ್‌ಗಳನ್ನು ತೆರೆಯಲಾಗಿದೆ.
- ♦ Review of Religions ಮಾಸಪತ್ರಿಕೆ ಸಾಮಾಜಿಕ ಮಾಧ್ಯಮ ಮೂಲಕ 10 ಮಿಲಿಯನ್ ಮಂದಿಗೆ ಮತ್ತು ವೆಬ್‌ಸೈಟ್ ಮೂಲಕ 2 ಮಿಲಿಯನ್ ಮಂದಿಗೆ ತಲಪಿದೆ.
- ♦ 4701 ಎಕ್ಸಿಬಿಷನ್ಸ್ 10,62,000 ಮಂದಿಗೆ ಸಂದೇಶ ತಲಪಿದೆ.
- ♦ ಎಂ.ಟಿ.ಎ.ಯಲ್ಲಿ 544 ಸಿಬಂದಿಗಳು ದುಡಿಯುತ್ತಿದ್ದಾರೆ.
- ♦ 7,97,800 ಉಚಿತ ಪುಸ್ತಕ ಮತ್ತು ಕಿರುಹೊತ್ತಗೆಗಳಿಂದ 1,94,00,000 ಮಂದಿ ಪ್ರಯೋಜನ ಪಡೆದಿದ್ದಾರೆ.
- ♦ "ಅಲ್–ಹಕಮ್" ಪತ್ರಿಕೆ ವಿವಿಧ ಮಾಧ್ಯಮಗಳ ಮೂಲಕ 10,00,000 ಮಂದಿಗೆ ಪ್ರಯೋಜನವಾಗಿದೆ.
- ♦ ಈ ಸಮ್ಮೇಳನದಲ್ಲಿ 43,460 ಮಂದಿ ಭಾಗವಹಿಸಿದ್ದಾರೆ.


(ಯು.ಕೆ.ಯಲ್ಲಿ ಜರಗಿದ 58ನೇ ವಾರ್ಷಿಕ ಸಮ್ಮೇಳನದಲ್ಲಿ 27–07–2024ರಂದು ಅಹ್ಮದಿಯಾ ಪಂಚಮ ಖಲೀಫರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಮಾಡಿದ ಭಾಷಣದಿಂದ)





**NEW PUBLICATIONS**
**Contact:**
**NAZARAT NASHRO - ISHA'AT**
**Sadr Anjuman Ahmadiyya**
**Qadian – 143516 (Punjab)**
**Phone: 01872 - 500970**

ಮಂಗಳೂರಿನ ಕೋಟೆಕಾರ್‌ನಲ್ಲಿ ಮೇ 25, 26ರಂದು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಅತ್ಫಾಲುಲ್ ಅಹ್ಮದಿಯಾ – ಬೆಂಗಳೂರು ಜಿಲ್ಲೆ ಇಜ್ತಿಮಾ ಜರಗಿತು.












Registered with the Registrar of Newspapers for India No. R.N. 27354/75
**Yugarashmi** Kannada Quarterly, **August - 2024.** Price : **Rs. 15/-**




ಮೂರನೇ ಮಹಾಯುದ್ಧದ ಭೀತಿ ದಿನೇ ದಿನೇ ವರ್ಧಿಸುತ್ತಿದೆ.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್
ಅಹ್ಮದಿಯಾ ಮುಸ್ಲಿಂ ಜಮಾಅತಿನ ಜಾಗತಿಕ ನೇತಾರ

#STOPWW3

Ahmadiyya Muslim Community, India

## ಜಾಗತಿಕ ಶಾಂತಿಯ ದೂತ ಮುಂದಿರಿಸಿದ ಶಾಂತಿ ಸ್ಥಾಪನೆಯ ಸುವರ್ಣ ತತ್ವಗಳು

1. ಸೃಷ್ಟಿಕರ್ತನನ್ನು ಅರಿಯಿರಿ
2. ಸಂಪೂರ್ಣ ನ್ಯಾಯಪಾಲನೆ ಸ್ಥಾಪಿಸಿರಿ
3. ಜಾಗತಿಕ ಏಕತೆಗೆ ಪ್ರೋತ್ಸಾಹ ಕೊಡಿರಿ
4. ಅಣ್ವಸ್ತ್ರವನ್ನು ಕೊನೆಗೊಳಿಸಿರಿ
5. ಆಯುಧ ವ್ಯಾಪಾರದಿಂದ ಅತಿಲಾಭ ಪಡೆಯುವುದನ್ನು ವರ್ಜಿಸಿರಿ
6. ಆರ್ಥಿಕ ಸಮಾನತೆಯನ್ನು ಸ್ಥಾಪಿಸಿರಿ ಮತ್ತು ಬಡತನವನ್ನು ತೊಡೆದುಹಾಕಿರಿ
7. ದೇಶದ ಏಳಿಗೆಗಾಗಿ ಪ್ರಯತ್ನಿಸಿರಿ
8. ಉಗ್ರವಾದವನ್ನು ತಿರಸ್ಕರಿಸಿರಿ
9. ಮನುಕುಲದ ಸೇವೆ ಮಾಡಿರಿ
10. ಪರಸ್ಪರರ ವಿಶ್ವಾಸಗಳನ್ನು ಆದರಿಸಿರಿ.

1800-103-2131 (Toll Free)

www.lightofislam.in
www.alislam.org

www.mta.tv
www.stopww3.co.uk

islaminind

islaminindia

Edited and Published by Muhammad Yusuf on behalf of Jamath Ahmadiyya at 10-23-1008/1,
Ist Floor, Ansari Road, Mangalore - 575 001. Typing by : U. Basheer Ahmad
Printed at 'Karavali Printers', Azizuddin Road, Mangalore on behalf of Jubilee Printing Press, Mangalore